ಜನಶಕ್ತಿ

ದುಡಿವ ಜನರ ಪ್ರಾಣಮಿತ್ರ

ಸಂಪುಟ 2 ಸಂಚಿಕೆ 1

ಜನವರಿ 06, 2008

ಕನ್ನಡ ವಾರಪತ್ರಿಕೆ

ರೂ. 5/-



ಬೆನಜಿರ್ ಭುಟ್ಟೋ ಹತ್ಯೆಯ ಹಿಂದೆ...?



ಗುಜರಾತ್ ಫಲಿತಾಂಶದ ಪಾಠ

ಹೊಸ್ಕೇರಾ : ದಲಿತರ ಮೇಲೆ ೂಮಾಲಿಕರ ದೌರ್ಜನ್ಯ

ರ್ಪದ ಅಧಿಕಾರಿಗಳು



ಮೈಸೂರು : ರೈತರನ್ನು ಚಟ್ಟಕ್ಕೇರಿಸಿದರು



ದ್ವೇಷ ಏಕೆ ಇವರ ಮೆದುಳಿನಲ್ಲಿದೆ?

ಆಕರ್ಷಕ ಕ್ಯಾಲೆಂಡರ್‌ನೊಂದಿಗೆ

ಚುಚ್ಚುಮದ್ದು

ಅಗತ್ಯವೇನು?

ಭೂಮಿ ಸ್ವಾಧೀನ ಮಾಡುವುದಿಲ್ಲವೆಂದು ಸರ್ಕಾರ ಸ್ಪಷ್ಟಪಡಿಸಿದೆ. ಹೀಗಾಗಿ ಭೂಸ್ವಾದೀನ ವಿರೋಧಿ ಸಮಿತಿಯ ಅಗತ್ಯವಾದರೂ ಏನಿದೆ.

- ಬುದ್ಧದೇವ ಭಟ್ಟಾಚಾರ್ಯ, ಪಶ್ಚಿಮ ಬಂಗಾಳ ಮುಖ್ಯಮಂತ್ರಿ,
ನಂದಿಗ್ರಾಮದ ಬೃಹತ್ ಬಹಿರಂಗ ಸಭೆಯಲ್ಲಿ

ಹೀಗೆ ಕೇಳಿಬಿಟ್ಟರೆ ಹೇಗೆ? ಅದೆಲ್ಲ ಬಹಿರಂಗವಾಗಿ ಹೇಳೋವಂಥದ್ದಲ್ಲ.

★

'ಆಂತರಿಕ ಸಂನ್ಯಾಸ?'

'ಪ್ರಾಣಾಯಾಮದಿಂದ ಆಂತರಿಕ ಸನ್ಯಾಸ ಲಭಿಸುತ್ತದೆ. ಪ್ರತಿಯೊಬ್ಬ ಯೋಗ ಸಾಧಕನೂ ಸನ್ಯಾಸವನ್ನು ಸಾಧಿಸಲು ಸಾಧ್ಯ'

- ಬಾಬಾ ರಾಮದೇವ ಮಹಾರಾಜ.

ಸರ್ಕಾರಕ್ಕೂ ಜನರಿಗೂ ಹೇಳದೆ ತಮ್ಮ ಕಂಪನಿಯ ಔಷಧಿಯಲ್ಲಿ ಮನುಷ್ಯನ ಮೂಳೆ ಸೇರಿಸುವುದರಿಂದ ಏನು ಲಭಿಸುತ್ತದೆ ಅಂತ ಹೇಳಲೇ ಇಲ್ವಲ್ಲಾ ಮಹಾರಾಜ್?

★

ಸುಸಂಸ್ಕೃತ?

"ಭಾರತದ ಅತ:ಸತ್ವವನ್ನು ಪ್ರತಿಬಿಂಬಿಸುವ ವೇದ ಉಪನಿಷತ್ತುಗಳನ್ನು ಅಧ್ಯಯನ ಮಾಡಿ ಸುಸಂಸ್ಕೃತರಾಗಬೇಕು..... ನಮ್ಮಲ್ಲಿನ ಬುದ್ಧಿಶಕ್ತಿಯನ್ನು ಹೆಚ್ಚಿಸಿಕೊಳ್ಳಲು ನಿತ್ಯ ಗಾಯಿತ್ರಿ ಮಂತ್ರ ಪಠಣ ಮಾಡಬೇಕು".

- ಮತ್ತೂರು ಕೃಷ್ಣಮೂರ್ತಿ
ಭಾರತೀಯ ವಿದ್ಯಾಭವನನದ ನಿರ್ದೇಶಕ

ವೇದ ಉಪನಿಷತ್ತು ಅಧ್ಯಯನ ಮಾಡದಿದ್ದರೆ 'ಸುಸಂಸ್ಕೃತ'ರಾಗುವುದಿಲ್ಲವೇ?

★

ದೇಶದ್ರೋಹಿಗಳು?

"ಕಮ್ಯೂನಿಸ್ಟರು ದೇಶದ್ರೋಹಿಗಳು ಅವರಿಗೆ ನಕ್ಸಲೀಯರ ನಂಟಿದೆ. ಅದನ್ನು ಸಮರ್ಥನೆ ಮಾಡಿಕೊಳ್ಳುವ ಜಾಯಮಾನ ಅವರದ್ದು. ರಾಜ್ಯದ ರಾಜಕೀಯದಲ್ಲಿ ಇಂತಹ ಕಾಂಡ ಕೊರೆಯುವ ಹುಳವೊಂದು ಇದೆ. ಇದನ್ನು ಕಿತ್ತು ಹಾಕಿ"

- ಡಿ.ವಿ.ಸದಾನಂದಗೌಡ
ರಾಜ್ಯ ಬಿಜೆಪಿ ಅಧ್ಯಕ್ಷ, ಬಾಗೇಪಲ್ಲಿಯಲ್ಲಿನ ಸಮಾರಂಭದಲ್ಲಿ

ವಾಜಪೇಯೀಜಿ ಬ್ರಿಟಿಷರಿಗೆ ಪತ್ರ ಬರೆದುಕೊಟ್ಟು ಸ್ವಾತಂತ್ರ್ಯ ಹೋರಾಟಗಾರರನ್ನು ಜೈಲಿಗೆ ಹಾಕಿಸಿದ್ದು ನೆನಪಿದೆಯೇ ಗೌಡಾಜಿ?

★

ಎಷ್ಟು ಖರ್ಚು

"ಮಾಜಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿಯವರ ನೇತೃತ್ವದ ಎನ್‌ಡಿಎ ಸರಕಾರ ಜಾರಿಗೆ ತಂದ ಚತುಷ್ಪಥ ರಸ್ತೆಗಳ ಅಭಿವೃದ್ಧಿಗೆ ಯುಪಿಎ ಸರಕಾರ ಅಗತ್ಯವಿರುವ ಅನುದಾನ ನೀಡಿ ಯೋಜನೆಯನ್ನು ಮುಂದುವರೆಸುವ ಬದಲು ರಸ್ತೆ ಪಕ್ಕದಲ್ಲಿ ಹಾಕಲಾಗಿರುವ ನಾಮಫಲಕಗಳನ್ನು ತೆಗೆದುಹಾಕಲು ಕೋಟ್ಯಾಂತರ ರೂ.ಗಳನ್ನು ಖರ್ಚು ಮಾಡಲಾಗುತ್ತಿದೆ"

- ಎಸ್.ಮಲ್ಲಿಕಾರ್ಜುನಯ್ಯ ಬಿಜೆಪಿ ಸಂಸದ.

ನಾಮಫಲಕ ತೆಗೆಯೋದಕ್ಕೆ ಕೋಟ್ಯಾಂತರ ರೂಪಾಯಿ ಖರ್ಚು ಮಾಡಬೇಕಾಗಿದ್ದರೆ ಇನ್ನು ಅದನ್ನು ಹಾಕಲು ಎಷ್ಟು ಖರ್ಚು ಮಾಡಿರಬಹುದು ವಾಜಪೇಯಿ ಸರ್ಕಾರ ಎಂಬ ಲೆಕ್ಕ ಸಿಕ್ತು ಬಿಡಿ!!!

★

'ನಾನೂ ಸ್ಪರ್ಧಿಯಾಗಿದ್ದೆ'

"ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗೆ ನಾನು ಸ್ಪರ್ಧಿಯಾಗಿದ್ದೆ. ಆದರೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯೂ ಜಾತಿ ಲಾಬಿಯನ್ನು ಒಳಗೊಂಡೇ ನಿರ್ಧಾರ ಆಗ್ತಿದೆ. ಗೌಪ್ಯತೆಯ ಪಾವಿತ್ರ್ಯವನ್ನು ಈ ಪ್ರಶಸ್ತಿ ಈಗ ಕಳೆದುಕೊಂಡಿದೆ. ಏಕೆಂದರೆ ಈ ಪ್ರಶಸ್ತಿ ಕುಂ.ವೀ ಅವರಿಗೇ ಬರ್ತದೆ ಅಂತ ಮೊದ್ಲೇ ಗೊತ್ತಿತ್ತು."

ಮೊಗಳ್ಳಿ ಗಣೇಶ್, ಬರಹಗಾರರು
ಕುಂ.ವೀರಭದ್ರಪ್ಪ ಅವರಿಗೆ ಪ್ರಶಸ್ತಿ ಬಂದ ಬಗ್ಗೆ

ಜಾಗತೀಕರಣದಿಂದ ದಲಿತರಿಗೆ ಬಾರಿ ಪ್ರಯೋಜನ ಅಂತ ಬರೆದಾಗಲೇ ತಮಗೆ ಪ್ರಶಸ್ತಿ ಬರಬೇಕಿತ್ತು ಬಿಡಿ.

★

ಬ್ರಾಹ್ಮಣರಲ್ಲವೇ?

"ಉಡುಪಿ ಶ್ರೀಕೃಷ್ಣ ಪೂಜೆಯ ಹಕ್ಕು ಅಷ್ಟಮಠಗಳಿಗೆ ಮಾತ್ರ ಸಂಬಂಧಿಸಿದೆ. ಬ್ರಾಹ್ಮಣರಿಗೂ ಈ ಅವಕಾಶ ಕೊಡಲು ಸಾಧ್ಯವಿಲ್ಲ. ಹೀಗಾಗಿ ದಲಿತರಿಂದ ಕೃಷ್ಣ ಪೂಜೆ ಮಾಡಿಸುವ ಪ್ರಶ್ನೆ ಉದ್ಭವಿಸದು"

- ಪೇಜಾವರ ಶ್ರೀ

ಅಷ್ಟಮಠಗಳ ಯತಿಗಳು ಬ್ರಾಹ್ಮಣರೋ ಅಲ್ಲವೋ ಅದನ್ನು ಮೊದಲು ಹೇಳಿ.

★

ಸಂಸ್ಕೃತಿಯ ಗುತ್ತಿಗೆದಾರರು

"ಕ್ರಿಸ್ತರು, ಮುಸ್ಲಿಮರು ಬೇರೆ ಕಡೆ ಹೋದರೆ ಅಲ್ಲಿನ ಸಂಸ್ಕೃತಿ ನಾಶ ಹೊಂದುತ್ತದೆ. ಆದರೆ ಹಿಂದುಗಳೂ ಅಲ್ಲಿಗೆ ಹೋದರೆ ಸಂಸ್ಕೃತಿ ಇನ್ನಷ್ಟು ಬೆಳವಣಿಗೆಯಾಗಿ ಅಭಿವೃದ್ಧಿ ಹೊಂದುತ್ತದೆ".

- ಕು.ಸೀ.ಸುದರ್ಶನ್
ಆರ್.ಎಸ್.ಎಸ್. ಸರ ಸಂಘಚಾಲಕ

ಇಂಥಾ ಹಸೀ ಹಸೀ.ಸುಳ್ಳು ಹೇಳುವುದು ಮತ್ತು ದ್ವೇಷ ಹರಡುವ ಸಂಸ್ಕೃತಿಯನ್ನು ನಿಮ್ಮಿಂದಾನೇ ಕಲೀಬೇಕು.

★

ಹೋರಾಟಕ್ಕೆ ತಿಲಾಂಜಲಿ

"ಸಮಾರಂಭದಲ್ಲಿ ಸುಮಾರು ೩ ಲಕ್ಷ ಮಂದಿ ಸೇರುವ ಅಂದಾಜಿದೆ. ಜನ ಸ್ವಯಂಸ್ಫೂರ್ತಿಯಿಂದ ಸ್ವಂತ ಖರ್ಚು ಮಾಡಿ ಇಲ್ಲಿಗೆ ಆಗಮಿಸುತ್ತಿದ್ದಾರೆ. ಉತ್ತರ ಪ್ರದೇಶದಲ್ಲಿ ಬಿಎಸ್‌ಪಿ ಅನುಸರಿಸಿದ ಮಾನದಂಡವೇ ಇಲ್ಲೂ ಮುಂದುವರಿಯಲಿದೆ. ಹೀಗಾಗಿ ಅಡುಗೆ ಮಾಡುವುದಕ್ಕೆ ಬ್ರಾಹ್ಮಣರನ್ನೇ ನಿಯೋಜಿಸಲಾಗಿದೆ".

- ಮುನಿಯಪ್ಪ
ಬಿಎಸ್‌ಪಿ ರಾಜ್ಯ ಪ್ರಧಾನ ಕಾರ್ಯದರ್ಶಿ, ಪಕ್ಷದ ರ್‍ಯಾಲಿ ಕುರಿತು
(ಈಗ ರಾಜ್ಯ ಅಧ್ಯಕ್ಷರು)

ಸಾಮಾಜಿಕ ಪರಿವರ್ತನೆಯ ಹೋರಾಟ ಮಣ್ಣು ಪಾಲಾಯ್ತಾ?

★

ಬಾಯ್ಮುಚ್ಚು ಅಂತ ಅರ್ಥ ಅಲ್ವಾ?

"ಸಾಹಿತಿ ಡಾ.ಯು.ಆರ್. ಅನಂತಮೂರ್ತಿ ಅವರು ರಾಜ್ಯದಲ್ಲಿ ಕಮ್ಯೂನಿಸ್ಟ್ ಪಕ್ಷದ ನೇತೃತ್ವವಹಿಸಿ ನೇರವಾಗಿ ರಾಜಕೀಯ ಅಖಾಡಕ್ಕೆ ಇಳಿಯಲಿ"

- ಡಿ.ವಿ.ಸದಾನಂದಗೌಡ

ಅಂದರೆ ಸಾಹಿತಿಗಳು ರಾಜಕೀಯದ ಬಗೆಗೆ ಮಾತಾಡಬಾರದು, ಕೋಮುವಾದವನ್ನು ವಿರೋಧಿಸಬಾರದು ಅಂತ ತಾನೆ ಅರ್ಥ?

ಇದ್ದದ್ದು ಇದ್ದಾಂಗ...

ಬರಮಾಡಿಕೊಳ್ಳಲು ಸಿದ್ಧ

"ತಸ್ಲೀಮಾಗೆ ಕೇಂದ್ರ ಸರಕಾರ ರಕ್ಷಣೆ ಒದಗಿಸುವ ಭರವಸೆ ನೀಡಿದಲ್ಲಿ ಕೋಲ್ಕೊತ್ತಾಕ್ಕೆ ಮರಳುವ ಇಚ್ಛೆ ವ್ಯಕ್ತಪಡಿಸಿರುವ ಆಕೆಯನ್ನು ರಾಜ್ಯಕ್ಕೆ ಬರಮಾಡಿಕೊಳ್ಳಲು ನಾವು ಸಿದ್ಧ"

ಜ್ಯೋತಿಬಸು
ಹಿರಿಯ ಸಿಪಿಐ(ಎಂ) ನೇತಾರ

★

"ನನ್ನ ನಾಯಕತ್ವದಲ್ಲಿ..."

"ನನ್ನ ನಾಯಕತ್ವದಲ್ಲಿ ಅಧಿಕಾರಕ್ಕೆ ಮರಳಲು ಬಿಎಸ್‌ಪಿಗೆ ಉಜ್ವಲ ಅವಕಾಶಗಳಿವೆ. ನನ್ನ ನಾಯಕತ್ವದಡಿ ಬಿಎಸ್‌ಪಿ ದೇಶದ ಆಡಳಿತ ಕೈಗೆತ್ತಿ ಕೊಳ್ಳುವುದೆಂದು ನಾನು ನಿರೀಕ್ಷಿಸುತ್ತೇನೆ."

ಮಾಯಾವತಿ
ಬಿಎಸ್‌ಪಿ ನಾಯಕಿ.

ಸಂಪಾದಕೀಯ

ದ್ವೇಷ ಏಕೆ ಇವರ ಮೆದುಳಿನಲ್ಲಿದೆ ?

'ಪ್ರೀತಿ ಏಕೆ ಭೂಮಿ ಮೇಲಿದೆ' ಚಿತ್ರದ ಒಂದು ಹಾಡಿನ ಸುತ್ತ ವಿವಾದವೆಬ್ಬಿಸಿ ಬೆಂಗಳೂರು ನಗರದ ಅಶ್ವಿನಿ ಸ್ಟುಡಿಯೋ ಮೇಲೆ 'ಶ್ರೀರಾಮಸೇನೆ ಗೂಂಡಾಗಳು ದಾಳಿ ಮಾಡಿಸಿದ್ದು ಖಂಡನೀಯ. ಇದು ಅಭಿವ್ಯಕ್ತಿ ಸ್ವಾತಂತ್ರ್ಯದ ಮೇಲಿನ ನಗ್ನ ಹಲ್ಲೆ.

ಈ ಚಿತ್ರದಲ್ಲಿನ ಹಾಡು 'ಸುಳ್ಳೇ ಸುಳ್ಳು'ವಿನಲ್ಲಿ ರಾಮ ಸೀತಾಮಾತೆಯನ್ನು ಅವಹೇಳನ ಮಾಡಲಾಗಿದೆ. ರಾಮಾಯಣವೇ ಸುಳ್ಳು ಎಂದು ಹೇಳಲಾಗಿದೆ ಎಂಬುದು ಅವರ ಕೃತ್ಯದ ಸಮರ್ಥನೆಗೆ ಮಾಡುವ ಆರೋಪ. ಇಂತಹ ಅಭಿಪ್ರಾಯ ಇಟ್ಟುಕೊಳ್ಳಲು ಅವರು ಸರ್ವ ಸ್ವತಂತ್ರರು! ಆದರೆ ಆ ಅಭಿಪ್ರಾಯವನ್ನು ಇನ್ನೊಬ್ಬರ ಮೇಲೆ ಹೇರಲು ಮಾತ್ರವಲ್ಲ ತಮ್ಮ ಇಚ್ಛೆಗೆ ವಿರುದ್ಧವೆಂದು ತೀರ್ಮಾನಿಸಿ ದಾಳಿ ನಡೆಸಲು ಇವರ್‍ಯಾರು? ಇವರಿಗೆ ಯಾವ ನ್ಯಾಯಾಲಯ ನಿರ್ದೇಶನ ನೀಡಿದೆ? ತಮಗಿಷ್ಟವಿಲ್ಲ ಎಂದಾಕ್ಷಣ ಅದನ್ನು ನಾಶ ಮಾಡಲು ಹೋಗುವುದ ಫ್ಯಾಸಿಸ್ಟ್ ಕ್ರಮವಲ್ಲದೇ ಮತ್ತೇನಾದೀತು?

ಪ್ರಜಾಪ್ರಭುತ್ವದ ಸಮಾಜದಲ್ಲಿ ಅಥವಾ ಎಲ್ಲೇ ಆಗಲಿ ಅಭಿಪ್ರಾಯಗಳು, ಭಿನ್ನಾಭಿಪ್ರಾಯಗಳಿರುವುದು ಸಹಜ. ತಮಗೆ ತಪ್ಪು ಎನ್ನಿಸಿದರೆ ಅದನ್ನು ಖಚಿತ ವಿವರಣೆ ಮೂಲಕ ಅಭಿವ್ಯಕ್ತಿ ಮಾಡಬಹುದು. ಅಂತಹ ಒಂದು ಅಭಿವ್ಯಕ್ತಿ ಸಂವಾದವನ್ನು ಹುಟ್ಟುಹಾಕಿ ಆ ಸಂಘರ್ಷದಲ್ಲಿ ಹೊಸ ಅರಿವು ಮೂಡಬಹುದು. ಆದರೆ ತಾವೇ ಆರೋಪಿಸಿ, 'ವಿಚಾರಣೆ'ಯನ್ನು 'ನಡೆಸಿ' ತೀರ್ಮಾನವನ್ನು ಘೋಷಿಸಿ ಅದನ್ನು ಜಾರಿಗೊಳಿಸುವ ನ್ಯಾಯಾಧೀಶರಾಗಿ, ಪೊಲೀಸರೂ ಆಗುವ ಪಾತ್ರವನ್ನು 'ದೊಣ್ಣೆನಾಯಕರು' ಸೃಷ್ಟಿಸಿಕೊಂಡಿದ್ದಾರೆ. ಒಬ್ಬೊಬ್ಬರು ಅನ್ನಿಸಿದ್ದಕ್ಕೆ ಅಂಟಿಕೊಂಡು ಈ ರೀತಿಯಲ್ಲಿ ಜಾರಿಗೆ ಹೊರಟರೆ ಅದು ನಾಗರೀಕ ಸಮಾಜವಾದೀತೆ? ಪ್ರಜಾಪ್ರಭುತ್ವ ಉಳಿದೀತೇ? ಇವರು ರಾಮನ ಭಕ್ತರು ಎಂದು ಹೇಳಿಕೊಳ್ಳಲು ಏನಾದರೂ ಕಿಂಚಿತ್ತಾದರೂ ನೈತಿಕತೆ ಇದೆಯೇ? ಇವರಿಗೆ ರಾಮನೂ ಬೇಡ, ಸೀತೆಯೂ ಬೇಡ, ರಾಮಾಯಣದ ಬಗ್ಗೆ ವಸ್ತುನಿಷ್ಠವಾಗಿ ಅರಿಯುವುದೂ ಬೇಡ, ತಮ್ಮ ನಂಬಿಕೆಗೆ ಆಘಾತವಾಗಿದೆ, ಹಿಂದುಗಳ ನಂಬಿಕೆಗೆ ಆಘಾತವಾಗಿದೆ ಎಂದೆಲ್ಲಾ ಬಡಬಡಿಸುತ್ತಾರೆ. ಇವರೇ ಇನ್ನೊಬ್ಬರ ನಂಬಿಕೆಗಳ ಮೇಲೆ ಧಾಳಿ ಮಾಡುತ್ತಾರೆ. ಧಾಳಿ ಮಾಡುವುದನ್ನು ಮೂಲಭೂತ ಹಕ್ಕು ಎಂದು ಭಾವಿಸಿದ್ದರೆ ಅದಕ್ಕೆ ತಕ್ಕ ಶಾಸ್ತಿ ಮಾಡಬೇಕಾಗುತ್ತದೆ.

ಇಂತಹ ಧಾಳಿಯ ಘಟನೆಗಳು ದೇಶದಲ್ಲಿ ಹಲವಾರು ನಡೆದಿವೆ. ತೀರಾ ಇತ್ತೀಚೆಗೆ ಈ ದಿನಗಳಲ್ಲಿಯೇ 'ಶಿವಸೇನಾ' ಎಂಬ ಫ್ಯಾಸಿಸ್ಟ್ ಮಾದರಿಯ ಸಂಘಟನೆಯವರು ಖ್ಯಾತ ಕಲಾವಿದ ಎಂ.ಎಫ್.ಹುಸೇನರವರ ಕಲಾಚಿತ್ರಗಳನ್ನು ದೆಹಲಿಯಲ್ಲಿ ಧ್ವಂಸಗೊಳಿಸಿದ್ದಾರೆ. ಇದು ಹೊಸತೇನಲ್ಲ. ಹಿಂದೆಯೂ ಅವರ ಚಿತ್ರಗಳ ಮೇಲೆ ಮನೆಯ ಮೇಲೆ ಧಾಳಿ ನಡೆದಿದೆ. ಭಾರತ, ಪಾಕಿಸ್ತಾನ ಕ್ರಿಕೆಟ್ ಆಡುವುದನ್ನು ಕ್ರೀಡಾ ಸ್ಫೂರ್ತಿಯಿಂದ ನೋಡದೇ, ಕೋಮು ಆಧಾರದಲ್ಲಿ ವ್ಯಾಖ್ಯಾನಿಸಿ ಅದನ್ನು ವಿರೋಧಿಸಿದ ಕಡುಮೂರ್ಖರು. ಪಿಚ್ ಅಗೆದು ತಮ್ಮ ವಿಕೃತ ಮನೋಭಾವ ತೋರಿಸಿದ್ದರು. ಅದು ದೆಹಲಿ, ಬಾಂಬೆ, ಕರ್ನಾಟಕಗಳಲ್ಲಿ ಹಲವಾರು ಉದಾಹರಣೆಗಳಿವೆ.


ಇತ್ತೀಚೆಗೆ ಕರ್ನಾಟಕದಲ್ಲಿ ಇಂತಹ ಘಟನೆಗಳು ಮರುಕಳಿಸತೊಡಗಿವೆ. ತೀರಾ ಇತ್ತೀಚೆಗೆ 'ಸೇತುಸಮುದ್ರಂ' ವಿಷಯದಲ್ಲಿ ಸಂಘಪರಿವಾರ ವಿವಾದವೆಬ್ಬಿಸಿದಾಗ ಈ ನಿಲುವನ್ನು ವಿರೋಧಿಸಿದ ತಮಿಳುನಾಡು ಮುಖ್ಯಮಂತ್ರಿ, ಕರುಣಾ ನಿಧಿಯವರ ಮಗಳ ಮನೆ ಮೇಲೆ ಧಾಳಿ ಮಾಡಿದ್ದು ಇದೇ ಶ್ರೀರಾಮಸೇನೆಯೇ ಮತ್ತು ಇದೇ ಕಾರಣಕ್ಕೆ ಬಸ್‌ನಲ್ಲಿದ್ದ ಇಬ್ಬರು ಪ್ರಯಾಣಿಕರನ್ನು ಸುಟ್ಟಿದ್ದು ಇದೇ ಕುಖ್ಯಾತ ಶ್ರೀರಾಮಸೇನೆಯೇ. ಇಂತಹ ಶ್ರೀರಾಮಸೇನೆ, ಹಿಂದೂ ಯುವಸೇನೆ, ಶಿವಸೇನಾಗಳು ಸಂಘಪರಿವಾರದ ವಿಕೃತ ಶಿಶುಗಳು ಎಂಬುದಕ್ಕೆ ಹೆಚ್ಚಿನ ವಿವರಣೆ ಬೇಕಿಲ್ಲ. ಅಸಹನೆ, ಅಸಹಿಷ್ಣುತೆ, ದ್ವೇಷವನ್ನು ಹರಿಯಬಿಡಲಾಗುತ್ತಿದೆ.

ಈ ಸಿನಿಮಾದ ಹಾಡಿನಲ್ಲಿ 'ರಾಮಾಯಣ'ದ ಮಾತನ್ನೆತ್ತಿ ಧಾಳಿ ಮಾಡಿರುವುದು ಆರ್.ಎಸ್.ಎಸ್.ನ ಅಜೆಂಡಾದ ಭಾಗ. ಜನತೆಯ ಯಾವುದೇ ಪ್ರಶ್ನೆಗಳ ಆಧಾರದಲ್ಲಿ, ರಾಜಕೀಯ ಹೋರಾಟ ನಡೆಸದೇ 'ಸೇತುಸಮುದ್ರಂ' ವಿವಾದ ಹುಟ್ಟಿಸಿ ಅದಕ್ಕೆ ಜೋತುಬಿದ್ದಿರುವ ಬಿಜೆಪಿ ಪರಿವಾರದ ಈ ಕೋಮುವಾದಿಗಳು ಮುಂದಿನ ಚುನಾವಣೆಯವರೆಗೂ ಈ ವಿವಾದವನ್ನು ಜೀವಂತವಾಗಿಡಲು ಬಯಸುತ್ತಾರೆ. ಅದಕ್ಕಾಗಿ ಜನರ ಮುಗ್ಧ ಭಕ್ತಿ, ಧಾರ್ಮಿಕ 'ನಂಬಿಕೆ'ಗಳ ದುರ್ಬಳಕೆ ಮಾಡುತ್ತಿದ್ದಾರೆ. 'ಶ್ರೀರಾಮ ಸೀತಾ, ಸೇತು ವಿಷಯಗಳನ್ನು ಜೀವಂತ ಇಡಲು ಹೆಣಗುತ್ತಿದ್ದಾರೆ.

ಅಧಿಕಾರ ವಂಚಿತ ತಾನೆಂದೂ ಮತ್ತು ತಾನೊಂದೇ ಬಹುಮತ ಪಡೆದು ಸರಕಾರ ಹಿಡಿಯಬೇಕೆಂಬ ಚಡಪಡಿಕೆ, ಧಾವಂತದಲ್ಲಿರುವ ಬಿಜೆಪಿ ಇದಕ್ಕೆ ಮೂಲ ನೆಲೆ ಒದಗಿಸಲು ರಾಜ್ಯದಾದ್ಯಂತ ಹಲವಾರು ಪ್ರಯತ್ನಗಳನ್ನು ನಡೆಸಿದೆ. ಈ ಒಂದು ತಿಂಗಳಲ್ಲಿಯೇ, ಬೆಂಗಳೂರು, ತಿಪಟೂರು, ಇಂಡಿ, ಭಂಟ್ವಾಳ ಕ್ರಾಸ್, ಬೆಳ್ತಂಗಡಿ ಮುಂತಾದೆಡೆ ಕೋಮುಗಲಭೆ ಹುಟ್ಟುಹಾಕಿದೆ. ಅಲ್ಪಸಂಖ್ಯಾತರ ಮೇಲೆ ಧಾಳಿ ನಡೆಸುತ್ತಿದೆ, ಇನ್ನೂ ಹೆಚ್ಚಾಗಲಿವೆ. ಸ್ವಾಭಿಮಾನ ಘೋಷ್, ಬೈಠಕ್ ಸಹನಡೆದಿವೆ.

ಆತಂಕದ ಸಂಗತಿಯೆಂದರೆ ಇಂತಹ ಧಾಳಿಯ ಘಟನೆಗಳು ನಡೆದಾಗ ನಿಷ್ಠುರ ಕಾನೂನುಕ್ರಮ ಜರುಗಿಸಬೇಕಾದ ಪೊಲೀಸರು ಕ್ರಮವಹಿಸದೇ ಹಾಗೆ ಬಿಡುವುದು! ಇಬ್ಬರ ಸಜೀವದಹನ, ಹಲ್ಲೆಯ ಘಟನೆಗಳಲ್ಲಿ ಭಾಗಿಯಾದವರ ಮೇಲೆ ಹಾಗೂ ಆ ಸಂಘಟನೆಯ ಹೆಸರು ಬಹಿರಂಗಗೊಳಿಸಲು ಪೊಲೀಸರು ಮೀನಮೇಷ ಎಣಿಸಿದ್ದರು. ಈಗಲೂ ಧಾಂಧಲೆ, ಧಾಳಿ, ವಾಗ್ವಾದ ನಡೆಯುವಾಗಲೂ ಕಾನೂನು ಕ್ರಮ ಕೈಗೊಳ್ಳಬೇಕಾದ ಹೊಣೆ ಉಳ್ಳವರು ಎಂಬ ಕನಿಷ್ಟ ಪ್ರಜ್ಞೆಯೂ ಇಲ್ಲದೇ ಅಥವಾ ಮೌನವಹಿಸಿ ಬೆಂಬಲ ನೀಡುವವರಂತೆ ಕೈಕಟ್ಟಿ ಪ್ರೇಕ್ಷಕರಾಗಿ ನಿಂತದ್ದು ಆತಂಕಕಾರಿ. ಧರ್ಮ, ದೇವರ ಹೆಸರಿನಲ್ಲಿ ಪುಂಡಾಟಿಕೆ ನಡೆಸುವ ಈ ಖಾವಿ ಪಡೆಗಳ ಮೇಲೆ ಬಾಕಿ ಪಡೆಗಳು 'ಸ್ನೇಹ ದೃಷ್ಟಿ' ಬೀರಿದರೆ ಅಥವಾ ಕೋಮುಗಲಭೆಗಳಲ್ಲಿ ಗಲಭೆಕೋರರ ಪರವೇ ಪಕ್ಷಪಾತದ ಕ್ರಮವಹಿಸಿದರೆ ಆಗಬಹುದಾದ ಅನಾಹುತಗಳಿಗೆ ಗುಜರಾತ್ ಒಂದು ಜ್ವಲಂತ ಸಾಕ್ಷಿ, ಅಂತಹದ್ದರ ತುಣುಕು ಎಂಬಂತೆ ಮಂಗಳೂರು, ಕೊಡಗಿನಂತಹ ಕಡೆ ನೋಡಿದ್ದಾರೆ. ಆಡಳಿತದ 'ಖಾಕಿ' 'ಖಾವಿ'ಯ ವೈರಸ್ ಘಾಟಿಗೆ ಬಲಿಯಾಗುವುದು ಪ್ರಜಾಪ್ರಭುತ್ವಕ್ಕೆ ಹಾನಿಕಾರಕ.

ಈಗ ನಾಗರೀಕರಿಗೆ ಜವಾಬ್ದಾರಿ ಇರುವ ಯಾವ ಜನಪ್ರತಿನಿಧಿಗಳ ಸರ್ಕಾರವಿಲ್ಲ. ಮೇಲಾಗಿ ಚುನಾವಣೆಗೆ ಎಲ್ಲರ ತಾಲೀಮು ಬೇರೆ. ಹೀಗಾಗಿ ಆಡಳಿತ ಹೊಣೆಗಾರಿಕೆ ಬಹಳ ಹೆಚ್ಚಿನದ್ದಾಗಿದೆ. ರಾಜ್ಯಪಾಲರು ಜನತಾದರ್ಶನ ಮುಗಿಸಿಬಿಟ್ಟರೆ ಮುಗಿಯಿತು ಎಂದು ಭಾವಿಸದೇ ಸಂವಿಧಾನದ ಆಶಯ, ನಿರ್ದೇಶನಗಳ ಜಾರಿಗೆ ಮುಂದಾಗಲಿ. ಅಭಿವ್ಯಕ್ತಿ ಸ್ವಾತಂತ್ರ್ಯ ನಾಶಗೊಳಿಸಬಯಸುವವ ವಿರುದ್ಧ ಪ್ರಜ್ಞಾವಂತರು ಧ್ವನಿ ಎತ್ತಬೇಕು.



■ ಎಸ್.ವೈ.ಗುರುಶಾಂತ್

ಸಂಕಟಗಳ ಮೂಟೆ ಹೊತ್ತು ಬರುವವರ ಎದುರಿನಲ್ಲಿ

ದರ್ಪದ ಅಧಿಕಾರಸ್ತರು

ರಾಜ್ಯಪಾಲ ರಾಮೇಶ್ವರ್ ಠಾಕೂರರು 'ಜನತಾದರ್ಶನ'ಗಳನ್ನೇನೋ ನಡೆಸುತ್ತಿದ್ದಾರೆ. ಪ್ರತಿಬಾರಿಯೂ ಅಲ್ಲಿ ನೆರೆವ ನೊಂದವರು ಸಾವಿರಾರು. ಒಬ್ಬೊಬ್ಬರದೂ ಒಂದೊಂದು ಅಹವಾಲು. ಎಲ್ಲಾದರೂ ಒಂದು ಉದ್ಯೋಗ, ಬದುಕು ನೆಲೆ ಒದಗಿಸುವಂತೆ ಅಂಗವಿಕಲರ ಅಳಲು, ತಮಗೊಂದು ಸೂರು, ರಸ್ತೆ, ನೀರು, ಬಾರದ ವೃದ್ಧಾಪ್ಯವೇತನ. ಶಸ್ತ್ರ ಚಿಕಿತ್ಸೆಗೆ ಸಹಾಯ ಕೋರಿಕೆ..... ಹೀಗೆ ಹಲವು ಹನ್ನೆರಡು ವಿವಿಧ ಸಮಸ್ಯೆಗಳ ಮೂಟೆ ಹೊತ್ತು ಬಂದವರೇ.

ರಾಜ್ಯಪಾಲರ ಜೊತೆಗೆ ಅವರ ಸಲಹೆಗಾರರು ಅರ್ಥಾತ್ ಸಚಿವ ಸಂಪುಟ, ಸಂಬಂಧಿಸಿದ ಅಧಿಕಾರಿಗಳು, ಎಡ-ಬಲ ಅವರಿಂದಲೂ ಮಾತಿನ ಭರವಸೆ, ಅರ್ಜಿ 'ಡಬ್ಬಿಗೆ' ಡ- ಬಿನ್‌ಗೆ'. ಅಲ್ಲಿದ್ದ ಸರತಿ ಮುಗಿಯುವುದಿಲ್ಲ. ಹಾಗೆ ಸಮಸ್ಯೆಗಳೂ....

ಹೀಗೆ ಬರುವವರು ತಮ್ಮೂರಿನಲ್ಲಿ ಸರ್ಕಾರದ ಅಧಿಕಾರಿಗಳನ್ನು ಎದುರು ಕಂಡ ಜನನಾಯಕರನ್ನು ಅವಲತ್ತುಕೊಂಡು, ಕಛೇರಿಗಳ ಮೆಟ್ಟಿಲನ್ನು ಹತ್ತಿ ಇಳಿದು ಮೆಟ್ಟು



ಈ ಅಹವಾಲು ಬರೀ ಕಿನ್ನರಿಯೇ?

ಸವೆಸಿಕೊಂಡವರೇ ಅತ್ಯಧಿಕ. ಹೀಗೆ ನೂರಾರು ಕಿ.ಮೀ.ಗಳನ್ನು ಸವೆಸಿ ಆಸೆ ಹೊತ್ತು ಬಂದವರಿಗೆ ಸಾಂತ್ವನ, ಪರಿಹಾರ ಸಿಕ್ಕಿತೇ? ಸಿಕ್ಕರೆ ಹೀಗೇಕೆ ಅಲೆಯುತ್ತಿದ್ದರು. ಇಲ್ಲಿಗೇಕೆ ಬರುತ್ತಿದ್ದರು. ಇಂತಹ ಸಾಲುಗಳು, ಅರ್ಜಿಗಳು, ಸರ್ಕಾರದ ಆಡಳಿತಯಂತ್ರದ ವೈಫಲ್ಯಗಳನ್ನೇ ಸಾರುತ್ತವೆ. ಅವು ಜನಪ್ರಿಯತೆಯ ಮಾನದಂಡಗಳು.

ಆಕೆ ಹೊರಗೆ ಕಾಲಿಟ್ಟರೆ
ಬದುಕೇ ಬೀದಿ ಮೇಲೆ


ಮೊನ್ನೆ ನೋಡಿ.... ದಿಕ್ಕು ದೆಶೆಯಿಲ್ಲದ ಮಹಿಳೆಯೊಬ್ಬಾಕೆ ಅಲ್ಲಿಗೆ ಬಂದಿದ್ದಳು. ಆಕೆ ಅನಿವಾರ್ಯವಾಗಿ ದೇವಸ್ಥಾನದ ಗುಡಿಯ ಒಂದು ಸಣ್ಣ ಕೋಣೆಯಲ್ಲಿ ವಾಸವಾಗಿದ್ದಾಳೆ. ತವರು ಮನೆಯವರು ಕೊಡುವ ಬಿಡಿಗಾಸಿನಲ್ಲಿ ಗಂಜಿ ಕಾಣಬೇಕು. ಆದರೀಗ ವಾಸದ ಕೊಠಡಿ ಖಾಲಿ ಮಾಡಲು ದೇವಸ್ಥಾನದ ಮಂಡಳಿ ತಾಕೀತು ಮಾಡುತ್ತಿದೆ. ಆಕೆಗೆ ಹೊರಗೆ ಕಾಲಿಟ್ಟರೆ ಬದುಕೇ ಬೀದಿಯ ಮೇಲೆ. ನಿತ್ಯ ಆರಾಧಿಸುವ ದೇವರೂ ಇದನ್ನು ತಪ್ಪಿಸಲಾರ ಎಂಬುದು ಆಕೆಗೆ ಖಾತ್ರಿಯಾಗಿ ಗೊತ್ತು. ಅಲ್ಲಿ ಆ ಊರಿನಲ್ಲಿ ಸರ್ಕಾರದ 'ದೇವರುಗಳೂ' ಕೈಬಿಟ್ಟಾಗ ನೆನಪಾದದ್ದು ರಾಜ್ಯಪಾಲರು, ದೊಡ್ಡ ಸಾಹೇಬರು. ಸರ್ಕಾರದ ಕೆಲಸ ದೇವರ ಕೆಲಸ ಎಂದು ಬೋರ್ಡ್ ಹಾಕಿಕೊಂಡಿದ್ದವರ ಬಳಿ ಬಂದು ದೈನೇಶಿಯಾಗಿ ಕೈಮುಗಿದು ಅರ್ಜಿ ಸಲ್ಲಿಸಿ 'ಆಶ್ರಯ ಮನೆ' ಕೇಳಿದಳು. ರಾಜ್ಯಪಾಲರು 'ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ'ಕ್ಕೆ ಸೈಟ್ ಕೇಳಿ ಅರ್ಜಿ ಹಾಕಲು ಹೇಳಿದರು. ಆಕೆಗೆ ಅರ್ಥವಾಗಲಿಲ್ಲ, ದೊಡ್ಡ ಸಾಹೇಬರ ದೊಡ್ಡ ಮಾತುಗಳು ಸಣ್ಣ ಹೃದಯದೊಳಗೆ ಇಣುಕಿ ಹಾಕಲಿಲ್ಲ?.... ಬುದ್ಧಿ ತಿಳಿದವರು ಆಕೆಗೆ ತಿಳಿ ಹೇಳಿದರು. ಈಗ ಆಕೆ ರಾಷ್ಟ್ರಪತಿ ಭವನಕ್ಕೆ ಹೋಗಲು ತಾಕತ್ತಿಲ್ಲ, ಕಾಲು ಸೋತಿವೆ. ಕೊನೆಗೆ ಅವರೂರಿಗೆ ಹೋಗಲು ಕೂಡ.... ಶತ್ರುವಿನೆದೆರು ಗೆದ್ದಾತ ಇಲ್ಲಿ ಸೋತುಬಿಟ್ಟ

ಇನ್ನೊಬ್ಬಾತನದೂ ಇದೇ ಕಥೆಯಂತೆ. ಕೋಲಾರದ ತುಳಸಿರಾಮ್ ಆತ ಯೋಧ, ಊರಲ್ಲಿ ಇದ್ದದ್ದು ಒಂದು ಎಕರೆ ಜಮೀನು, ಅಪ್ಪ, ಅಮ್ಮಗೆ ಅದೇ ಆಶ್ರಯ. ಆತನ ಕೇಳಿಕೆ ಒಂದೇ. ತಮ್ಮದೇ ಜಮೀನು ಈಗ ಸರ್ಕಾರದ ಗೋಮಾಳದ ಜಮೀನಾಗಿ ಪರಿವರ್ತನೆಯಾಗಿಬಿಟ್ಟಿದೆ! ದಾಖಲೆಗಳು ಎಲ್ಲವೂ ಇವರದ್ದೇ ಎನ್ನುವುದನ್ನು ಸಾರುತ್ತವೆ. ಈ ನಡುವೆ ಏನೋ 'ಚಮತ್ಕಾರ' ಸಂಭವಿಸಿ ಬದಲಾಗಿಬಿಟ್ಟಿದೆ. ಆದ್ದರಿಂದ ಈ ಎಲ್ಲಾ ಮೂಲದಾಖಲೆ ಪರಿಶೀಲಿಸಿ ಕಬಳಿಸಲಿರುವ ತಮ್ಮ ಜಮೀನನ್ನು ತಮ್ಮ ಹೆಸರಿಗೆ ಖಾತ್ರಿಪಡಿಸಿ ದಾಖಲೆಕೊಡಲು ತಮ್ಮೂರಿನ ಅಧಿಕಾರಿಗಳಿಗೆ ಮಾತು ಹೇಳಬೇಕು, ಸೂಚಿಸಬೇಕು ಎಂದ. ರಾಜ್ಯಪಾಲರ ಸಲಹೆಗಾರರೇನೋ ತಲೆದೂಗಿದರು. 'ಆಯ್ತು ಹೇಳಪ್ಪ' ಎಂದು ಮುಂದಿನ ದಾರಿ ತೋರಿಸಿದರು. ಹೀಗೆ ಅರ್ಜಿ ಬುಟ್ಟಿಗೆ ತುಂಬಿದರೆ ಏನಾದೀತು? ಯುದ್ಧದಲ್ಲಿ ಶತ್ರುವಿನೆದುರು ಹೋರಾಡಿ ಬದುಕಿ ಗೆದ್ದು ಬಂದಿದ್ದಾತ ಹ್ಯಾಪ ಮೋರೆಹಾಕಿ ದಾರಿ ಕಾಣದೇ ಸೋತಿದ್ದ. ' ನಾನು ಪ್ರಧಾನಿ ಮನಮೋಹನ್‌ಸಿಂಗ್‌ರಿಗೆ ಬರೆದಿದ್ದೆ, ಅವರಿಂದ ಉತ್ತರ ಬಂತು. ರಾಜ್ಯ ಸರ್ಕಾರಕ್ಕೆ ನಿರ್ದೇಶನ ನೀಡಿದ್ದರು. ಆದರೆ ಈ ವಿಷಯ ರಾಜ್ಯಪಾಲರಿಗೆ ಹೇಳಲೂ ಅಧಿಕಾರಿಗಳು ಬಿಡದೇ ಹೊರ ದೂಡಿದರು' ಎಂದು ಅಲ್ಲಿದ್ದವರಿಗೆ ಹೇಳಿದ. ಕೇಳಿದವರು ಸ್ವಲ್ಪ ಕುಗ್ಗಿದರಾದರೂ 'ಸಾಹೇಬರು ತಮಗೆ ಹಂಗೆ ಮಾಡಲಿಕ್ಕಿಲ್ಲ' ವೆಂದು ತಾವು ಕಾಯುತ್ತಿರುವುದಕ್ಕೆ ಅರ್ಥ ತುಂಬಿಕೊಳ್ಳಲು ಆಕಾಶ ನೋಡಿದರು.

ಹೀಗೆ ಅವಲತ್ತುಕೊಂಡು ಬರುವವರಿಗೆ 'ಪರಿಹಾರ' ತೋರಿಸುವ ಜನತಾದರ್ಶನ'ದ ಪ್ರದರ್ಶನಗಳಿಂದ ಏನು ಸಾಧ್ಯ? ಎಂತಹ ಸಾಧನೆ! ಒಂದೋ 'ಸಾಹೇಬರು' ಜನರಿಗೆ ಹತ್ತಿರವಾಗಬೇಕು.... ಒಂದಡಿ, ಎರಡಡಿ

ಪುಟ 4ಕ್ಕೆ

ಧನಲಕ್ಷ್ಮಿಯೋ, ವೆಂಕಟರಮಣನೋ ಅಥವಾ....?



ಹೊಸ ವರ್ಷ ಬಂತು. ಈಗ ಹೊಸ ಡೈರಿ ಕಾಲೆಂಡರ್‌ಗಳಿಗೆ 'ಸುಗ್ಗಿ'ಯ ಕಾಲ. ನಾನಾ ನಮೂನೆಯ ವಿಧ ವಿಧದ ಕ್ಯಾಲೆಂಡರ್‌ಗಳು ಬಿಡುಗಡೆಯಾಗುತ್ತಿವೆ.

ಕ್ಯಾಲೆಂಡರ್ ಅಂದ ಕೂಡಲೇ ಸಾಮಾನ್ಯವಾಗಿ ನಮಗೆ ತತ್‌ಕ್ಷಣ ನೆನಪಿಗೆ ಬರುವ ಚಿತ್ರ ಎಂದರೆ 'ಧನಲಕ್ಷ್ಮಿ' ತಾವರೆ ಎಲೆಯ ಮೇಲೆ ಕೂತು ಒಂದು ಕೈಯಿಂದ ಚಿನ್ನದ ನಾಣ್ಯಗಳ ಮಳೆ ಸುರಿಸುತ್ತಿರುವುದು, ಇಲ್ಲವೇ ಅಷ್ಟಲಕ್ಷ್ಮಿಯರು. ವಿಘ್ನ ನಿವಾರಕ ವಿನಾಯಕ, ತಿರುಪತಿ ತಿಮ್ಮಪ್ಪನ ಚಿತ್ರಗಳ ಕ್ಯಾಲೆಂಡರ್‌ಗಳು ಬಹಳ ವ್ಯಾಪಕ. ಆದರೆ ಕ್ಯಾಲೆಂಡರ್‌ಗಳೂ ಕೂಡ ಒಂದು ಜನಪರ ಸಂದೇಶದ ಕನ್ನಡಿಯಾಗಬಲ್ಲದು ಎಂದು ಭಾವಿಸುವವರು ಯೋಚಿಸುವ ರೀತಿಯ ಬೇರೆ. ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ(AIDWA) ಒಂದು ಭಿನ್ನ ಪ್ರಯತ್ನ ಮಾಡಿದೆ.

12 ತಿಂಗಳ ದಿನ ಸೂಚಿ ತೋರುವ ಕ್ಯಾಲೆಂಡರ್‌ನಲ್ಲಿ 12 ಚಿತ್ರಗಳು. ಒಂದೊಂದೂ ವಿಶಿಷ್ಟ ಚಿತ್ರಗಳು. ಮಹಿಳೆಯ ಬದುಕಿನ ವಿವಿಧ ಆಯಾಮಗಳನ್ನು ಬಿಂಬಿಸುವ ಚಿತ್ರಗಳು ಇದರಲ್ಲಿವೆ.

ನಮ್ಮ ಸಮಾಜ ಹೆಚ್ಚಿನ ಸಂದರ್ಭಗಳಲ್ಲಿ ಗುರುತಿಸದೇ ಹೋಗುವ ಮಹಿಳೆಯರ ಅಗಾಧ ದುಡಿಮೆಯನ್ನು ಅವರ ಶ್ರಮವನ್ನು, ದಿಟ್ಟತನವನ್ನು ಸಾರುವ ಚಿತ್ರಗಳು ಹಲವಾರು ಇಲ್ಲಿವೆ. ದೊಂಬರಾಟದ ಬಾಲೆ, ಭಾರ ತಾಳದೆ ಕುಸಿದು ಬಿದ್ದ ಎತ್ತಿಗೆ ನೀರು ಕುಡಿಸುತ್ತಿರುವ ಮಹಿಳೆಯರು ಇಂತಹ ಚಿತ್ರಗಳೂ ಇವೆ.

ಪ್ರತಿ ಪುಟದಲ್ಲೂ ಮಹಿಳೆಯ ಹಕ್ಕುಗಳು ಮತ್ತಿತರೆ ಮಹಿಳಾ ಕೇಂದ್ರೀತ ಪ್ರಶ್ನೆಗಳ ಕುರಿತು ಕಾನೂನುಗಳ ಕುರಿತ ವಿವರವಾದ ಮಾಹಿತಿಗಳಿವೆ. ಕ್ಯಾಲೆಂಡರ್ ಮಹಿಳೆ ಎಂದರೆ ದೇವತೆ ಇಲ್ಲವೇ 'ಚಂದ' ನದ ಬೊಂಬೆ ಎಂದು ಭಾವಿಸುವುದಕ್ಕಿಂತ ತುಂಬಾ ಭಿನ್ನವಾಗಿದೆಯಲ್ಲವೇ ಈ ಆಲೋಚನೆ ನಿಮಗೂ ಕ್ಯಾಲೆಂಡರ್ ಬೇಕಾ? ಜನವಾದಿಯನ್ನು ಸಂಪರ್ಕಿಸಿ - 9480101468

...............ದರ್ಪದ ಅಧಿಕಾರಸ್ತರು

ಪುಟ 3 ರಿಂದ

ಅಲ್ಲ. ನೇರ ಹೃದಯಕ್ಕೆ. ಇನ್ನೊಂದು ಸಂಗತಿಯೆಂದರೆ ತಾವೇ ಎಲ್ಲಾ ಎಂಬುದು ಬಿಡಬೇಕು. ಎಲ್ಲಾ ಹಂತಗಳ ಆಡಳಿತವನ್ನು ಚುರುಕುಗೊಳಿಸಬೇಕು. ಅದು ಜನರಿಗೆ ಬಾದ್ಯತೆ ಇಂದಿರಬೇಕು.


ಹಾರಿದ ಹೆಲಿಕಾಪ್ಟರ್
ಅರಚಿದ ಅಧಿಕಾರಿ

ಅದು ರಾಜಧಾನಿಯಿಂದ ಒಂದಿಷ್ಟು ದೂರದ ಊರೇ! ನೀವು ಹೇಗೆ ಓದಿದರೂ ಅದು ಒಂದೇ. ಅಡ್ಡ, ಉದ್ದ, ಹಿಂದೆ ಮುಂದೆ...ಎಂತಹ ವೈಶಿಷ್ಟ್ಯ! ಅದೇ 'ಗದಗ! ಈ ವರುಷದ 'ಮುಂಗಾರು ಮಳೆ'ಯ ಹುಚ್ಚು ಕುಣಿತಕ್ಕೆ ಇದ್ದ ಮನೆ, ಹೊಲದ ಬೆಳೆ ಆಧಾರ ಕಳೆದುಕೊಂಡು ಬಿಸಿಲು - ನೀರಿಗೆ ಬಿದ್ದರು. ನೆರೆಹಾವಳಿ ತನ್ನ ರಟ್ಟೆಯ ಕಸರತ್ತು ತೋರಿಸಿತ್ತು. ಆಗ ಹಾರಾಡಿದ್ದು ವಿಮಾನಗಳು, ಹೆಲಿಕಾಪ್ಟರ್‌ಗಳು. ಅಲ್ಲಿದ್ದವರು ಅಧಿಕಾರಸ್ತರು. ಅಧಿಕಾರದ ಚುಕ್ಕಾಣಿ ಹಿಡಿದ ಮುಖ್ಯಮಂತ್ರಿ, ಉಪಮುಖ್ಯಮಂತ್ರಿಗಳು. ಕೇಂದ್ರದಿಂದ ಒಂದಿಷ್ಟು ಜನ ಬಂದು ಸರ್ವೆ ಮಾಡಿ ಆದ ಹಾನಿ ಬರದುಕೊಂಡು ಹೋದರು. ಹೋದರಷ್ಟೇ. ಅಲ್ಲಿಂದ, ಇಲ್ಲಿಂದ ಏನೂ ಬರಲಿಲ್ಲ. ಇಲ್ಲಿಯುವರೆಗೂ ಒಂಟಿಕಾಲಲ್ಲೇ ನಿಂತು ಕಾದುಕೂಗಿದರು. ಅದು ಮಾನವ ಹಕ್ಕುಗಳ ಆಯೋಗದ ಆದ್ಯಕ್ಷರ ಕಿವಿಗೂ ಮುಟ್ಟಿ ಅಲ್ಲಿಗೆ ಭೇಟಿ ನೀಡಿ ಏನೆಂದೂ ಪರಿಹಾರಧನ ಕ್ರಮಗಳನ್ನು ಸರ್ಕಾರ ಕೈಗೊಳ್ಳದ ಬಗ್ಗೆ ಸರ್ಕಾರದ ಅಧಿಕಾರಿಗಳ ಮೇಲೆ ಕಿಡಿಕಾರಿದರು. ನಂತರ ಇವರ ಮಾತನ್ನು ಹಿಂಬಾಲಿಸಿದ್ದು ರಾಜ್ಯಪಾಲರ ಆಪ್ತ ಸಲಹೆಗಾರರು ಅರ್ಥಾತ್ ಕ್ಯಾಬಿನೆಟ್ ಸಚಿವರು. ಅವರೊಂದಿಗೆ ಜೊತೆಗೂಡಿದ್ದು ಕಂದಾಯ ಇಲಾಖೆ ಪ್ರಧಾನ ಕಾರ್ಯದರ್ಶಿ ಎಸ್.ಎಂ.ಜಾಮದಾರ್. ಈತನೊಬ್ಬ ಖಡಕ್ ಅಧಿಕಾರಿ. ಪ್ರಾಮಾಣಿಕ ಎಂದೆಲ್ಲಾ ಕೆಲವರು ಹೊಗಳುತ್ತಾರೆ. ಅವರೂ ಹಾಗೆ ತೋರಿಸಿಕೊಳ್ಳುತ್ತಾರೆ. ಇವರ ಪ್ರಾಮಾಣಿಕತೆ, ಖಡಕ್ ಯಾರಿಗೆ ಸುಖ ತರುವುದು, ದುಃಖ ಯಾರಿಗೆ ಆದರ ಅಂದಾಜು ಆತನಿಗೇ ಇದ್ದಂತಿಲ್ಲ.

ನೆರೆ ಸಂತ್ರಸ್ತರ ನಡುವೆ ಹೋಗಿದ್ದ ಜಾಮಾದಾರ್ 'ಪ್ರಕೃತಿ ವಿಕೋಪದಲ್ಲಿ ಸಂತ್ರಸ್ತರಿಗೆ ಪರಿಹಾರ ಕೊಡಬೇಕೆಂದು ಕಾನೂನು ಇಲ್ಲ. ಸರ್ಕಾರ ವಿಮಾ ಕಂಪನಿಯೂ ಅಲ್ಲ. ನಾವು ಕೊಡುವುದು ಸಾಂತ್ವನ ಅಷ್ಟೆ. ಬೇಕಿದ್ದರೆ ಕೋರ್ಟ್‌ಗೆ ಹೋಗ್ರಿ' ಎಂದು ಗದರಿದರೆಂದು ವರದಿಯಾಗಿದೆ. ಅತೀ ಸಂಕಟದಲ್ಲಿದ್ದವರಿಗೆ ಈ ರೀತಿಯ ಸಾಂತ್ವನ ಹೇಳಿದರೆ ಹಗ್ಗ ಹುಡುಕಿ ನೇಣು ಹಾಕಿಕೊಂಡಾರು ಎಂಬ ಅರಿವೂ ಆತನಿಗಿಲ್ಲ! ರಾಜ್ಯದಲ್ಲಿ ರೈತರು, ಕೂಲಿಕಾರರ ಪರಿಸ್ಥಿತಿ ಹೇಗಿದೆ? ಏನಾದರೂ ಮಾಡಬೇಕೆಂಬ ಕಾಳಜಿಯೂ ಇಲ್ಲದೇ ಹೀಗೆ ವದರಿದರೆ ಪ್ರಾಮಾಣಿಕ ಎಂದು ಇಂತಹವರನ್ನು ಅಭಿನಂದಿಸಬೇಕೇ?

ಇಂತಹ ಉದ್ಧಟತನಗಳು ಒಂದೆರಡಲ್ಲ. ಕೊಡಗಿನಲ್ಲಿ ಬಾಣೆ ಜಮೀನಿನ ಹಕ್ಕನ್ನು ಕಿತ್ತುಕೊಳ್ಳಲು ಸರ್ಕಾರ ಹೊರಡಿಸಿದ್ದ ಆದೇಶಗಳನ್ನು ಭಾರೀ ಚರ್ಚೆ ನಂತರ ಹಿಂತೆಗೆಯಲು ವಿಧಾನಸಭೆಯಲ್ಲಿ ಸರ್ಕಾರ ನಿರ್ಧರಿಸಿತ್ತು. ಕೊಡಗಿನ ಜನ ಸಂತೋಷಗೊಂಡರು. ಕೆಲವರು ಸನ್ಮಾನಿಸಿಕೊಂಡರು ಕೂಡಾ. ಆದರೆ ಅದು ಜಾರಿಯಾಗಲೇ ಇಲ್ಲ. ಸರ್ಕಾರದ ಪ್ರಧಾನ ಕಾರ್ಯದರ್ಶಿ ಪಿ.ಬಿ.ಮಹಿಷಿಯನ್ನು ಕೇಳಿದರೆ ಜಮಾದಾರರನ್ನು ಕೇಳಬೇಕು ಎಂದರು. ಜಮಾದಾರ್‌ರನ್ನು ಕೇಳಿದರೆ ಸಮಿತಿ ಮಾಡಿದ್ದೇವೆ, ಆದರ ವರದಿ ಬರಲಿ ಎಂದು ಕಥೆ ಸೃಷ್ಟಿಸಿದರು. ಶಾಸಕಾಂಗದ ತೀರ್ಮಾನವನ್ನೇ ತಿರುಚಿ, ಜಾರಿಯನ್ನು ಧಿಕ್ಕರಿಸಿದರು. ಇಂತಹ 'ಪ್ರಾಮಾಣಿಕ' ಜನದ್ವೇಷಿ ಅಧಿಕಾರಶಾಹಿಗಳಿಂದ ಜನಕ್ಕೇನು ಪ್ರಯೋಜನ?

'ಎಂಥಾ ಕಾಲ ಬಂತಪ್ಪೋ'



'ಎಂತಾ ಕಾಲ ಬಂತು ನೋಡ್ಲ ಸಣ್ಣಪ್ಪ, ಒಟ್ನಲ್ಲಿ ನಮ್ಮ ರೈತಾಪಿಗಳಿಗೆ ಉಳಿಗಾಲ ಇಲ್ಲ'

'ಏನಾಯ್ತು ದೊಡ್ಡಪ್ಪ?'

'ಆಗಕ್ಕೆ ಇನ್ನೇನು ಉಳಿದೈತ್ಲ ತಮ್ಮ? ಏನೋ ನಮ್ಮ ರೈತ್ರು ಪಾರಿನ್ ಬ್ಯಾಂಕು ಅಂತ ಓಗಿ ಸಾಲ ತಗೊಂಡ್ರೆ ಅವ್ರು ಗೂಂಡಾಗಳನ್ನೇ ಕಳುಸ್ತಾರಂತೆ ವಸೂಲಿ ಮಾಡಕ್ಕೆ - ಅವ್ರ ಗೂಂಡಾಗಿರಿಗೆ ಹೆದರಿ ನಮ್ಮ ರೈತ್ರು ಆತ್ಮಹತ್ಯೆ ಮಾಡ್ಕೊತಾವ್ರೆ'

'ಔದು ದೊಡ್ಡಪ್ಪ ಕಾಲ ಕೆಟ್ಟೋತು'

'ಕಾಲ ಯಾವಾಗ ಒಳ್ಳೆದಾಗಿತ್ತು ಏಳು'

'ರೈತ್ರು ತವ ಆದ್ಕೆ ಇದ್ಕೆ ಅಂತ ಜಮೀನೆಲ್ಲಾ ಕಿತ್ಕತರೆ ಇನ್ನು ಅಂಗೋ ಇಂಗೋ ಜಮೀನು ಉಳುಸ್ಕೊಂಡೋರ ಕತೆ ಇಂಗೆ'

'ಅಂದಂಗೆ ದೊಡ್ಡಪ್ಪ ಅಷ್ಕೊಂದು ಬೇಜಾರಾಗ್ಬೇಡ. ರೈತ್ರುಗೆ ಇನ್ಮೇಲೆ ಯೋಚ್ನೆ ಇಲ್ಲ ಸುಖವಾಗಿರಬೋದು'

'ಏನ್ಲ ಅದು ಸಣ್ಣಪ್ಪ ತಮಾಸೆ ಮಾಡೋ ವಿಸ್ಯನ ಇದು?

'ತಮಾಸೆ ಅಲ್ಲ ದೊಡ್ಡಪ್ಪ ನಾನೇಳಿದ್ದಲ್ಲ ಇದು. ಗುರೂಜಿ ಏಳವ್ರೆ'

'ಯಾರ್ಲ ಅವ್ನ ಗುರೂಜಿ?'

'ಅಯ್ಯೋ ದೊಡ್ಡಪ್ಪ ಗುರೂಜಿಗೆ ಅಂಗಲ್ಲ ಅವ್ನ ಇವ್ನ ಅನ್ನಬಾರ್ದು'

'ಯಾಕ್ಲ ಎಷ್ಟು ವಯಸ್ಸು ಅವ್ನಾಗೆ?'

'ಏನೋ ಒಂದು 45-50 ಇರಬೋದು'

'ಮತ್ತೆ ಆ ವಯಸ್ಸಿನ ಮಗ ಅವ್ನೆ ನಂಗೆ'

'ಮಗನ ವಯಸ್ಸಿನೋನಿಗೆ ನಾನು ಅವರು ಇವರು ಅಂದ್ರೆ ಅವರಿಗೆ ಶ್ರೇಯಸ್ಸಲ್ಲ ಕಣ್ಲಾ. ಅದಿರ್ಲಿ ಅವನಾವ ಗುರೂಜಿ ಇಚಾರ ಏಳು'

'ಅವ್ರು ರವಿಸಂಕರ್ ಗುರೂಜಿ ಅಂತ. ಎಲ್ರೂ ಎಂಗೆ ಬದುಕಬೇಕು ಅಂತ ಏಳ್ಕೊಡತಾರಂತೆ'

'ಸರಿ, ಸರಿ... ಯಾವ ಪೈಕಿ ಈ ರವಿಸಂಕರ?'

'ಏ ಅಂಗಲ್ಲ ದೊಡ್ಡಪ್ಪ, ಯಾವ ಜಾತಿ ಮಠವೂ ಅಲ್ಲ ಈ ಗುರೂಜಿದು. ಎಲ್ಲರಿಗೂ ಎಂಗೆ ಬದುಕೋದು ಅಂತ ಏಳ್ಕೊಡತರಂತೆ. ಪಾರಿನ್ನಾಗೆಲ್ಲ ಬಾಳ ಒಗ್ತಿರ್ತರಂತೆ'

'ಸರಿ ಬಿಡು, ಇವನಮೋ ಪೆಸಲ್ಲೇ ಇರಬೇಕು, ನಮ್ಮಲ್ಲಿ ಇಷ್ಟಕೊಂದು ಜಾತಿ ಮಠಗಳಿದ್ರೂ ಯಾರೂ ರೈತ್ರು ಬಗ್ಗೆ, ರೈತ್ರು ಸಾಯ್ತಿರೋ ಬಗ್ಗೆ ತಲೆ ಕೆಡಿಸ್ಕೊಂಡಿಲ್ಲ. ಎಲ್ಲಿ ಅವ್ನ ಪೋಟಾ ಏನಾರು ಕೊಟ್ಟವರ ಪೇಪರಲ್ಲಿ?'

'ಊಕಣ್ ದೊಡ್ಡಪ್ಪ ನೋಡಿಲ್ಲಿ ತಲೆ, ಗಡ್ಡ ಮೀಸೆ ಎಲ್ಲ ಎಷ್ಟೊಂದು ಕೆಡಿಸ್ಕೊಂಡವರೆ ಗುರೂಜಿ'

'ಔದು ಕಣ್ಲಾ ಸಣ್ಣಪ್ಪ. ಇನ್ನೂ ಚಿಕ್ಕ ವಯಸ್ಸು ಪಾಪ! ಒಂದೂ ಬಿಳಿ ಕೂದ್ಲಿಲ್ಲ! ಅದಿರ್ಲಿ ರೈತ್ರು ಬಗ್ಗೆ ಏನು ಏಳವನೆ ಈ ಗುರೂಜಿ?'

'ಅದೇನೋ ಸೂನ್ಯ ಬಂಡವಾಳ ಕೃಸಿ ಮಾಡಬೇಕಂತೆ. ಆಮೇಲೆ ಎಂಗೆ ಉಸಿರಾಡಬೇಕು ಅಂತ ಏಳ್ಕೊಡ್ತರಂತೆ'

'ಒಳ್ಳೆ ತಮಾಸಿ ಕನ್ಲ, ಇಷ್ಟೊರ್ಸ ನಾವು ಉಸಿರಾಡದೇ ಬದ್‌ಕಿದೀವ? ಈ ವಯ್ಯನ ಅತ್ರ ಕಲಿಬೇಕಂತ? ಆಮೇಲೆ'

'ಆ ಮೇಲೆ ಆಗೇನೋ ಸುದರ್ಶನ ಕ್ರಿಯ ಅಂತ ಕಂಡು ಹಿಡಿದವರಂತೆ ಈ ಗುರೂಜಿ. ಆಮೇಲೆ ಸತ್‌ಸಂಗ ಮಾಡ್ ಬೇಕಂತೆ'

'ಏನ್ಲಾ, ಅದು ಏನೇನೋ ಏಳ್ತೀಯಾ? ಸತ್ತೋರ ಸಂಗ ಎಂಗ್ಲಾ ಮಾಡೋದು? ಅದೇನ್ಲಾ ಅದು ಸುದರ್ಸನ ಚಕ್ರ ಅಂದ್ರೆ?'

'ಸುದರ್ಸನ ಅಂದ್ರೆ ನಂಗೊತ್ತಿಲ್ಲ ದೊಡ್ಡಪ್ಪ. ಆದ್ರೆ ಸತ್‌ಸಂಗ ಅಂದ್ರೆ, ಸತ್ತೋರ ಸಂಗ ಅಲ್ಲ. ಒಳ್ಳೆಯೋರೆಲ್ಲ ಒಂದು ಕಡೆ ಕೂತ್ಕೊಂಡು ಭಜನೆ ಮಾಡೋದು'

'ಆಹಹ.... ಅದಿರ್ಲಿ ಈ ಗುರೂಜಿದು ಏನಾರ ಜಮೀನೈತೋ? ಅದೇನೋ ಸರ್ಕಾರದ ಎಷ್ಟೋ ಜಮೀನು ಒಳಗಾಕಂಡವರೆ ಅಂತ ಪೇಪರಲ್ಲಿ ಒಂದಂಗಿತ್ತು'

'ಆವಿಸ್ಯಕ್ಕೆ ಅಲ್ಲ ಕನ್ಲಾ ನಾನು ಕೇಳಿದ್ದು, ರೈತ್ರುಗೆ ಎಂಗೆ ಬದುಕಬೇಕು ಅಂತ ಏಳ್ಕೊಡ್ತಾನೆ ಅಂದ್ಯಲ್ಲ. ಅವ್ನ ಯಾವತ್ತಾದ್ರೂ ಒಂದು ಹುಲ್ಲು ಕಡ್ಡಿ ಕಿತ್ತವನ? ಗಂಜಲ ಬಾಚಿ ಸಗಣಿ ಎತ್ತವನಂತ? ಹಾಲು ಕರೆದವನ? ಉತ್ತು ಬಿತ್ತು ಕಳೆ ಕಿತ್ತು ಏನಾರ ಮಾಡಿ, ಅನುಭವ ಐತೋ ಎಂಗೆ ಅಂತ?'

'ಏನೋ ಗೊತ್ತಿಲ್ಲ ಕಣ್ ದೊಡ್ಡಪ್ಪ'

'ಓಗ್ಲಿ ಮದ್ವೆಗಿದ್ವೆ ಆಗವನೋ? ಮಕ್ಳುಮರಿ?...'

'ಛೇ ಏನ್ ದೊಡ್ಡಪ್ಪ ಸ್ವಾಮಿಗಳು ಅವ್ರು. ಅವ್ರ ಬಗ್ಗೆ ಇಂಗೆಲ್ಲ ನೀನು ಮಾತಾಡ್ ಬಾರ್ದು'

'ಅಂಗಲ್ಲ ಕನ್ಲಾ ಸಣ್ಣಪ್ಪ ಈಗ ಅವನಿಗೆ ಈಜು ಬರದೋನು ದಡದ ಮ್ಯಾಲೆ ನಿತ್ಕೊಂಡು ಅಂಗೆ ಮಾಡು ಇಂಗೆ ಮಾಡು ಅಂತ ಈಜು ಏಳ್ಕೊಡಕ್ಕೆ ಆಯ್ತದೇನ್ಲಾ? ಮದ್ವೆ ಆಗಿಲ್ಲ ಸಂತಾನ ಕಷ್ಟ ಸುಖ ಗೊತ್ತಿಲ್ಲ. ಅಂತೋರು ಎಂಗೆ ಬದುಕಬೇಕು ಅಂತ ಏಳ್ಕೊಟ್ರೆ ಎಂಗಾಯ್ತದೆ? ಒಂದಿನ ಸಗಣಿ ಕೈಲಿ ಮುಟ್ಟದವನು ರೈತ್ರು ಎಂಗೆ ಬದುಕಬೇಕು ಅಂತ ಏಳ್ಕೊಟ್ರ ಎಂಗೆ'?

'ಏನೋ ದೊಡ್ಡಪ್ಪ ನಂಗೆ ಅಷ್ಟೆಲ್ಲ ತಿಳ್ಯಾಕಿಲ್ಲ. ಪೇಪರಲ್ಲಿ ಬಂದಿದ್ದು ಏಳ್ದೆ ಅಷ್ಟೆಯಾ'

'ಅದಕ್ಕೆ ಕನ್ಲಾ ಏಳಿದ್ದು ಸುಮ್ನೆ ಓದ್ಬಿಟ್ರೆ ಸಾಲ್ದು ಇಚಾರ ಮಾಡ್ಬೇಕು'

- ಶ್ರೀ

ಐಸಿಐಸಿಐ ಎಂಬ ಖಾಸಗಿ ಬ್ಯಾಂಕ್ ರೈತರ ಪ್ರಾಣ ಹೀರುವ ಜವರಾಯನ ಅವತಾರದಂತಾಗಿರುವುದು ತೀರಾ ಆಕಸ್ಮಿಕವೇನಲ್ಲ ಇವೆಲ್ಲಾ ಯಾಕೆ? ಏನು? ಓದಿ

ವಿಜಯಕುಮಾರ್

ರೈತರನ್ನು ಚಟ್ಟಕ್ಕೇರಿಸಿದ ಐಸಿಐಸಿಐ ಬ್ಯಾಂಕ್

ಮೈಸೂರು ಹಾಗೂ ಚಾಮರಾಜನಗರ ಜಿಲ್ಲೆಗಳಲ್ಲಿ ಕಳೆದೆರಡು ವಾರಗಳಲ್ಲಿ ರೈತರ ಎರಡು ಹೆಣಗಳು ಉರುಳಿವೆ. ದಿನನಿತ್ಯವೂ ರಾಜ್ಯದ ಯಾವುದೋ ಭಾಗದಲ್ಲಿ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿರುವುದು ಪತ್ರಿಕೆಗಳಲ್ಲಿ ಕಾಯಂ ಸುದ್ದಿಯಾಗಿ ಪ್ರಕಟವಾಗುತ್ತಿರುವಾಗ ನಂಜನಗೂಡು ತಾಲ್ಲೂಕಿನ ಹೊಸಪುರ ಗ್ರಾಮದ ರೈತ ಮಂಜುನಾಥ್ ಹಾಗೂ ಚಾಮರಾಜನಗರ ತಾಲ್ಲೂಕಿನ ಹರಟೆ ಗ್ರಾಮದ ರೈತ ಸಿದ್ಧರಾಜು ಮಾಡಿಕೊಂಡ ಆತ್ಮಹತ್ಯೆ ಸಂಚಲನವನ್ನೇ ಸೃಷ್ಟಿಸಿದೆ.

ನಂಜನಗೂಡು ತಾಲ್ಲೂಕಿನ ಹೊಸಪುರ ಗ್ರಾಮದ ರೈತ ಮಂಜುನಾಥ ಐಸಿಐಸಿಐ ಬ್ಯಾಂಕ್‌ನ ವಸೂಲಿ ಗ್ಯಾಂಗ್ ತನ್ನ ಟ್ರಾಕ್ಟರನ್ನು ಬಲವಂತವಾಗಿ ವಶಪಡಿಸಿಕೊಂಡಿದ್ದರಿಂದ ಗ್ರಾಮದಲ್ಲಿ ತನ್ನ ಮರ್ಯಾದೆಗೆ ಚ್ಯುತಿ ಬಂದಿತೆಂದು ಬೇಸತ್ತು ಆತ್ಮಹತ್ಯೆ ಮಾಡಿಕೊಂಡ. ಇದರ ಹಿಂದೆಯೇ ಚಾಮರಾಜನಗರ ತಾಲ್ಲೂಕಿನ ಹರಟೆ ಗ್ರಾಮದ ರೈತ ಸಿದ್ಧರಾಜು ಟ್ರಾಕ್ಟರ್ ಸಾಲ ಮರುಪಾವತಿಗೆ ಐಸಿಐಸಿಐ ಬ್ಯಾಂಕ್ ಒತ್ತಡ ಹೇರಿದಾಗ ಕ್ರಿಮಿನಾಶಕ ಸೇವಿಸಿ ಆತ್ಮಹತ್ಯೆ ಮಾಡಿಕೊಂಡ. ಇದು ಇಡೀ ಜಿಲ್ಲೆಯ ರೈತ ಸಮುದಾಯವನ್ನು ಕೆರಳಿಸಿತು. ಪ್ರತಿಭಟನೆಗಳು, ರಸ್ತೆತಡೆ, ಕೊನೆಗೆ ಮೈಸೂರಿನ ಐಸಿಐಸಿಐ ಬ್ಯಾಂಕ್‌ಗೆ ಮುತ್ತಿಗೆ ಹಾಕಿದರು. ಬ್ಯಾಂಕು ತನ್ನ ಕಾರ್ಯನಿರ್ವಹಿಸಲು ಬಿಡಲೇ ಇಲ್ಲ.

ಮಂಜುನಾಥನ ಪ್ರಕರಣಕ್ಕೆ ಸಂಬಂಧಿಸಿದಂತೆ ಆತನ ಕುಟುಂಬಕ್ಕೆ ಪರಿಹಾರಧನ ನೀಡಬೇಕು. ಸಾಲಕ್ಕೆ ಆಧಾರವಾಗಿ ಇಟ್ಟುಕೊಂಡಿದ್ದ ಜಮೀನನ್ನು ವಾಪಸ್ ಮಾಡಬೇಕು ಹಾಗೂ ಟ್ರಾಕ್ಟರನ್ನು ಹಿಂತಿರುಗಿಸಬೇಕೆಂದು ಪಟ್ಟುಹಿಡಿಯ ಲಾಯಿತು. ಮೊದಮೊದಲು ಹಾರಿಕೆಯ ಉತ್ತರ ನೀಡಿದ ಬ್ಯಾಂಕಿನ ಸ್ಥಳೀಯ ಅಧಿಕಾರಿಗಳು ಜನರ ಒತ್ತಡ ತೀವ್ರವಾದಂತೆ ತಮ್ಮ ಕೇಂದ್ರ ಕಛೇರಿಯ ಜನರಲ್ ಮ್ಯಾನೇಜರ್‌ರನ್ನು ಕರೆಸಲೇಬೇಕಾಯಿತು. ಜಿಲ್ಲಾಡಳಿತದ ಮಧ್ಯಸ್ತಿಕೆಯಲ್ಲಿ ರೈತಸಂಘದ ಮುಖಂಡರು ಹಾಗೂ ಐಸಿಐಸಿಐ ಬ್ಯಾಂಕಿನ ಆಡಳಿತವರ್ಗದ ಮಧ್ಯೆ ಒಪ್ಪಂದವೇರ್ಪಟ್ಟು ಬಾಂಡ್‌ಮೂಲಕ 10 ಲಕ್ಷ ರೂ.ಗಳ ಭದ್ರತಾ ಠೇವಣಿ ಇಡುವುದಾಗಿ, ಭೂ ಒತ್ತೆ ಪತ್ರವನ್ನು ವಾಪಸ್ ಮಾಡುವುದಾಗಿ, ಉಳಿಕೆ ಸಾಲವನ್ನು ಮನ್ನಾ ಮಾಡುವುದಾಗಿ ಹಾಗೂ ನ್ಯಾಯಾಲಯದ ವಿಚಾರಣೆ ನಂತರ ಟ್ರ್ಯಾಕ್ಟರ್ ವಾಪಸ್ ನೀಡುವುದಾಗಿ ಬ್ಯಾಂಕಿನ ಅಧಿಕಾರಿಗಳು ಹೇಳಿದ್ದಾರೆ. ಪರಿಹಾರವಾಗಿ ನೀಡಲು ಒಪ್ಪಿರುವ 10 ಲಕ್ಷ ರೂ.ಗಳ ಬಾಂಡ್ ರೂಪದ ಭದ್ರತಾ ಠೇವಣಿಯು ಆರ್‌ಬಿಐ ವಿಚಾರಣೆಯಲ್ಲಿ ಬ್ಯಾಂಕು ತಪ್ಪೆಸಗಿದೆ ಎಂದು ಕಂಡುಬಂದಲ್ಲಿ ಮಾತ್ರ ಪಾವತಿಯಾಗಲಿದೆ.




ಹರಟೆ ಗ್ರಾಮದ ಸಿದ್ದರಾಜು, ಕುಟುಂಬ ವರ್ಗ ಶವದ ಬಳಿ ರೋಧಿಸುತ್ತಿರುವುದು.



ರೈತರ ಪ್ರತಿಭಟನೆ

ಇಡೀ ಐಸಿಐಸಿಐ ಬ್ಯಾಂಕ್‌ನಿಂದ ಟ್ರ್ಯಾಕ್ಟರ್ ಸಾಲ ಪಡೆದಿದ್ದ ಹರಟೆ ಗ್ರಾಮದ ರೈತ ಸಿದ್ಧರಾಜು ಸಾಲದ ಮೊದಲ ಕಂತನ್ನೇ ಕಟ್ಟದಿದ್ದುದರಿಂದ ಬ್ಯಾಂಕ್‌ನಿಂದ ಮರುಪಾವತಿಗೆ ಮೇಲಿಂದ ಮೇಲೆ ನೋಟಿಸ್ ಕಳಿಸಲಾಗಿತ್ತು. ಸಾಲವನ್ನು ಕಟ್ಟಲು ಸಾಧ್ಯವೇ ಇಲ್ಲ ಎನ್ನುವ ಸನ್ನಿವೇಶದಲ್ಲಿ ಸಿದ್ಧರಾಜು ಕ್ರಿಮಿನಾಶಕ ಸೇವಿಸಿ ಆತ್ಮಹತ್ಯೆ ಮಾಡಿಕೊಂಡ. ಒಂದರ ಮೇಲೊಂದರಂತೆ ನಡೆದ ಆತ್ಮಹತ್ಯೆಗಳ ಸರಣಿ, ಅದೂ ಒಂದೇ ಕಾರಣಕ್ಕೆ ಆಗಿದ್ದು ರೈತರ ಆಕ್ರೋಶಕ್ಕೆ ಕಾರಣವಾಯಿತು.



ಹೊಸಪುರದ ಮಂಜುನಾಥ

ಬ್ಯಾಂಕಿನಿಂದ ಮಂಜುನಾಥ ಮಾದರಿಯಲ್ಲಿ ಪರಿಹಾರ ದೊರಕದೇ ಶವಸಂಸ್ಕಾರ ಮಾಡುವುದೇ ಇಲ್ಲ ಎಂದು ಪಟ್ಟು ಹಿಡಿದಿದ್ದರಿಂದ ಪರಿಸ್ಥಿತಿ ಉದ್ವಿಗ್ನಗೊಂಡಿತು. ಗ್ರಾಮದ ಮನೆಯಿಂದ ಜಿಲ್ಲಾಧಿಕಾರಿ ಕಛೇರಿಗೆ ಶವವನ್ನು ಕೊಂಡೊಯ್ಯುವ ಪ್ರಯತ್ನಗಳನ್ನು ರಸ್ತೆಯ ಮಧ್ಯೆಯೇ ಪೊಲೀಸರು ತಡೆದಿದ್ದರಿಂದ ರೈತನ ಶವವನ್ನು ಹೊತ್ತ ಟ್ರ್ಯಾಕ್ಟರ್ ಎರಡು ದಿನ ಅಲ್ಲಿಯೇ ಉಳಿಯಬೇಕಾಯಿತು. ಶವಪರೀಕ್ಷೆ ನಡೆಯದ್ದರಿಂದ ಶವವು ಆಗಲೇ ಕೊಳೆತು ವಾಸನೆ ಬರುತ್ತಿತ್ತು. ರೈತರನ್ನು ಸಂತೈಸಲು ಹೋದ ಚಾಮರಾಜನಗರದ ಸಂಸದ ಶಿವಣ್ಣ ಹಾಗೂ ಜಿಲ್ಲಾಧಿಕಾರಿಗಳನ್ನು ಸುತ್ತುವರೆದು ಬ್ಯಾಂಕ್ ಅಧಿಕಾರಿಗಳನ್ನು ತಕ್ಷಣವೇ ಕರೆಸುವಂತೆ ಒತ್ತಾಯಿಸಲಾಯಿತು. ಬರುತ್ತೇವೆಂದು ಹೇಳಿಹೋದ ಐಸಿಐಸಿಐ ಬ್ಯಾಂಕ್‌ನ ಅಧಿಕಾರಿಗಳು ಬರದೇ ಹೋದಾಗ ಜಿಲ್ಲಾಡಳಿತ ಹಾಗೂ ಸಂಸದರು ಆತ್ಮಹತ್ಯೆ ಮಾಡಿಕೊಂಡ ರೈತನ ಕುಟುಂಬಕ್ಕೆ ಬ್ಯಾಂಕಿನಿಂದ ಪರಿಹಾರ ದೊರಕಿಸಿಕೊಡುವ ಜವಾಬ್ದಾರಿಯನ್ನು ತಾವೇ ಹೊರುವುದಾಗಿ ಹೇಳಿದ ನಂತರ ಸಾವು ಸಂಭವಿಸಿದ ನಾಲ್ಕು ದಿನಗಳ ನಂತರ ಸಿದ್ದರಾಜುನ ಸಂಸ್ಕಾರ ನಡೆಸಲಾಯಿತು.



ಸಿದ್ದರಾಜು

ಐಸಿಐಸಿಐ ಬ್ಯಾಂಕಿನ ವಂಚನೆ

ಟ್ರ್ಯಾಕ್ಟರ್‌ಗಾಗಿ ಸಾಲ ಪಡೆದುಕೊಂಡು ಆತ್ಮಹತ್ಯೆ ಮಾಡಿಕೊಂಡ ರೈತರಿಬ್ಬರೂ ಹೊಂದಿದ್ದದ್ದು ಕೇವಲ 4 ಎಕರೆ ಜಮೀನು ಮಾತ್ರ. ಟ್ರ್ಯಾಕ್ಟರ್ ಬಳಕೆಯ ಅವಶ್ಯಕತೆಯೇ ಇರಲಿಲ್ಲ. ಟ್ರ್ಯಾಕ್ಟರ್ ಬೆಲೆಯು ಜಮೀನಿನ ಒಟ್ಟು ಮೌಲ್ಯಕ್ಕಿಂತ ಅಧಿಕ. ಇಡೀ ಪ್ರಕರಣವನ್ನು ಗಮನಿಸಿದಾಗ ಅಚ್ಚರಿಯ ಸಂಗತಿಗಳು ಬೆಳಕಿಗೆ ಬಂದಿವೆ. ಜಿಲ್ಲೆಯಲ್ಲಿ ಟ್ರ್ಯಾಕ್ಟರ್ ಡೀಲರ್‌ಗಳು ಬ್ಯಾಂಕಿನ ಏಜೆಂಟರು ಹಾಗೂ ಬ್ಯಾಂಕಿನ ಅಧಿಕಾರಿಗಳು ಒಟ್ಟಾಗಿ ರೈತರಿಗೆ ಟ್ರ್ಯಾಕ್ಟರ್ ಸಾಲ ನೀಡುವ ಆ ಮೂಲಕ ಟ್ರ್ಯಾಕ್ಟರನ್ನು ಕಂಪನಿಗಳು ಟ್ರ್ಯಾಕ್ಟರನ್ನು ಮಾರಾಟ ಮಾಡುವ ಅನುಕೂಲ ಸಿಂಧು ವ್ಯವಹಾರವನ್ನು ಮಾಡುತ್ತಿದ್ದಾರೆ. ಒಂದೆಡೆ ಸಾಲ ಕೊಡಿಸಿದ್ದಕ್ಕೆ ಏಜೆಂಟರಿಗೆ ಬ್ಯಾಂಕಿನ ಕಮಿಷನ್ ಜೊತೆಗೆ ಟ್ರ್ಯಾಕ್ಟರ್ ಮಾರಾಟ ಮಾಡಿಸಿದ್ದಕ್ಕೆ ಕಂಪನಿಗಳ ಕಮಿಷನ್ ಹೀಗೆ ಎರಡೆರಡು ಕಡೆಯಿಂದ ಲಾಭ ಮಾಡಿಕೊಳ್ಳಲಾಗಿದೆ. ಚಾಮರಾಜನಗರ ಜಿಲ್ಲೆಯೊಂದರಲ್ಲೇ ಸುಮಾರು 4000 ಟ್ರ್ಯಾಕ್ಟರ್ ಗಳ ನೋಂದಣಿಯಾಗಿದೆ. ಕಳೆದ ಒಂದು ವರ್ಷದಲ್ಲೇ 500 ಟ್ರ್ಯಾಕ್ಟರ್ ಸಾಲಗಗಳನ್ನು ನೀಡಲಾಗಿದೆ. ಜಿಲ್ಲೆಯ ಪ್ರತಿ ಹಳ್ಳಿಯಲ್ಲಿ 10ರಿಂದ 15 ಟ್ರ್ಯಾಕ್ಟರ್‌ಗಳಿವೆ.

ಬ್ಯಾಂಕಿನ ಹಾಗೂ ಟ್ರ್ಯಾಕ್ಟರ್ ಕಂಪನಿಗಳದ್ದೊಂದು ವಂಚನೆಯೆಂದರೆ ಟ್ರ್ಯಾಕ್ಟರ್ ಪಡೆದುಕೊಳ್ಳುವಾಗ ಕೃಷಿಗೆ ಅನುಕೂಲವಾಗುವ ಟ್ರೈಲರ್, ಟಿಲ್ಲರ್ ಹಾಗೂ ಇನ್ನಿತರ ಪರಿಕರಗಳನ್ನು ನೀಡಲಾಗುವುದು ಎಂದು ಹೇಳಿ ಆ ಬಳಿಕ ಕೇವಲ ಟ್ರ್ಯಾಕ್ಟರ್ ಒಂದನ್ನೇ ನೀಡಲಾಗುತ್ತಿತ್ತು. ಕೃಷಿಗೆ ಬಳಕೆಯಾಗುವ ಯಾವುದೇ ಪರಿಕರಗಳಿಲ್ಲದೆಯೇ ಟ್ರ್ಯಾಕ್ಟರ್ ಕೊಂಡ ರೈತ ಮಾಡುವುದಾದರೂ ಏನು? ರೈತ ಸಿದ್ದರಾಜುಗೆ ನೀಡಿದ ಸಾಲ ಮಂಜೂರಾತಿ ಪತ್ರಗಳಲ್ಲಿ ಟ್ರ್ಯಾಕ್ಟರ್ ಜೊತೆಗೆ ಟ್ರೈಲರ್ ನೀಡುವುದಾಗಿಯೂ ತಿಳಿಸಲಾಗಿದೆ. ಆದರೆ ಕೊಟ್ಟಿದ್ದು ಟ್ರ್ಯಾಕ್ಟರ್ ಮಾತ್ರ. ನೇಗಿಲು, ಕಲ್ಟಿವೇಟರ್‌ನಂತಹ ಉಳುಮೆಯ ಉಪಕರಣಗಳನ್ನು ಸಿದ್ದರಾಜು ತಮಿಳುನಾಡಿನಿಂದ ಬಾಡಿಗೆ ತಂದು ಟ್ರ್ಯಾಕ್ಟರ್ ಕೆಲಸಕ್ಕೆ ಹೋಗುತ್ತಿದ್ದ ಅದರಿಂದ ಏನೂ ಲಾಭವಾಗುತ್ತಿರಲಿಲ್ಲ.

ಐಸಿಐಸಿಐ ಬ್ಯಾಂಕಿನಲ್ಲಿ ಸಾಲ ನೀಡುವ ಪ್ರಕ್ರಿಯೆ ಇನ್ನಿತರ ರಾಷ್ಟ್ರೀಕೃತ ಬ್ಯಾಂಕುಗಳಿಗೆ ಹೋಲಿಸಿದರೆ ಸರಳವಾಗಿದೆ. ಹಾಗೆಯೇ ಅಪಾರದರ್ಶಕವೂ ಆಗಿದೆ. ಸಾಲದ ಶರತ್ತುಗಳನ್ನು, ವಿಧಿಸಲಾಗುವ ಬಡ್ಡಿ ದರವನ್ನು ಸ್ಪಷ್ಟಪಡಿಸಿ ಹೇಳಲಾಗುವುದಿಲ್ಲ. ತಕ್ಷಣವೇ ಸಾಲ ಸಿಗುತ್ತದೆ ಎನ್ನುವ ಆಸೆಗೆ ಸಾಲದ ಇನ್ನಿತರ ದಸ್ತಾವೇಜುಗಳನ್ನು ನೋಡಲು ಹೋಗುವುದೇ ಇಲ್ಲ. ತಮಗೆ ತಿಳಿಯದೇ ಯಾವ ಯಾವುದೋ ಪತ್ರಗಳಿಗೆ ಸಹಿ ಮಾಡುವ ಮುಗ್ಧ ರೈತರು ನಾಳೆ ಕಾನೂನು ಹೋರಾಟದಲ್ಲಿ ಕೈಚೆಲ್ಲಬೇಕಾಗುತ್ತದೆ.

ಐಸಿಐಸಿಐ ಬ್ಯಾಂಕಿನ ಇತಿಹಾಸ

ಪುಟ 14 ಕ್ಕೆ

ಬ್ಯಾಂಕುಗಳ ಬದಲಾದ ಸ್ವರೂಪ

ಬ್ಯಾಂಕಿಂಗ್ ಕ್ಷೇತ್ರದ ಸುಧಾರಣಾ ಕ್ರಮಗಳು ಉತ್ಪಾದಕ ರಾಷ್ಟ್ರೀಯ ಆರ್ಥಿಕತೆಯ ಪ್ರಕ್ರಿಯೆಯಿಂದ ಹೊರತಾಗಿ ಜಾಗತಿಕ ಹಣಕಾಸು ಬಂಡವಾಳದ ಭಾಗವಾಗಬೇಕೆಂಬುದರ ಉದ್ದೇಶವನ್ನು ಹೊಂದಿವೆ. ಈ ಕ್ರಮಗಳು ಒಂದು ಹಂತದಲ್ಲಿ ಜಾರಿಯಾಗಿದ್ದು ಸಾಮಾಜಿಕ ಹಾಗೂ ಅಭಿವೃದ್ಧಿ ಬ್ಯಾಂಕಿಂಗ್ ಹಿನ್ನೆಲೆಗೆ ಸರಿದು ಹೋಗಿದ್ದು ಸ್ಪಷ್ಟವಾಗಿ ಗೋಚರಿಸುತ್ತಿದೆ. ಕೃಷಿ ಕ್ಷೇತ್ರದಲ್ಲಿ ಇಂದಿನ ಅನಾಹುತಕಾರಿ ಪರಿಣಾಮಗಳಿಗೆ ನೇರವಾದ ಹೊಣೆಯನ್ನು ಹೊರಬೇಕಾಗಿದ್ದು ಬ್ಯಾಂಕಿಂಗ್ ಕ್ಷೇತ್ರದ ಈ ಸ್ಥಿತ್ಯಂತರವನ್ನೇ. ಕೃಷಿ ಕ್ಷೇತ್ರಕ್ಕೆ ಕೊಡಲಾಗುತ್ತಿದ್ದ ನೇರ ಹಾಗೂ ಪರೋಕ್ಷ ಸಾಲಗಳು 1990ರಲ್ಲಿ ಬ್ಯಾಂಕಿನ ನಿವ್ವಳ ಸಾಲದ ಪ್ರಮಾಣ ಶೇ.15.9 ಇದ್ದದ್ದು ದಶಕದ ನಂತರ ಶೇ.9.9ಕ್ಕೆ ಬಂದುನಿಂತಿದೆ. ಹೀಗಾಗಿ ಖಾಸಗಿ ಸಾಲದ ಮೊರೆ ಹೋಗುವ ರೈತರು ವಿಪರೀತವಾದ ಬಡ್ಡಿಯನ್ನು ತೆರಲಾರದೇ ಸಾಲದ ಬಲೆಗೆ ಸಿಲುಕುತ್ತಾರೆ. ರೈತರ ಆತ್ಮಹತ್ಯೆಗೆ ಇದು ತಕ್ಷಣದ ಪ್ರಚೋದನೆ ಎಂದು ಗುರುತಿಸಲಾಗಿದೆ.

ವಸಾಹತುಶಾಹಿ ಆರ್ಥಿಕತೆ ಹಾಗೂ ಕೆಲವೇ ಗುತ್ತೇದಾರಿ ಉದ್ಯಮಪತಿಗಳ ಹಿತಾಸಕ್ತಿಯೇ ಪ್ರಧಾನವಾಗಿದ್ದ ಸ್ವಾತಂತ್ರ್ಯ ಪೂರ್ವ ಬ್ಯಾಂಕಿಂಗ್ ವ್ಯವಸ್ಥೆಯಿಂದ, ಯೋಜನಾಬದ್ಧ ಸ್ವಾಯತ್ತ ಬಂಡವಾಳಶಾಹಿ ಬೆಳವಣಿಗೆಗೆ ಸಹಕಾರಿಯಾಗುವ ಬ್ಯಾಂಕಿಂಗ್ ವ್ಯವಸ್ಥೆಯತ್ತ ಸ್ವಾತಂತ್ರ್ಯಾ ನಂತರ ಕೆಲ ದಶಕಗಳ ಕಾಲ ದೇಶದ ಬ್ಯಾಂಕುಗಳು ಕಾರ್ಯ ನಿರ್ವಹಿಸಿದವು. ಬ್ಯಾಂಕುಗಳ ರಾಷ್ಟ್ರೀಕರಣದ ನಂತರ 'ಹಸಿರುಕ್ರಾಂತಿ'ಯ ಮೂಲಕ ಕೃಷಿಗೆ ಹಾಗೂ ವಿಶಾಲವ್ಯಾಪ್ತಿಯ ಬಂಡವಾಳಶಾಹಿ ಬೆಳವಣಿಗೆಗೆ ಪೂರಕವಾದ ನೀತಿಗಳನ್ನು ಬ್ಯಾಂಕುಗಳ ಅಳವಡಿಸಿಕೊಂಡವು. ಇಂಪಿರಿಯಲ್ ಬ್ಯಾಂಕ್‌ನ ರಾಷ್ಟ್ರೀಕರಣದಿಂದ ಪ್ರಾರಂಭವಾಗಿ ಐಡಿಬಿಐ, ಐಎಫ್‌ಸಿಐ, ಐಸಿಐಸಿಐ, ಎಸ್‌ಎಫ್‌ಸಿ ಯಂತಹ ಹಣಕಾಸು ಸಂಸ್ಥೆಗಳನ್ನು ಪ್ರಾರಂಭಿಸಿ ಕೊನೆಗೆ ದೊಡ್ಡ ದೊಡ್ಡ ಖಾಸಗಿ ಬ್ಯಾಂಕುಗಳನ್ನು ರಾಷ್ಟ್ರೀಕರಣಗೊಳಿಸಲಾಯಿತು. ಇದರಿಂದ ಆರ್ಥಿಕತೆಯ ವಿವಿಧ ಆಯಾಮಗಳಲ್ಲಿ ಉತ್ಪಾದಕ ನೆಲೆಯನ್ನು ಕಂಡುಕೊಳ್ಳಲು ಸಹಕಾರಿಯಾಯಿತು.

ಆದರೆ ಈಗ ಮತ್ತೊಮ್ಮೆ ಬ್ಯಾಂಕುಗಳ ವಿಲೀನದ ಅವಶ್ಯಕತೆಯನ್ನು ಚಿದಂಬರಂ ಹಾಗೂ ಅವರ ಸ್ನೇಹಿತರು ಹೇಳುತ್ತಿದ್ದಾರೆ. ವಿದೇಶಿ ಸ್ಪರ್ಧೆಯನ್ನು ಎದುರಿಸಲು ಬ್ಯಾಂಕುಗಳ ವಿಲೀನೀಕರಣ ಅವಶ್ಯಕ ಎಂದೂ ಹೇಳಲಾಗುತ್ತಿದೆ. ಆರ್ಥಿಕ ಚಟುವಟಿಕೆಗಳಿಂದ ಪ್ರಭುತ್ವ ಹಿಂದೆ ಸರಿಯಬೇಕೆಂದು ಸಮರ್ಥಿಸುವ ಚಿದಂಬರಂಗೆ ಬ್ಯಾಂಕುಗಳ ವಿಲೀನದ ಬಗ್ಗೆ ವಿದೇಶಿ ಸ್ಪರ್ಧೆಯ ಬಗ್ಗೆ ಏಕಿಷ್ಟು ಕಳಕಳಿ ಎನ್ನುವುದೇ ಸಂದೇಹಕ್ಕೆ ಕಾರಣವಾಗಿದೆ. ಈ ವಾದದ ಹೂರಣವಿಷ್ಟೆ. ಕೆಲವೇ ಕೆಲ ಬ್ಯಾಂಕ್‌ಗಳು, ಖಾಸಗಿ ಬ್ಯಾಂಕುಗಳನ್ನು ಖರೀದಿಸುವ ವಿದೇಶಿ ಬ್ಯಾಂಕುಗಳು ಮಾತ್ರ ಅಸಿತ್ವದಲ್ಲಿರಬೇಕು. ಜಾಗತಿಕ ಹಣಕಾಸು ಚಟುವಟಿಕೆಗಳಲ್ಲಿ ಸಟ್ಟಾ ಮಾರುಕಟ್ಟೆಯಲ್ಲಿ ಕ್ರಿಯಾಶೀಲವಾಗಿರಬೇಕು. ಹೆಚ್ಚು ಲಾಭಕಾರಿಯಾದ ಚಟುವಟಿಕೆಗಳಲ್ಲಿ ಮಾತ್ರ ತೊಡಗಬೇಕು ಹಾಗೂ ಅತ್ಯಾಕರ್ಷಕ ವಾದ ಸರ್ಕಾರಿ ಸಾಲಗಳನ್ನು ಕೈವಶ ಮಾಡಿಕೊಳ್ಳಬೇಕು. ಬಡರೈತನಿಗೆ, ಸಣ್ಣ ಉದ್ದಿಮೆದಾರರಿಗೆ ಕೈಗೆಟುಕದದಂತ ಗೋಪುರವಾಗಬೇಕು.

ಐ.ಸಿ.ಡಿ.ಎಸ್. ಉಳಿಸಲು ತೀವ್ರ ಹೋರಾಟ ಅಗತ್ಯ



ದೇಶದ ಸಮಗ್ರ ಶಿಶು ಅಭಿವೃದ್ಧಿ ಯೋಜನೆ (ಐಸಿಡಿಎಸ್) 1975 ರಿಂದ ಕೇಂದ್ರ ಸರ್ಕಾರ ಜಾರಿಗೆ ತಂದಿದೆ. ಈ ಯೋಜನೆ ಇಡೀ ವಿಶ್ವದಲ್ಲೇ ಅತಿ ದೊಡ್ಡ ಯೋಜನೆಯೆಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಇದೀಗ ಐಸಿಡಿಎಸ್ ಯೋಜನೆಯನ್ನು ಕೈಬಿಡುವುದೆಂದರೆ ರಾಷ್ಟ್ರದ ಮಕ್ಕಳ ಭವಿಷ್ಯವನ್ನೇ ಚಿವುಟಿ ಹಾಕಿದಂತಾಗುವುದು. ಇದರ ವಿರುದ್ಧ ಸಿಐಟಿಯು ನೇತೃತ್ವದಲ್ಲಿ ಸಂಘಟಿತ ಹೋರಾಟವನ್ನು ಕೇಂದ್ರ ಸರ್ಕಾರದ ವಿರುದ್ಧ ರಾಷ್ಟ್ರಮಟ್ಟದಲ್ಲಿ ಹೋರಾಟ ಮಾಡಬೇಕಾದ ತುರ್ತು ಅಗತ್ಯವಿದೆ.

ಇಂತಹ ಚಳುವಳಿಯನ್ನು ರೂಪಿಸುವ ಉದ್ದೇಶದೊಂದಿಗೆ 23.12.07 ರಂದು ಕುಂದಾಪುರ ಕಾರ್ಮಿಕ ಭವನದ ಸಭಾಂಗಣದಲ್ಲಿ ಕುಂದಾಪುರ ತಾಲ್ಲೂಕು ಅಂಗನವಾಡಿ ನೌಕರರ ಸಂಘದ 2ನೇ ತಾಲ್ಲೂಕು ಸಮ್ಮೇಳನ ನಡೆಯಿತು. ಸಮ್ಮೇಳನವನ್ನು ಎಸ್.ವರಲಕ್ಷ್ಮಿ ಉದ್ಘಾಟಿಸಿದರು. ಅಂಗನವಾಡಿ ನೌಕರರ ಸಂಘದ ತಾಲ್ಲೂಕು ಅಧ್ಯಕ್ಷೆ ಸಬಿತಾಶೆಟ್ಟಿ ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದರು. ಬೀಡಿ ಕಾರ್ಮಿಕರ ಸಂಘದ ಮುಖಂಡರಾದ ಮಹಾಬಲ ವಡೇರ ಹೋಬಳಿ ಕೃಷಿ ಕೂಲಿಗಾರರ ಸಂಘದ ಕುಂದಾಪುರ ಸಮಿತಿಯ ಕಾರ್ಯದರ್ಶಿ ವೆಂಕಟೇಶ ಕೋಣಿ, ಕಟ್ಟಡ ಕಾರ್ಮಿಕರ ಸಂಘದ ತಾಲ್ಲೂಕು ಕಾರ್ಯದರ್ಶಿ ಚಂದ್ರಶೇಖರ್ ವಿ. ಸಿಐಟಿಯು ಮುಖಂಡ ಯು.ದಾಸಭಂಡಾರಿ ಸಭೆಯಲ್ಲಿ ಮಾತನಾಡಿದರು.

ಅಂಗನವಾಡಿ ನೌಕರರ ಸಂಘದ ತಾಲ್ಲೂಕು ಸಮಿತಿಗೆ ನೂತನ ಅಧ್ಯಕ್ಷರಾಗಿ ಸಬಿತಾಶೆಟ್ಟಿ,ಉಪಾಧ್ಯಕ್ಷರಾಗಿ ಅನುಸೂಯಮಯ್ಯ, ರತಿಶೆಟ್ಟಿ, ಸುಲೋಚನ ಹೆಬ್ಬಾರ್, ಸುಕನ್ಯ, ಕಾರ್ಯದರ್ಶಿಯಾಗಿ ಫಿಲೋಮಿನಾ, ಇಂದಿರಾ ಬೈಂದೂರು, ಚಂದ್ರಮತಿ ಶಿರೂರು, ಬೇಬಿ ಐಯ್ಯಂಗಾರ್ ವಂಡ್ಸೆ, ಶಾಂತಾ ಬಸ್ರೂರು, ಕೋಶಾಧಿಕಾರಿಯಾಗಿ ಮೀನಾಕ್ಷಿ ಪವಾರ್, ಇವರನ್ನೊಳಗೊಂಡ 25 ಮಂದಿ ಸದಸ್ಯರ ಕಾರ್ಯಕಾರಿ ಸಮಿತಿಯನ್ನು ಆಯ್ಕೆ ಮಾಡಲಾಯಿತು.ಆರಂಭದಲ್ಲಿ ಅಂಗನವಾಡಿ ಹಿರಿಯ ಸದಸ್ಯೆ ರತಿ ಶೆಟ್ಟಿ ಧ್ವಜಾರೋಹಣ ಮಾಡಿದರು. ಫಿಲೊಮಿನಾ ಗಂಗೊಳ್ಳಿ ಸ್ವಾಗತಿಸಿದರು. ಸುಲೋಚನಾ ಹೆಬ್ಬಾರ್ ಪ್ರಾಸ್ತಾವಿಕ ಭಾಷಣ ಮಾಡಿದರು. ಮೀನಾಕ್ಷಿ ಪವಾರ್ ವಂದಿಸಿದರು.

ವರದಿ: ವೆಂಕಟೇಶ್ ಕೋಣಿ

ಅಕ್ಷರ ದಾಸೋಹ ಖಾಸಗೀಕರಣಕ್ಕೆ ವಿರೋಧ



ಅಕ್ಷರ ದಾಸೋಹ ನೌಕರರ ಸಂಘದ 2ನೇ ತಾಲ್ಲೂಕು ಸಮ್ಮೇಳನವು 25.12.2007ರಂದು ಕುಂದಾಪುರ ಕಾರ್ಮಿಕರ ಸಭಾ ಭವನದಲ್ಲಿ ನಡೆಯಿತು. ತಾಲ್ಲೂಕು ಸಮ್ಮೇಳನವನ್ನು ಅಕ್ಷರ ದಾಸೋಹ ನೌಕರರ ಸಂಘದ ರಾಜ್ಯಾಧ್ಯಕ್ಷ ಎಸ್.ವರಲಕ್ಷ್ಮಿಯವರು ಉದ್ಘಾಟಿಸಿ ಮಾತನಾಡುತ್ತ ಕಳೆದ ಸಮ್ಮೇಳನದಿಂದ ಈ ತನಕ ನಮ್ಮ ಬೇಡಿಕೆಗೆ ಪರಿಹಾರ ಸಿಗದೇ ಉಳಿದಿರುವುದು ನಮ್ಮ ದುರಂತ ಸರಕಾರವು ಶಾಲಾ ಮಕ್ಕಳು ವಿದ್ಯಾಭ್ಯಾಸ ಮಾಡುವಾಗ ಅರ್ಧದಲ್ಲೇ ಶಾಲೆ ಬಿಡುವುದನ್ನು ತಪ್ಪಿಸಲು ಮರಳಿ ಬಾ ಶಾಲೆಗೆ, ನಲಿಯೋಣ ಬಾ, ಮರಳಿ ಶಾಲೆ ಸೇರುವುದಕ್ಕಾಗಿ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿ ಕೊಂಡಿರುವುದರ ಜೊತೆಗೆ ಅಕ್ಷರದಾಸೋಹ ಕಾರ್ಯಕ್ರಮವನ್ನು ಕೂಡ ಕೈಗೆತ್ತಿಕೊಂಡಿರುತ್ತದೆ. ಆದರೆ ಅಡಿಗೆ ಕೆಲಸದವರಿಗೆ ಕೆಲಸದ ಯಾವುದೇ ಭದ್ರತೆ ಇಲ್ಲದೆ, ಕನಿಷ್ಠ ಕೂಲಿ, ಸೌಲಭ್ಯದಿಂದ ವಂಚಿತರಾಗಿದ್ದಾರೆ ಎಂದು ಹೇಳಿದರು. ಬಿಸಿಯೂಟ ಕಾರ್ಯಕ್ರಮವನ್ನು ಖಾಸಗಿ ಸಂಘ ಸಂಸ್ಥೆಗಳಿಗೆ ವಹಿಸುವುದಕ್ಕೆ ಬಲವಾದ ವಿರೋಧ ವ್ಯಕ್ತಪಡಿಸಿದರು. ಈ ನಿಟ್ಟಿನಲ್ಲಿ ಹೋರಾಟಕ್ಕೆ ಮುಂದಾಗುವಂತೆ ಕರೆ ನೀಡಿದರು. ಬೆಂಗಳೂರಿನ ಇಸ್ಕಾನ್ ಸಂಸ್ಥೆ, ನಮ್ಮ ಮಕ್ಕಳನ್ನು ಭಿಕ್ಷುಕರಂತೆ ಚಿತ್ರಿಸಿ, ದೇಶದಲ್ಲಿ ಪ್ರಚಾರ ನಡೆಸುವುದರ ಮೂಲಕ ಕೋಟ್ಯಾಂತರ ರೂಪಾಯಿ ಹಣ ಸಂಗ್ರಹಿಸುತ್ತದೆ. ಬಿಸಿಯೂಟ ಪೂರೈಸಲು ಸರ್ಕಾರದಿಂದಲೂ ಹಣ ಪಡೆಯುತ್ತದೆ ಎಂದರು.

ಕುಂದಾಪುರ ಕ್ಷೇತ್ರ ಶಿಕ್ಷಣಾಧಿಕಾರಿ ಪ್ರಭಾಕರ ಮಿತ್ಯಾಂತರವರು ಮುಖ್ಯ ಅತಿಥಿಯಾಗಿ ಭಾಗವಹಿಸಿ ಮಾತನಾಡಿದರು. ಅಂಗನವಾಡಿ ನೌಕರರ ತಾಲ್ಲೂಕು ಅಧ್ಯಕ್ಷೆ ಸಬಿತಾಶೆಟ್ಟಿ, ಸಿಐಟಿಯು ಮುಖಂಡರಾದ ಮಹಾಬಲ ವಡೇರ ಹೋಬಳಿ, ವೆಂಕಟೇಶ್ ಕೋಣಿ ಉಪಸ್ಥಿತರಿದ್ದರು. ಸಮ್ಮೇಳನದ ಆರಂಭದಲ್ಲಿ ಹಿರಿಯ ಸದಸ್ಯೆ ಶಾರದಾ ಬೈಂದೂರು ಧ್ವಜಾರೋಹಣ ಮಾಡಿದರು.

ಯು.ದಾಸಭಂಡಾರಿ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಜಯಶ್ರೀ ಪಡುವರಿ ಸ್ವಾಗತಿಸಿ, ರತ್ನಾವತಿ ಜಗನ್ನಾಥ ಬಳ್ಳೂರು ವಂದಿಸಿದರು. ಜ್ಯೋತಿ ಕಟ್ಕೇರಿ ಕಾರ್ಯಕ್ರಮ ನಿರೂಪಣೆ ಮಾಡಿದರು. ಸಮ್ಮೇಳನದಲ್ಲಿ ನೂತನ ತಾಲ್ಲೂಕು ಸಮಿತಿ ಅಧ್ಯಕ್ಷರಾಗಿ ಯು.ದಾಸಭಂಡಾರಿ, ಉಪಾಧ್ಯಕ್ಷರಾಗಿ ಶಾರದಾಬೈಂದೂರು, ಜ್ಯೋತಿ ಕಟ್ಕೇರೆ, ಶಕುಂತಳ ಗಂಗೊಳ್ಳಿ, ಜಯ ಸಿದ್ದಾಪುರ ಕಾರ್ಯದರ್ಶಿಗಳಾಗಿ ರತ್ನಾವತಿ ಬಳ್ಕೂರು, ಜಯಶ್ರೀಪಡುವರಿ, ಸುಜಾತ ಹೊಯಾಣ, ಎಸ್.ಸವಿತಾ ಯಡ್ತರೆ, ಜ್ಯೋತಿ ಹೊಸಮಠ, ಕೋಶಾಧಿಕಾರಿಯಾಗಿ ಲತಾ ಹೊಸಂಗಡಿ ಇವರನ್ನೊಳಗೊಂಡಂತೆ 27 ಮಂದಿ ಸದಸ್ಯರನ್ನು ಆಯ್ಕೆ ಮಾಡಲಾಯಿತು.

ವರದಿ: ವೆಂಕಟೇಶ್ ಕೋಣಿ

ಸ್ತ್ರೀಶಕ್ತಿ ಸ್ವಸಹಾಯ ಸಂಘದ ಸದಸ್ಯರಿಗೆ ಬಡ್ಡಿರಹಿತ ಸಾಲಕ್ಕೆ ಆಗ್ರಹ

ಮನೆಯ ನಾಲ್ಕು ಗೋಡೆಯ ಮಧ್ಯದಿಂದ ಹೊರಗಡೆ ಬಂದಿರುವುದು ಸ್ತ್ರೀ ಶಕ್ತಿ ಸಂಘದ ಸದಸ್ಯರ ದೊಡ್ಡ ಸಾಧನೆ. ಹೆಣ್ಣು ಇಂದು ಎಲ್ಲಾ ಕ್ಷೇತ್ರಗಳಲ್ಲಿ ಸಾಧನೆ ಮಾಡುತ್ತಿದ್ದಾಳೆ. ಸ್ತ್ರೀಶಕ್ತಿ ಸಂಘದ ಉತ್ಪಾದನೆಗೆ ಮಾರುಕಟ್ಟೆ ಸೌಲಭ್ಯದ ವ್ಯವಸ್ಥೆ ಸಾಧ್ಯವಾಗಬೇಕು ಹಾಗೂ ಮಹಿಳೆಯ ಸಂಪೂರ್ಣ ವಿಮೋಚನೆಗಾಗಿ ಸಂಘಟಿತ ಹೋರಾಟಕ್ಕೆ ಸ್ತ್ರೀಶಕ್ತಿ ಸಂಘದ ಸದಸ್ಯೆಯರು ಮುಂದಾಗಬೇಕೆಂದು ಅಂಗನವಾಡಿ ನೌಕರರ ಸಂಘ (ಸಿಐಟಿಯು)ದ ಕರ್ನಾಟಕ ರಾಜ್ಯ ಸಮಿತಿಯ ಪ್ರಧಾನ ಕಾರ್ಯದರ್ಶಿ ಎಸ್.ವರಲಕ್ಷ್ಮಿರವರು ಕರೆ ನೀಡಿದರು.

24.12.07ರಂದು ಕುಂದಾಪುರ ಕಾರ್ಮಿಕರ ಸಭಾ ಭವನದಲ್ಲಿ ಕುಂದಾಪುರ ತಾಲ್ಲೂಕು ಸ್ತ್ರೀ ಶಕ್ತಿ ಸ್ವಸಹಾಯ ಸಂಘದ ಬೃಹತ್ ಸಮಾವೇಶವನ್ನು ಅವರು ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದರು. ಸಾಮಾಜಿಕ ಪಿಡುಗುಗಳಾದ ವರದಕ್ಷಿಣೆ, ಭ್ರೂಣಹತ್ಯೆ, ಸಂಪೂರ್ಣ ಮದ್ಯಪಾನ ನಿಷೇಧ ಮಾಡದಿರುವುದರ ವಿರುದ್ಧ ಮಹಿಳೆಯರ ಮೇಲಿನ ಅತ್ಯಾಚಾರದ ಸಮಸ್ಯೆ ಬಗ್ಗೆ ಸ್ತ್ರೀಶಕ್ತಿ ಸಂಘದ ಸದಸ್ಯೆಯರು, ಧೀರ ಹೋರಾಟ ಮಾಡಬೇಕೆಂದು ಎಸ್.ವರಲಕ್ಷ್ಮಿ ಹೇಳಿದರು.



ಸ್ತ್ರೀಶಕ್ತಿ ಸ್ವಸಹಾಯ ಸಂಘದ ಒಕ್ಕೂಟದ ರಾಜ್ಯ ಸಂಚಾಲಕಿ ಕುಮಾರಿಯವರು ಮುಖ್ಯ ಅತಿಥಿಯಾಗಿ ಭಾಗವಹಿಸಿ, ಬಹುರಾಷ್ಟ್ರೀಯ ಕಂಪನಿಗಳು ನಮ್ಮ ದೇಶದಲ್ಲಿ ಚಿಲ್ಲರೆ ವ್ಯಾಪಾರದ 'ಮಾಲ್' ತೆರೆಯುವುದಕ್ಕೆ ವಿರೋಧಿಸಬೇಕು ಎಂದು ಹೇಳಿದರು. ಮಹಿಳಾ ಸಬಲೀಕರಣ ವಾಗುವುದೆಂದರೆ ಸರ್ಕಾರದ ಯೋಜನೆಗಳಾದ ಉದ್ಯೋಗಿನಿ, ವಿಕಾಸಿನಿ, ಭಾಗ್ಯಲಕ್ಷ್ಮಿ ಹಾಗೂ ಸ್ವಉದ್ಯೋಗ ಸಾಲ ಯೋಜನೆ ಸೌಲಭ್ಯ ಎಲ್ಲರಿಗೂ ಸಿಗುವಂತಾಗಬೇಕೆಂದು ಅಭಿಪ್ರಾಯಪಟ್ಟರು. ಕೃಷಿ ಕೂಲಿಕಾರರ ಸಂಘಟನೆಯ ರಾಜ್ಯ ಕಾರ್ಯದರ್ಶಿ ನಿತ್ಯಾನಂದಸ್ವಾಮಿ ಸಭೆಯಲ್ಲಿ ಮಾತನಾಡಿದರು.

ಸಿ.ಐ.ಟಿ.ಯು ಮುಖಂಡರಾದ ಯು.ದಾಸಭಂಡಾರಿ, ವೆಂಕಟೇಶ್‌ಕೋಣಿ, ಸಬಿತಾ ಶೆಟ್ಟಿ, ಇಂದಿರಾ ಬೈಂದೂರು, ಫಿಲೋಮಿನಾ, ಮೀನಾಕ್ಷಿ ಪವಾರ್, ಶಾರದಾ ಬೈಂದೂರು ಸಭೆಯಲ್ಲಿ ಉಪಸ್ಥಿತರಿದ್ದರು ಸಾಕು ಬಾರಂದಾಡಿ ಸಂಚಾಲಕತ್ವದಲ್ಲಿ 25 ಮಂದಿ ಸದಸ್ಯರನ್ನೊಳಗೊಂಡ ಸಂಘಟನಾ ಸಮಿತಿಯನ್ನು ಆಯ್ಕೆ ಮಾಡಲಾಯಿತು. ಹೇಮಾವತಿ ಕಮಲಶಿಲೆ ಸ್ವಾಗತಿಸಿ, ಪಾರ್ವತಿ ಬಾರಂದಾಡಿ ವಂದಿಸಿದರು.

ವರದಿ: ವೆಂಕಟೇಶಕೋಣಿ



ಉಡುಪಿ ಜಿಲ್ಲಾ ಬಿಎಸ್‌ಎನ್‌ಎಲ್ ಗುತ್ತಿಗೆ ಕಾರ್ಮಿಕರ ಸಮಾವೇಶ

ಹತ್ತಾರು ವರ್ಷಗಳ ಕಾಲ ಬಿಎಸ್‌ಎನ್‌ಎಲ್ ಎಂಬ ಸಾರ್ವಜನಿಕ ಸಂಸ್ಥೆಯಲ್ಲಿ ದುಡಿಯುತ್ತಿದ್ದರೂ, ಕನಿಷ್ಠ ಕಾನೂನುಬದ್ಧ ಸೌಲಭ್ಯಗಳಿಂದ ಗುತ್ತಿಗೆ ಕಾರ್ಮಿಕರು ವಂಚಿತರಾಗಿದ್ದಾರೆ. ಇದರ ವಿರುದ್ಧ ಹೋರಾಡಲು ಕಾರ್ಮಿಕರೆಲ್ಲರೂ ಸಂಘಟಿತರಾಗಬೇಕೆಂದು ಕರ್ನಾಟಕ ಸ್ಟೇಟ್ ಬಿಎಸ್‌ಎನ್‌ಎಲ್ ನಾನ್ ಪರ್ಮನೆಂಟ್ ವರ್ಕರ್ಸ್ ಯೂನಿಯನ್‌ನ ರಾಜ್ಯ ಸಂಘಟನಾ ಕಾರ್ಯದರ್ಶಿ ಕೆ.ಮಹಾಂತೇಶ್ ಕರೆ ನೀಡಿದರು.

2007 ಡಿಸೆಂಬರ್ 8ರಂದು ಕುಂದಾಪುರದ 'ಕಾರ್ಮಿಕ ಭವನ'ದಲ್ಲಿ ನಡೆದ ಜಿಲ್ಲಾ ಸಮಾವೇಶವನ್ನು ಉದ್ಘಾಟಿಸಿ ಮಾತನಾಡಿದ ಅವರು, ಕಳೆದ ಎರಡು ವರ್ಷಗಳಿಂದಲೂ ಬಿಎಸ್‌ಎನ್‌ಎಲ್ ಗುತ್ತಿಗೆ ಕಾರ್ಮಿಕರು ಎಲ್ಲಾ ದಾಳಿ-ದಬ್ಬಾಳಿಕೆಯನ್ನು ಎದುರಿಸಿ ಹೋರಾಡಿದ್ದರ ಫಲವಾಗಿ ಇದೀಗ ಸಿಜಿಎಂ ಕಛೇರಿಯು ಈ ಕಾರ್ಮಿಕರಿಗೆ ಕಾನೂನುಬದ್ಧ ಸೌಲಭ್ಯಗಳನ್ನು ನೀಡಲು ಸೌಲಭ್ಯಗಳನ್ನು ನೀಡಲು ಸುತ್ತೋಲೆ ಹೊರಡಿಸಿದೆ. ಇದು ಡಿಸೆಂಬರ್ 4ರಂದು ರಾಜ್ಯದ ಗುತ್ತಿಗೆ ಕಾರ್ಮಿಕರು ನಡೆಸಿದ ಹೋರಾಟಕ್ಕೆ ಸಿಕ್ಕ ಮಹತ್ವದ ಜಯವಾಗಿದೆ. ಆದ್ದರಿಂದ ಉಡುಪಿ ಮತ್ತು ಮಂಗಳೂರು ಟೆಲಿಕಾಂ ವ್ಯಾಪ್ತಿಯ ಎಲ್ಲಾ ಕಾರ್ಮಿಕರು ಸಂಘಟಿತರಾಗಿ ತಮ್ಮ ನ್ಯಾಯಬದ್ಧ ಹಕ್ಕುಗಳನ್ನು ಪಡೆಯಬೇಕೆಂದರು. ಸಮಾವೇಶವನ್ನು ಉದ್ದೇಶಿಸಿ ಸಿಐಟಿಯು ಜಿಲ್ಲಾ ಅಧ್ಯಕ್ಷರಾದ ಕೆ.ಶಂಕರ್, ಬಿಎಸ್‌ಎನ್‌ಎಲ್ ಎಂಪ್ಲಾಯೀಸ್ ಯೂನಿಯನ್ ಮುಖಂಡರಾದ ವೇಣುಗೋಪಾಲ್ ನಂಬಿಯಾರ್, ಶಶಿಧರ ಗೊಲ್ಲ, ಪಿ.ಮುಕುಂದ, ಅಪ್ಪಾಜಿ, ಅಬ್ರಾಹಂ ಹಾಗೂ ಎ.ಎಂ.ಪೂಜಾರಿ ಮಾತನಾಡಿ ಗುತ್ತಿಗೆ ಕಾರ್ಮಿಕರ ಸಂಘಟನೆಗೆ ಎಲ್ಲಾ ರೀತಿಯ ಸಹಕಾರ ನೀಡುವುದಾಗಿ ತಿಳಿಸಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಸಿಐಟಿಯು ಜಿಲ್ಲಾ ಕಾರ್ಯದರ್ಶಿ ವಿಶ್ವನಾಥ ರೈ ಮಾತನಾಡಿ, ಬಿಎಸ್‌ಎನ್‌ಎಲ್ ಹಂಗಾಮಿ ಕಾರ್ಮಿಕರು ಸಂಘಟಿತರಾದರೆ ಮಾತ್ರ ಕಾನೂನುಬದ್ಧ ಸೌಲಭ್ಯಗಳು ಸಿಗಲು ಸಾಧ್ಯ ಎಂದು ಅಭಿಪ್ರಾಯಪಟ್ಟರು.

ನೂತನ ಜಿಲ್ಲಾ ಸಮಿತಿ ಆಯ್ಕೆ

ಈ ಸಮಾವೇಶದಲ್ಲಿ ನೂತನವಾಗಿ ಜಿಲ್ಲಾ ಸಮಿತಿಯನ್ನು ಈ ಕೆಳಗಿನಂತೆ ಆಯ್ಕೆ ಮಾಡಲಾಯಿತು.

ವರದಿ: ಪಿ.ಮುಕುಂದನ್

ಗೌರವ ಅಧ್ಯಕ್ಷರು	: ಪಿ.ವಿಶ್ವನಾಥ ರೈ
ಅಧ್ಯಕ್ಷರು	: ಶಶಿಧರ ಗೊಲ್ಲ
ಉಪಾಧ್ಯಕ್ಷರು	: ಮಾಧವ ಆಚಾರಿ
ಪ್ರಧಾನ ಕಾರ್ಯದರ್ಶಿ	: ಮುರುಳಿಧರ
ಸಹ ಕಾರ್ಯದರ್ಶಿ	: ಸಂತೋಷ ಅಂಪರ್
ಸಂಘಟನಾ ಕಾರ್ಯದರ್ಶಿ	: ಸಂತೋಷ ಪೂಜಾರಿ ತಲ್ಲೂರ್
ಖಜಾಂಚಿ	: ಪಿ.ಮುಕುಂದನ್

2007 ಇತಿಹಾಸ ಸೇರುತ್ತಿದೆ, 2008 ಉದಯವಾಗುತ್ತಿದೆ. ಎಲ್ಲಾ ಓದುಗರಿಗೆ 'ಜನಶಕ್ತಿ'ಯ ಹೊಸ ವರ್ಷದ ಹಾರ್ದಿಕ ಶುಭಾಶಯಗಳು.

ಎಂದಿನಂತೆ ಕಳೆದ ವರ್ಷದ ಬೆಳವಣಿಗೆಗಳ ಪರಾಮರ್ಶೆ ನಡೆಸಿ, ಈ ಬೆಳವಣಿಗೆಗಳ ಪರಿಣಾಮವಾಗಿ ಎದ್ದು ಬರುವ ಸವಾಲುಗಳನ್ನು ಮುಂಬರುವ ವ?ರ್ಷದಲ್ಲಿ ಎದುರಿಸುವುದು ಹೇಗೆ ಎಂಬ ಬಗ್ಗೆ ಚಿಂತನೆ ನಡೆಸಬೇಕಾದ ಸಮಯ. 2007ರಲ್ಲಿ ಬಹಳಷ್ಟು ಬೆಳವಣಿಗೆಗಳಾಗಿವೆ. ಅವುಗಳಲ್ಲಿ ಮೂರು ಭಾರತದ ಭವಿಷ್ಯದ ಮೇಲೆ ಮಹತ್ವದ ಪ್ರಭಾವ ಬೀರುವಂತವು ಎಂಬುದು ನಮ್ಮ ಅಭಿಪ್ರಾಯ.

2008 ರಲ್ಲಿ ಒಂದು ಉತ್ತಮ ಭಾರತಕ್ಕಾಗಿ ಹೋರಾಟಗಳು ಬಲಗೊಳ್ಳಲಿ !

2007ರ ಆರಂಭದ ವೇಳೆಗೂ ಬಿಜೆಪಿಗೆ ತನ್ನ 2004ರ ಸಾರ್ವತ್ರಿಕ ಚುನಾವಣೆಗಳ ಪರಾಭವವನ್ನು ಅರಗಿಸಿಕೊಳ್ಳಲಾಗಿರಲಿಲ್ಲ. ಆದ್ದರಿಂದ ಅದು ಈ ವರ್ಷ ದೇಶದಲ್ಲಿ ಮತ್ತೆ ಕೋಮು ಧ್ರುವೀಕರಣಕ್ಕೆ ಪ್ರಯತ್ನ ನಡೆಸುತ್ತದೆ, ಏಕೆಂದರೆ ಅದಕ್ಕೆ ಗೊತ್ತಿರುವ ಏಕೈಕ ಮಾರ್ಗವೆಂದರೆ ಹಿಂದೂ ವೋಟ್‌ಬ್ಯಾಂಕ್ ರಾಜಕೀಯ ಮಾತ್ರವೇ ಎಂಬ ಆತಂಕ ಇತ್ತು.

ದುರದೃಷ್ಟವಶಾತ್ ಅದು ನಿಜವಾಗಿದೆ. 2007ರ ಆರಂಭದಲ್ಲೆ ಇದರ ಆರಂಭವನ್ನು ದೇಶ ಕಂಡಿತು. ಜನವರಿಯಲ್ಲಿ ಗೋಲ್ವಾಲ್ಕರ್ ಜನ್ನ ಶತಾಬ್ದಿ ಹೆಸರಿನಲ್ಲಿ ಸಂಘ ಪರಿವಾರ ಬೆಂಗಳೂರು, ಮಂಗಳೂರು, ಗೋರಖಪುರ, ಜಬಲ್ಪುರ, ತಿರೂರು, ಮಂದಸೌರ್ ಇತ್ಯಾದಿ ಸ್ಥಳಗಳಲ್ಲಿ ಕೋಮು ಗಲಭೆಗಳನ್ನು ಎಬ್ಬಿಸಿತು. ಈ ವರ್ಷ ಮುಗಿಯುತ್ತಿರುವಂತೆ ಒರಿಸ್ಸಾದ ಕಂಧಮಲ್ ಜಿಲ್ಲೆಯಲ್ಲಿ ಕ್ರಿಶ್ಚಿಯನ್ ಅಲ್ಪಸಂಖ್ಯಾತರ ಮೇಲೆ ದಾಳಿಗಳು ನಡೆಯುತ್ತಿವೆ. 15 ಚರ್ಚುಗಳನ್ನು, ಶಿಕ್ಷಣ ಸಂಸ್ಥೆಗಳನ್ನು, ಕ್ರೈಸ್ತರ ಆಸ್ತಿ-ಪಾಸ್ತಿಗಳನ್ನು ಧ್ವಂಸ ಮಾಡಲಾಗಿದೆ. ಕ್ರೈಸ್ತ ಮಿಶನರಿ ಗ್ರಹಾಂ ಸ್ಟೇನ್ಸರ ಜೀವಂತ ದಹನದ ಕರಾಳ ನೆನಪು ಇನ್ನೂ ಮಾಸಿಲ್ಲ.

ಗುಜರಾತಿನಲ್ಲಿ ವಿಧಾನ ಸಭಾ ಚುನಾವಣೆಗಳಲ್ಲಿ ಮೋದಿ ನೇತೃತ್ವದ ಬಿಜೆಪಿಯ ಗೆಲುವಿನ ಬೆನ್ನಲ್ಲೇ ಈ ಧ್ವಂಸಕಾರ್ಯ ನಡೆದಿದೆ. ಈ ಗೆಲುವು ಬಿಜೆಪಿ ಮತ್ತೆ ತನ್ನ ಮೂಲ ವಿಭಜನಕಾರೀ ನೀತಿಗಳತ್ತ ಹಿಂದಿರುಗುವ ಪ್ರವೃತ್ತಿಗೆ ಹೊಸ ಉತ್ತೇಜನೆ ನೀಡಿದೆ. ಇದು ತಿರುಗು ಬಿಂದು ಎಂದಿದ್ದಾರೆ 'ಪ್ರಧಾನಿ ಹುದ್ದೆಯ ಅಭ್ಯರ್ಥಿ' ಅಡ್ವಾಣಿಯವರು. ಮತ್ತೆ ಕೇಂದ್ರದಲ್ಲಿ ಅಧಿಕಾರ ಗಿಟ್ಟಿಸುವ ನಿರೀಕ್ಷೆ ಬಿಜೆಪಿಯದ್ದು. ಈ ವರ್ಷದ ಆರಂಭದಲ್ಲಿ ದಿಲ್ಲಿಯ ಹಾದಿ ಲಕ್ನೌ ಮೂಲಕ ಎಂದು ಉತ್ತರ ಪ್ರದೇಶ ವಿಧಾನಸಭಾ ಚುನಾವಣೆಗಳ ಸಮಯದಲ್ಲಿ ಹೇಳಲಾಗಿತ್ತು. ಈಗ ಅದನ್ನು ಮರೆತೇ ಬಿಡಲಾಗಿದೆ. ಏಕೆಂದರೆ ಅಲ್ಲಿ ಅದಕ್ಕೆ ಸಿಕ್ಕಿದ್ದು ಕಳೆದೆರಡು ದಶಕಗಳಲ್ಲೇ ಅತಿ ಕಡಿಮೆ ಸ್ಥಾನಗಳು. ಈಗ ದಿಲ್ಲಿಗೆ ಹಾದಿ ಗುಜರಾತ್ ಮೂಲಕ ಎಂಬ ಹೊಸ ಆಸೆ ಅವರಲ್ಲಿ ಮೂಡಿದೆ. ಹಿಮಾಚಲ ಪ್ರದೇಶದಲ್ಲಿಯೂ ಕಾಂಗ್ರೆಸ್ ನಿಂದ ಅಧಿಕಾರ ಪಡೆದ ನಂತರ ಮುಂದಿನ 'ನಿಲುಗಡೆ' ದಿಲ್ಲಿ ಎನ್ನುತ್ತಿದ್ದಾರೆ ಬಿಜೆಪಿ ಮುಖಂಡರು. ಇರಲಿ, 2003ರ ಅಂತ್ಯದ ವೇಳೆಗೆ ರಾಜಸ್ತಾನ ಮತ್ತು ಮಧ್ಯಪ್ರದೇಶದಲ್ಲಿ ಕಾಂಗ್ರೆಸ್ ಸರಕಾರಗಳನ್ನು ಇಳಿಸಿದ ನಂತರವೂ ಬಿಜೆಪಿಯವರು ಹೀಗೇ ಭಾವಿಸಿದ್ದರು.



ಅದೇ ಗುಂಗಿನಲ್ಲಿ 'ಹೊಳೆಯುತ್ತಿರುವ ಭಾರತ' ಮತ್ತು 'ಉತ್ತಮ ಅನಿಸಿಕೆ'ಯ ಅಹಂಭಾವದಿಂದ 2004ರ ಸಾರ್ವತ್ರಿಕ ಚುನಾವಣೆಗಳತ್ತ ಹೊರಟರು. ಅದರ ಫಲಿತಾಂಶದ ಬಗ್ಗೆ ವಿವರಣೆ ನೀಡಲು ಅವರಿಗೆ ಈಗಲೂ ಸಾಧ್ಯವಾಗಿಲ್ಲ ಎಂಬುದು ಬೇರೆ ಮಾತು.

ಧರ್ಮನಿರಪೇಕ್ಷತೆಗೆ ಮತ್ತೆ ಸವಾಲು

ಅದೇನೇ ಇರಲಿ, 2008ರಲ್ಲಿ ಅವರ ಆಕ್ರಮಣಕಾರೀ ಕೋಮುವಾದೀ ಧ್ರುವೀಕರಣದ ಪ್ರಯತ್ನ ಇನ್ನಷ್ಟು ತೀವ್ರಗೊಳ್ಳಲಿದೆ. ಈಗ ಅವರ ಎಂದಿನ ವಿವಾದಗಳೊಂದಿಗೆ 'ರಾಮಸೇತು'ವೂ (ಅದನ್ನು ಅವರ ಸರಕಾರವೇ ಮಂಜೂರು ಮಾಡಿದ್ದರೂ) ಸೇರಿಕೊಂಡಿದೆ. ಕರ್ನಾಟಕದಲ್ಲೂ 'ಇದೇ ಕಾರ್ಯತಂತ್ರ'(!)ವನ್ನು ಅನುಸರಿಸಲಾಗುವುದು ಎಂದು ಇಲ್ಲಿಯ ಬಿಜೆಪಿ ಮುಖಂಡರೂ ಸಾರಿದ್ದಾರೆ. ಇನ್ನೊಂದೆಡೆ ಸಾಚಾರ್ ಸಮಿತಿಯ ಶಿಫಾರಸುಗಳ ಪ್ರಕಾರ ಅಲ್ಪಸಂಖ್ಯಾತರ ಕಲ್ಯಾಣದ ಯಾವುದೇ ಯೋಜನೆಯನ್ನು ಅವರು ವಿರೋಧಿಸುತ್ತಿದ್ದಾರೆ.

ಆದ್ದರಿಂದ 2008ರಲ್ಲಿ ಆಧುನಿಕ ಭಾರತೀಯ ಗಣತಂತ್ರದ ಜಾತ್ಯಾತೀತ ಪ್ರಜಾಸತ್ತಾತ್ಮಕ ಅಡಿಗಲ್ಲನ್ನು ಕಾಪಾಡಿಕೊಳ್ಳುವ ಸಮರ ಖಂಡಿತಾ ತೀವ್ರಗೊಳ್ಳುತ್ತದೆ. ಭಾರತದ ವೈವಿಧ್ಯತೆಯಲ್ಲಿ ಏಕತೆಯನ್ನು ಉಳಿಸಿಕೊಳ್ಳುವ ದೃಢನಿರ್ಧಾರ ಮಾಡಿರುವವರೆಲ್ಲಾ ಆ ನಿರ್ಧಾರವನ್ನು ಇನ್ನಷ್ಟು ಬಲಿಷ್ಠಗೊಳಿಸಬೇಕಾಗಿದೆ. ಆದರೆ ಇದು ಜನಗಳ ಪರಿಸ್ಥಿತಿಗಳನ್ನು ಉತ್ತಮಗೊಳಿಸುವ ಆರ್ಥಿಕ ನೀತಿಗಳ, ಕ್ರಮಗಳ ಪ್ರಾಮಾಣಿಕ ಅನುಷ್ಠಾನದಿಂದ ಮಾತ್ರ ಸಾಧ್ಯ. ಯುಪಿಎ ಸರಕಾರ ಎಡಪಕ್ಷಗಳ ಸಲಹೆಗಳಿಗೆ, ದುಡಿಯುವ ಜನಗಳ ಹೋರಾಟಗಳಿಗೆ, ಬೇಡಿಕೆಗಳಿಗೆ ಕಿವಿಗೊಟ್ಟು ಸಾಮಾನ್ಯ ಕನಿಷ್ಠ ಕಾರ್ಯಕ್ರಮದ ಜನ-ಪರ ಅಂಶಗಳನ್ನು ಜ್ಯಾರಿಗೆ ತರಬೇಕು. ಹೀಗೆ ಮಾಡದಿದ್ದರೆ ಜನಗಳ ಅಸಂತೃಪ್ತಿಯನ್ನು ಕೋಮುವಾದಿ ಶಕ್ತಿಗಳು ಚುನಾವಣಾ ಪ್ರಯೋಜನ ಪಡೆಯಲು ದುರುಪಯೋಗ ಪಡಿಸಿಕೊಳ್ಳುವುದು ಖಂಡಿತ. ಇನ್ನೊಂದೆಡೆ ಇದನ್ನು ತಡೆಯಬೇಕಾದರೆ ಜನ-ಪರ ನೀತಿಗಳ ಅನುಷ್ಠಾನಕ್ಕೆ ಹೋರಾಟಗಳು ತೀವ್ರಗೊಳ್ಳಬೇಕು.



ಜಾಗತೀಕರಣದ ವಿರುದ್ಧ ಜಾಗತಿಕ ಹೋರಾಟ

ಎರಡನೆಯದಾಗಿ, 2007ರ ಆರಂಭದಲ್ಲಿ ನಿರೀಕ್ಷಿಸಿದಂತೆ ಅಮೆರಿಕನ್ ಸಾಮ್ರಾಜ್ಯಶಾಹಿ ತನ್ನ ಜಾಗತಿಕ ಭೌಗೋಳಿಕ-ರಾಜಕೀಯ ಕಾರ್ಯತಂತ್ರದಲ್ಲಿ ಭಾರತವನ್ನು ಒಂದು ಕಿರಿಯ ಪಾಲುದಾರನಾಗಿ ಸೆಳೆದುಕೊಳ್ಳುವ ಪ್ರಯತ್ನವನ್ನು ತೀವ್ರಗೊಳಿಸಿದೆ. ಭಾರತದ ಆಳುವ ಕೆಲ ವಿಭಾಗಗಳು ಈ ಕಿರಿಯ ಪಾಲುದಾರನ ಸ್ಥಾನಮಾನಕ್ಕೂ ಸಿದ್ಧರಾಗಿದ್ದಾರೆ ಎಂಬುದು ವಿಭಿನ್ನ ಪ್ರವೃತ್ತಿಯ ಶಕ್ತಿಗಳ ಒಂದು ಸಮಯಸಾಧಕ ಮೈತ್ರಿ. ದುಡಿಯುವ ಜನಗಳ, ಬಡಜನಗಳ ಹಿತಾಸಕ್ತಿಗಳ ರಕ್ಷಣೆಗೆ ಹೋರಾಡುತ್ತಲೇ ದೇಶದ ಸಾರ್ವಭೌಮತೆ ಮತ್ತು ಸ್ವಾತಂತ್ರ್ಯದ ರಕ್ಷಣೆಗೆ ಕಟಿಬದ್ಧವಾಗಿರುವ ಸಿಪಿಐ(ಎಂ) ಮತ್ತು ಎಡಪಕ್ಷಗಳ ಭಾರತ-ಅಮೆರಿಕ ಪರಮಾಣು ವ್ಯವಹಾರದ ಬಗ್ಗೆ ತೋರುತ್ತಿರುವ ತರಾತುರಿಯಲ್ಲಿ ಕಾಣುತ್ತದೆ. ಸಿಪಿಐ(ಎಂ) ನೇತೃತ್ವದ ಎಡ ಪಕ್ಷಗಳ ಸತತ ಪ್ರಯತ್ನಗಳಿಂದಾಗಿಯಷ್ಟೇ ಈ ವ್ಯವಹಾರ ಇನ್ನೂ ಕಾರ್ಯರೂಪಕ್ಕೆ ಬಂದಿಲ್ಲ. 2008ರಲ್ಲಿ ಈ ಕುರಿತು ಸಾಮ್ರಾಜ್ಯಶಾಹೀ ಒತ್ತಡಗಳಿಗೆ ಪ್ರತಿರೋಧವನ್ನು ಹಾಗೂ ಅದಕ್ಕೆ ನಮ್ಮ ಆಳುವ ಮಂದಿ ತಲೆಬಾಗುವುದಕ್ಕೆ ವಿರೋಧವನ್ನು ಇನ್ನಷ್ಟು ಬಲಗೊಳಿಸಬೇಕು ಎಂದು ಬೇರೆ ಹೇಳಬೇಕಾಗಿಲ್ಲ.

ಜಾಗತಿಕ ಮಟ್ಟದಲ್ಲಿ ಸಾಮ್ರಾಜ್ಯಶಾಹೀ ಜಾಗತೀಕರಣ ವಿಶ್ವದ ಬಹುಪಾಲು ಜನಗಳ ಮೇಲೆ ಅಸಹನೀಯ ಸಂಕಟಗಳನ್ನು ಹೇರುವುದನ್ನು ಮುಂದುವರೆಸಿದೆ. ಜಾಗತೀಕರಣದ ಈ ಘಟ್ಟದಲ್ಲಿ ದೇಶಗಳ ನಡುವೆ ಮತ್ತು ದೇಶಗಳೊಳಗೆ ಶ್ರೀಮಂತರು ಮತ್ತು ಬಡವರ ನಡುವೆ ಅಸಮಾನತೆಗಳು ಎಷ್ಟೊಂದು ಹೆಚ್ಚಿವೆ ಎಂಬುದಕ್ಕೆ ಇತ್ತೀಚೆಗೆ ಪ್ರಕಟವಾಗಿರುವ 2007ರ ಮಾನವ ಅಭಿವೃದ್ಧಿ ವರದಿ ನೀಡಿರುವ ಅಂಕಿ-ಅಂಶಗಳೇ ಸಾಕ್ಷಿ. ವಿಶ್ವದ 40ಶೇ. ಜನಗಳಿಗೆ ಬದುಕುಳಿಯಲು ಬೇಕಾಗುವ ಕನಿಷ್ಠ ಆದಾಯವೂ ಇಲ್ಲ. ಈ 40ಶೇ. ಮಂದಿಯ ಒಟ್ಟು ಆದಾಯ ಜಗತ್ತಿನ ಒಟ್ಟು ಆದಾಯದ 5ಶೇ. ಮಾತ್ರ. ಪ್ರತಿವರ್ಷ ಒಂದು ಕೋಟಿ ಮಕ್ಕಳು 5ವರ್ಷ ತುಂಬುವ ಮೊದಲೇ ಸಾಯುತ್ತವೆ. ಅಭಿವೃದ್ಧಿ ಹೊಂದುತ್ತಿರುವ ದೇಶಗಳಲ್ಲಿ 28ಶೇ. ಮಕ್ಕಳಿಗೆ ಸರಿಯಾದ ಆಹಾರ ಸಿಗುತ್ತಿಲ್ಲ.

ಹೀಗಿರುವಾಗ ಸಾಮ್ರಾಜ್ಯಶಾಹಿ ಜಾಗತೀಕರಣದ ವಿರುದ್ಧ ಹೆಚ್ಚುತ್ತಿರುವ ಜಾಗತಿಕ ಹೋರಾಟಗಳನ್ನು ಬಲಗೊಳಿಸಬೇಕು. ಇರಾಕಿನಲ್ಲಿ ಅಮೆರಿಕಾದ ಅತಿಕ್ರಮಣ, ಅದು ಹಿಟ್ಲರನಂತೆ ಹೇರಿರುವ ಮಾನವ ಸಂಕಟಗಳ ವಿರುದ್ಧ ಎದ್ದಿರುವ ಕ್ರೋಧವನ್ನು ಸಾಮ್ರಾಜ್ಯಶಾಹಿ-ವಿರೋಧಿ ಹೋರಾಟಗಳೊಂದಿಗೆ ಮಿಳಿತಗೊಳಿಸಿ ಒಂದು ಬೃಹತ್ ಪ್ರಮಾಣದ ಸಾಮ್ರಾಜ್ಯಶಾಹಿ-ವಿರೋಧಿ ಜಾಗತಿಕ ಹೋರಾಟ ಮೂಡಿ ಬರಬೇಕು.

ಎಡಪಕ್ಷಗಳ ಮೇಲೆ ಧಾಳಿ

ಕೊನೆಯದಾಗಿ, 2007ರಲ್ಲಿ ಕಂಡುಬಂದ ಇನ್ನೊಂದು ಸಂಗತಿಯೆಂದರೆ ಎಡಶಕ್ತಿಗಳ ವಿರುದ್ಧ ವಿರುದ್ಧ ಅಪಪ್ರಚಾರದ ಹೊಳೆಯೇ ಹರಿಯಿತು. ಇದು ಸ್ಪಷ್ಟವಾಗಿ ಕಾಣಬಂದದ್ದು ಪಶ್ಚಿಮ ಬಂಗಾಳದ ನಂದಿಗ್ರಾಮದಲ್ಲಿ. ಮುಸ್ಲಿಂ ಮೂಲಭೂತವಾದಿ ಗಳಿಂದ ಹಿಡಿದು ಆರೆಸ್ಸೆಸ್-ಬಿಜೆಪಿ ವರೆಗೆ, ಜತೆಗೆ ಅವರ ಎನ್‌ಡಿಎ ಮಿತ್ರರು ಹಾಗು ತೃಣಮೂಲ ಕಾಂಗ್ರೆಸಿನೊಂದಿಗೆ ಕೈಜೋಡಿಸಿದ ಕಾಂಗ್ರೆಸ್ ಪಕ್ಷದ ಬಂಗಾಳ ಘಟಕ, ವಿದೇಶಿ ಹಣದ ಎನ್‌ಜಿಒಗಳು, ಕಾರ್ಪೊರೇಟ್ ಮಾಧ್ಯಮಗಳು ಎಲ್ಲವೂ ಸಿಪಿಐ(ಎಂ) ವಿರುದ್ಧ ಮಾವೋವಾದಿ ಚಟುವಟಿಕೆಗಳಿಗೆ ಕೃಪಾಪೋಷಣೆ ನೀಡಿದವು.

ಹೀಗೇಕೆ ಎಂದು ಕಾರಣ ತಿಳಿಯುವುದು ಕಷ್ಟವೇನಲ್ಲ. ಸಿಪಿಐ(ಎಂ) ಮತ್ತು ಎಡಪಕ್ಷಗಳು ಸಾಮ್ರಾಜ್ಯಶಾಹಿಗಳಿಗೆ ಭಾರತದ ಆಳುವ ವರ್ಗಗಳೊಂದಿಗೆ ಸಾಮರಿಕ ಸಂಬಂಧಗಳನ್ನು ಏರ್ಪಡಿಸಿಕೊಳ್ಳಲು ಅವಕಾಶ ನೀಡಲಿಲ್ಲ; ಎಡಪಕ್ಷಗಳ ವಿರೋಧದಿಂದಾಗಿ ಯುಪಿಎ ಸರಕಾರ ತನ್ನ 'ಸುಧಾರಣಾ ಅಜೆಂಡಾ'ವನ್ನು ತಡೆಹಿಡಿಯಬೇಕಾಯಿತು. ಪೆನ್ಶನ್ ನಿಧಿಯ ಖಾಸಗೀಕರಣ, ಸಾರ್ವಜನಿಕ ವಲಯದಲ್ಲಿ ಇನ್ನಷ್ಟು ಖಾಸಗೀಕರಣ, ಹಣಕಾಸು ವಲಯದಲ್ಲಿ, ಚಿಲ್ಲರೆ ವ್ಯಾಪಾರದಲ್ಲಿ ಎಫ್‌ಡಿಐ ಹೆಚ್ಚಳ ಇವನ್ನೆಲ್ಲ ಮಾಡಲಾಗಲಿಲ್ಲ. ವಿದೇಶೀ ಬಂಡವಾಳಿಗರು ಮತ್ತು ದೊಡ್ಡ ಬಂಡವಾಳಶಾಹಿಗಳಿಗೆ ತಮಗೆ ಸೂಪರ್ ಲಾಭ ಗಿಟ್ಟಿಸಲು ಅವಕಾಶವಾಗಲಿಲ್ಲ ಎಂಬ ಬೇಸರ; ಕೋಮುವಾದಿ ಶಕ್ತಿಗಳಿಗಂತೂ ಈ ಎಡಶಕ್ತಿಗಳಿಲ್ಲದಿದ್ದರೆ ಯುಪಿಎ ಸರಕಾರವನ್ನು ಎಂದೋ ಮಣಿಸಬಹುದಿತ್ತು ಎಂಬ ಸಿಟ್ಟು ; ಸಿಪಿಐ(ಎಂ)ನ ಹುಟ್ಟಾವಿರೋಧಿಗಳಾದ ವಿದೇಶಿ ಹಣದ ಎನ್‌ಜಿಒಗಳು ಮತ್ತು ಮಾವೋವಾದಿಗಳು ಎಂದು ಹೇಳಿಕೊಳ್ಳುವವರಿಗೆ ಇದೇ ಸದವಕಾಶ ಎಂದನಿಸಿತು. ಆದರೆ ಸಿಪಿಐ(ಎಂ) ಮತ್ತು ಎಡಶಕ್ತಿಗಳು ಇವು ಯಾವುದರಿಂದಲೂ ವಿಚಲಿತರಾಗದೇ ಇವರೆಲ್ಲರ ಹುನ್ನಾರಗಳನ್ನು ವಿಫಲಗೊಳಿಸಿವೆ. 2007 ಅಂತ್ಯವಾಗುವ ವೇಳೆಗೆ ನಂದಿಗ್ರಾಮದಲ್ಲಿ ನಡೆದ ಯಶಸ್ವೀ ರ್ಯಾಲಿ ಇದಕ್ಕೆ ಒಂದು ಪುರಾವೆ.

ದುಡಿಯುವ ಜನಗಳು, ಅವರ ರಾಜಕೀಯ ಪಕ್ಷಗಳು 2007ರಲ್ಲಿ ಇನ್ನಷ್ಟು ಹೋರಾಟಗಳನ್ನು ನಡೆಸಿ ಮತ್ತಷ್ಟು ಗಟ್ಟಿಗೊಂಡಿವೆ. 2008 ಆರಂಭವಾಗುತ್ತಿರುವಂತೆ ಭಾರತದ ಸಾರ್ವಭೌಮತೆಯನ್ನು, ಸ್ವತಂತ್ರ ವಿದೇಶಾಂಗ ನೀತಿಯನ್ನು ಸಾಮ್ರಾಜ್ಯಶಾಹಿ ಒತ್ತಡಗಳಿಂದ ಕಾಪಾಡಿಕೊಳ್ಳುವ ಸಂಕಲ್ಪವನ್ನು, ಕೋಮುವಾದಿ ಧಾಳಿಗಳ ಸವಾಲುಗಳನ್ನು ಎದುರಿಸಿ ಭಾರತದ ಧರ್ಮ ನಿರಪೇಕ್ಷ ಪ್ರಜಾಸತ್ತಾತ್ಮಕ ಗಣರಾಜ್ಯ ಸ್ವರೂಪವನ್ನು ಎತ್ತಿ ಹಿಡಿಯುವ ಸಂಕಲ್ಪವನ್ನು, ಸಾಮ್ರಾಜ್ಯಶಾಹಿ ಜಾಗತೀಕರಣದಿಂದ ಭಾರತದ ಆರ್ಥಿಕ ಸ್ವಾವಲಂಬನೆಯನ್ನು ರಕ್ಷಿಸುವ ಮತ್ತು ಜನಗಳ ಮೇಲೆ ಹೆಚ್ಚೆಚ್ಚು ಆರ್ಥಿಕ ಹೊರೆಗಳನ್ನು ಹಾಕುವ ನೀತಿಗಳ ವಿರುದ್ಧ, ಪ್ರಜಾಸತ್ತಾತ್ಮಕ ಹಕ್ಕುಗಳು, ನಾಗರಿಕ ಸ್ವಾತಂತ್ರ್ಯಗಳನ್ನು ಹತ್ತಿಕ್ಕುವ ನೀತಿಗಳ ವಿರುದ್ಧ ಜನಗಳ ಹೋರಾಟಗಳನ್ನು ಬಲಪಡಿಸುವ ದೃಢ ಸಂಕಲ್ಪವನ್ನು ಪುನರುಚ್ಚರಿಸೋಣ.

ಬನ್ನಿ, 2008ರಲ್ಲಿ ಒಂದು ಉತ್ತಮ ಭಾರತವನ್ನು ಕಟ್ಟಲಿಕ್ಕಾಗಿ ಈ ಹೋರಾಟಗಳನ್ನು ಬಲಪಡಿಸೋಣ.

ಮಾಧ್ಯಮ ಲೋಕದ ವಿಶಿಷ್ಟ ಧ್ವನಿ

ಜನಶಕ್ತಿ

ಕನ್ನಡ ವಾರಪತ್ರಿಕೆ

2008



ಜನವರಿ

ಭಾ	ಸೋ	ಮಂ	ಬು	ಗು	ಶು	ಶ
		1	2	3	4	5
6	7	8	9	10	11	12
13	14	15	16	17	18	19
20	21	22	23	24	25	26
27	28	29	30	31		

15 ಮಕರ ಸಂಕ್ರಾಂತಿ 26 ಗಣರಾಜ್ಯೋತ್ಸವ

ಫೆಬ್ರವರಿ

ಭಾ	ಸೋ	ಮಂ	ಬು	ಗು	ಶು	ಶ
					1	2
3	4	5	6	7	8	9
10	11	12	13	14	15	16
17	18	19	20	21	22	23
24	25	26	27	28	29	

ಮೇ

ಭಾ	ಸೋ	ಮಂ	ಬು	ಗು	ಶು	ಶ
				1	2	3
4	5	6	7	8	9	10
11	12	13	14	15	16	17
18	19	20	21	22	23	24
25	26	27	28	29	30	31

1 ವಿಶ್ವ ಕಾರ್ಮಿಕ ದಿನಾಚರಣೆ 8 ಬಸವಜಯಂತಿ

ಜೂನ್

ಭಾ	ಸೋ	ಮಂ	ಬು	ಗು	ಶು	ಶ
1	2	3	4	5	6	7
8	9	10	11	12	13	14
15	16	17	18	19	20	21
22	23	24	25	26	27	28
29	30					

ಸೆಪ್ಟೆಂಬರ್

ಭಾ	ಸೋ	ಮಂ	ಬು	ಗು	ಶು	ಶ
	1	2	3	4	5	6
7	8	9	11	11	12	13
14	15	16	17	18	19	22
21	22	23	24	25	26	27
28	29	30				

3 ಗಣೇಶ ಚತುರ್ಥಿ 29 ಮಹಾಲಯ ಅಮಾವಾಸ್ಯೆ

ಅಕ್ಟೋಬರ್

ಭಾ	ಸೋ	ಮಂ	ಬು	ಗು	ಶು	ಶ
			1	2	3	4
5	6	7	8	9	10	11
12	13	14	15	16	17	18
19	20	21	22	23	24	25
26	27	28	29	30	31	

2 ಗಾಂಧಿಜಯಂತಿ/ರಂಜಾನ್ 8 ಆಯುಧ ಪೂಜೆ
17 ನರಕ ಚತುರ್ದಶಿ 29 ಬಲಿಪಾಡ್ಯಮಿ



ಸಾಮ್ರಾಜ್ಯಶಾಹಿಗಿದೋ ಧಿಕ್ಕಾರ

ಅಂದು ಇಂದು ಎಂದೆಂದೂ

2007

ಸರ್ವಜನಾಂಗದ ಶಾಂತಿಯ ತೋಟ
ರಸಿಕರ ಕಂಗಳ ಸೆಳೆಯುವ ನೋಟ
ಹಿಂದು-ಕ್ರೈಸ್ತ-ಮುಸಲ್ಮಾನ
ಪಾರಸಿಕ, ಜೈನರುದ್ಯಾನ
ಜಯ ಭಾರತ ಜನನಿಯ ತನುಜಾತೆ
ಜಯಹೇ ಕರ್ನಾಟಕ ಮಾತೆ

- ರಾಷ್ಟ್ರಕವಿ ಕುವೆಂಪು



ಮಾರ್ಚ್

ಭಾ	ಸೋ	ಮಂ	ಬು	ಗು	ಶು	ಶ
30	31					1
2	3	4	5	6	7	8
9	10	11	12	13	14	15
16	17	18	19	20	21	22
23	24	25	26	27	28	29

5 ಮಹಾಶಿವರಾತ್ರಿ 21 ಗುಡ್‌ಫ್ರೈಡೇ

ಏಪ್ರಿಲ್

ಭಾ	ಸೋ	ಮಂ	ಬು	ಗು	ಶು	ಶ
		1	2	3	4	5
6	7	8	9	10	11	12
13	14	15	16	17	18	19
20	21	22	23	24	25	26
27	28	29	30			

7 ಚಾಂದ್ರಮಾನ ಯುಗಾದಿ 14 ಅಂಬೇಡ್ಕರ್ ಜಯಂತಿ
18 ಮಹಾವೀರ ಜಯಂತಿ

ಜುಲೈ

ಭಾ	ಸೋ	ಮಂ	ಬು	ಗು	ಶು	ಶ
		1	2	3	4	5
6	7	8	9	10	11	12
13	14	15	16	17	18	19
20	21	22	23	24	25	26
27	28	29	30	31		

ಆಗಸ್ಟ್

ಭಾ	ಸೋ	ಮಂ	ಬು	ಗು	ಶು	ಶ
31					1	2
3	4	5	6	7	8	9
10	11	12	13	14	15	16
17	18	19	20	21	22	23
24	25	26	27	28	29	30

15 ಸ್ವಾತಂತ್ರ್ಯ ದಿನಾಚರಣೆ / ವರಮಹಾಲಕ್ಷ್ಮಿ ವ್ರತ



ನವೆಂಬರ್

ಭಾ	ಸೋ	ಮಂ	ಬು	ಗು	ಶು	ಶ
30						1
2	3	4	5	6	7	8
9	10	11	12	13	14	15
16	17	18	19	20	21	22
23	24	25	26	27	28	29

1 ಕರ್ನಾಟಕ ರಾಜ್ಯೋತ್ಸವ

ಡಿಸೆಂಬರ್

ಭಾ	ಸೋ	ಮಂ	ಬು	ಗು	ಶು	ಶ
	1	2	3	4	5	6
7	8	9	10	11	12	13
14	15	16	17	18	19	20
21	22	23	24	25	26	27
28	29	30	31			

8 ಬಕ್ರೀದ್ 25 ಕ್ರಿಸ್‌ಮಸ್







ನಾನು ಒಂದೇ ಒಂದು ಮಾತು ಕೇಳಿದೆ. 'ಅಂಗಾಲಿಗಿ ಹೇಸಿಕ್ಕಿಲ್ಲ, ಕಳ್ಳಿಗೆ ನಾಚಿಕಿಲ್ಲ ಅಂತಾರ. ಒಂಬತ್ತು ತಿಂಗಳು ಹೊತ್ತು ಹೆತ್ತಿದ ತಾಯಿ ನೀ ಕೂಸಿಗೆ ಮಾರಿದ ಮ್ಯಾಲ ಒತ್ತರಿಸಿ ಬಂದ ಎದಿ ಹಾಲ ಎಲ್ಲಿ ಚೆಲ್ಲಿದಿ? ನಿಂಗ ಹ್ಯಾಂಗ್ ಮನಸ ಬಂತು ಮಾರಲಾಕ? ಆಕಿಯ ಕರುಳಿನಲ್ಲಿ ಕತ್ತಿ ಆಡಿಸಿದಂಗಾಯ್ತೇನೋ. ಗಂಡನ ಕಡೆ ನೋಡಿದಳು.

ಸರಕಾಯ್ತು ಹೆಂಗೂಸ ಜೀವ...

ಡಿಸೆಂಬರ್ 14, ದಿ ಹಿಂದೂ ಪತ್ರಿಕೆಯ ಒಡಲಲ್ಲಿ ಆತಂಕದ ಸುದ್ದಿಯೊಂದು ಅಚ್ಚಾಗಿತ್ತು. ಭಾರತದ ಐದು ರಾಜ್ಯಗಳಲ್ಲಿ ಲಿಂಗಾನುಪಾತದಲ್ಲಿ ಗಣನೀಯ ಕುಸಿತವಾಗಿದ್ದು; 1000 ಗಂಡು ಹುಡುಗರಿಗೆ 527 ಹೆಣ್ಣು ಹುಡುಗಿಯರು. ಗೋಧಿಯ ಕಣಜ ಹೈನದ ಹೊಳೆಯ ನಾಡಾದ ಪಂಜಾಬು ಆರ್ಥಿಕವಾಗಿಯೇನೋ ಶ್ರೀಮಂತ. ಆದರೆ ಇನ್ನು ಕೆಲವೇ ವರ್ಷಗಳಲ್ಲಿ 'ಮಗಳು' ಇಲ್ಲದ ಬರದ ಬೆಂಗಾಡಾಗುವ ರಾಜ್ಯವೂ ಆಗಲಿದೆ. ಫತೇಗಢದ ಈ ಮೇಲಿನ ಲಿಂಗಾನುಪಾತವು 2001ರಲ್ಲಿ 1000 ಪುರುಷರಿಗೆ 754 ಹೆಣ್ಣು ಹುಡುಗಿಯರಿದ್ದರು. ಐದೇ ವರ್ಷಗಳ ತರುವಾಯ 224 ಹೆಣ್ಣು ಕುಡಿಗಳು ನಾಶವಾಗಿವೆ. ಈ ನಾಡಿನಲ್ಲಿ ಕೋಮುವಾದ ಮೂಲಭೂತವಾದ ಬೆಳೆದರೆಷ್ಟು ಅಪಾಯವೋ ಈ ಲಿಂಗಾನುಪಾತದ ಕುಸಿತ ಅಷ್ಟೇ ಅಪಾಯಕಾರಿ. ಯಾವುದೇ ರಾಜ್ಯದ ಅಭಿವೃದ್ಧಿಯ ಮಾನದಂಡದಲ್ಲಿ ಪುರುಷರಿಗಿಂತಲೂ ಮಹಿಳೆಯರ ಸಂಖ್ಯೆ ಹೆಚ್ಚಿರುವ ಅಂಶವೂ ಪ್ರಮುಖವಾದದ್ದು. ಕೇರಳದಲ್ಲಿ 1000 ಜನ ಪುರುಷರಿಗೆ 1050ಕ್ಕೂ ಹೆಚ್ಚು ಮಹಿಳೆಯರಿರುವ ಸಮೀಕ್ಷೆ ನಮ್ಮ ಮುಂದಿದೆ. ಇದೇ ಸಮಯದಲ್ಲಿ ದೇಶದ ರಾಜಧಾನಿ ದಿಲ್ಲಿ ಮತ್ತು ಕರ್ನಾಟಕದ ರಾಜಧಾನಿ ಬೆಂಗಳೂರಿನ ಅಂಕಿಸಂಖ್ಯೆಗಳು ಖಂಡಿತ ಆಘಾತಕಾರಿಯೇ. ದಿಲ್ಲಿಯಲ್ಲಿ 1000 ಪುರುಷರಿಗೆ 900ಕ್ಕೂ ಕಡಿಮೆ ಹೆಣ್ಣು ಮಕ್ಕಳಿದ್ದರೆ, ಐಟಿ, ಬಿಟಿ ಖ್ಯಾತಿಯ ಗುಲಾಬಿನಗರಿ ಬೆಂಗಳೂರಲ್ಲಿ 1000 ಗಂಡುಮಕ್ಕಳಿಗೆ ಕೇವಲ 825 ಹೆಣ್ಣುಮಕ್ಕಳು ಎಂಬುದು ಆತಂಕದ ಅಂಶ. ಇನ್ನು ಪಂಜಾಬ್ ಹರ್ಯಾಣ, ರಾಜಸ್ತಾನ, ಮಧ್ಯಪ್ರದೇಶ, ಹಿಮಾಚಲ ಪ್ರದೇಶಗಳಲ್ಲಿ ಲಿಂಗಾನುಪಾತದಲ್ಲಿ ನಿರಂತರವಾಗಿ ಹೆಣ್ಣುಮಕ್ಕಳ ಸಂಖ್ಯೆಯಲ್ಲಿ ಕುಸಿತವಾಗುತ್ತಿದೆ. ಮಧ್ಯಪ್ರದೇಶದಲ್ಲಿ 0ರಿಂದ 14 ಮಕ್ಕಳ ಸಮೀಕ್ಷೆಯಲ್ಲಿ 1000 ಗಂಡುಕೂಸುಗಳಿಗೆ 815 ಹೆಂಗೂಸುಗಳು. 2001ರಲ್ಲಿ 829ರಷ್ಟಿದ್ದು 2005ಕ್ಕೆ 815ಕ್ಕಿಳಿದಿದೆ. 0ರಿಂದ 6 ವಯೋಮಿತಿಯಲ್ಲಿ 842 ಹೆಂಗೂಸುಗಳು ಮಾತ್ರ. ಇನ್ನೂ ಗಾಬರಿ ಮತ್ತು ತಲ್ಲಣ ತರುವ ಸಮೀಕ್ಷೆಯು ಪಂಜಾಬಿ ಜಾಟ್‌ಸಿಖ್ ಸಮುದಾಯದಿಂದ ಸಿಕ್ಕಿದೆ. ಪ್ರತಿ 1000 ಗಂಡುಮಕ್ಕಳಿಗೆ 500ಕ್ಕೂ ಕಡಿಮೆ ಹೆಣ್ಣುಮಕ್ಕಳು! ಅಷ್ಟು ಮಾತ್ರವಲ್ಲ. ಇದು ಗ್ರಾಮೀಣ ಅಂಕಿಸಂಖ್ಯೆ. ಪಟ್ಟಣದಲ್ಲಾದರೆ ಮೇಲ್ಜಾತಿ ಹಿಂದೂಗಳಲ್ಲಿ 1000 ಗಂಡುಮಕ್ಕಳಿಗೆ 300 ಮಾತ್ರ ಹುಡುಗಿಯರು!! ಈಗ ಹೇಳಿ, ಮಗಳು ಇಲ್ಲದ ನಾಡಾಗುವ ದಿನಗಳು ದೂರವಿಲ್ಲ ಅಲ್ಲವೇ?

ಅಭಿವೃದ್ಧಿಯ ಸಂಕೇತ ಯಾವುದು?

ಹಾಗಾದರೆ ಆ ರಾಜ್ಯಗಳ ಅಭಿವೃದ್ಧಿಯ ಸಂಕೇತ ಯಾವುದು? ಹೆಣ್ಣು ಕುಡಿಗಳನ್ನು ಹೊಸಕಿ ನೈಜ ಅಭಿವೃದ್ಧಿಯತ್ತ ಚಲಿಸಲು ಸಾಧ್ಯವೇ? ನ್ಯಾಯ, ಸಮಾನತೆ ಮತ್ತು ಅಭಿವೃದ್ಧಿ ಒಂದನ್ನೊಂದು ಅಂತರ್‌ಸಂಬಂಧದ ತಳುಕು ಹಾಕಿಕೊಂಡಿದೆ. ಯಾವ ನೆಲದಲ್ಲಿ ಲಿಂಗಭೇದದ ನೀತಿ ಇರುವುದೋ ಅಲ್ಲಿ ಸಮಾನತೆ ಸಾಧ್ಯವೇ ಇಲ್ಲ. ಸಮಾನತೆ ಇಲ್ಲದೆಡೆ ಶಾಂತಿಯೂ ಇರದು. ಶಾಂತಿ, ಸಮಾನತೆ ಮತ್ತು ನ್ಯಾಯವೇ ಇಲ್ಲದ ಮೇಲೆ ಅಭಿವೃದ್ಧಿಯ ಚಿಗುರು ಟಿಸಿಲೊಡೆಯುವುದೇ ಇಲ್ಲ. ಮಾನವ ಜೀವ ಸಂಕುಲದ ಸಂಚಲನೆಗೇ ಧಕ್ಕೆಯೇ ಸರಿ. ಆದರೆ ಈ ಅಪಾಯದ ಅರಿವು ಇಲ್ಲದಂತೆ ವರ್ತಿಸುವ ಆಳುವ ವರ್ಗಗಳು ನೆಪಕ್ಕೆ ಪಿ.ಸಿ ಪಿಎನ್‌ಡಿಟಿ (pre conception pre-natal sex determination test) ಎಂಬ ಕಾಯ್ದೆಯು ರೂಪಿಸಿದ ಮೇಲೂ ಗಂಭೀರ ಬದಲಾವಣೆ ಕಾಣುತ್ತಿಲ್ಲ. ಪಾಳೇಗಾರಿ ಮೌಲ್ಯಗಳಲ್ಲೊಂದಾದ ಮಹಿಳಾ ವಿರೋಧಿ ನೀತಿಯನ್ನು ಅನುಚಾನವಾಗಿ ನಡೆಸಿಕೊಂಡು ಬರಲಾಗುತ್ತಿದೆ. ವಿಜ್ಞಾನ ತಂತ್ರ ಜ್ಞಾನದ ಆವಿಷ್ಕಾರಗಳು ಸಹ ಮಹಿಳಾ ವಿರೋಧಕ್ಕಾಗಿಯೇ ಬಳಸುತ್ತಿರುವುದು ವ್ಯಂಗ್ಯವೇ ಹೌದು. ಜಾಗತೀಕರಣದ ತಾಂಡವದ ಫಲಿತಾಂಶವೇ. ಈ ಮೇಲಿನ ಲಿಂಗಾನುಪಾತದ ಅಂಕಿಸಂಖ್ಯೆ. ಈ ಹೊತ್ತಿನಲ್ಲಿ ಥಟ್ಟನೆ ಮಾರ್ಕ್ಸ್ ನೆನಪಾಗಲೇ ಬೇಕು. ಸಂಪತ್ತಿನ ಅಸಮಾನ ಶೇಖರಣೆಯಿಂದಾಗಿ ಸಮಾಜದಲ್ಲಿ ಮಾನವೀಯ ಮೌಲ್ಯಗಳು ಕಾಣೆಯಾಗುತ್ತವೆ. ಜೀವಗಳೂ ಸರಕಾಗುತ್ತವೆ. ಹೌದಲ್ಲ! ಕುರುಡು




ಕಾಂಚಾಣದ ಥಕಥೈ ಮಾರುಕಟ್ಟೆಯಲ್ಲಿ ದುಡಿವ ಜನರ ರಟ್ಟೆಗಳೂ ಸರಕೇ. ಜೀವಂತ ಹೆಣ್ಣಿನ ಕಟಿ-ತುಟಿ, ಚರ್ಮವೂ ಸರಕೇ. ಈ ಸರಕು ಸಂಸ್ಕೃತಿಯಲ್ಲಿ ಹೆಂಗಸಿನ-ಹೆಣ್ಣು ಪಿಂಡದ ಹತ್ಯೆಯೂ ವ್ಯಾಪಾರದ ಭಾಗವೇ. 1991ರಿಂದೀಚೆಗೆ ಮಹಿಳಾ ಲೋಕವು ಏನೆಲ್ಲಾ ಬಾರ್ಬರಿಕ ಅಪಾಯ ಅನುಭವಿಸಿದೆ ಎಂಬುದು ಈಗಾಗಲೇ ಸಾಬೀತಾಗಿದೆ. ವರದಕ್ಷಿಣೆ, ಹಿಂಸೆ-ಹತ್ಯೆ, ಅತ್ಯಾಚಾರಗಳಲ್ಲಿ ಏರಿಕೆ ನಾಗರೀಕ ಸಮಾಜವು ತಲೆ ತಗ್ಗಿಸುವಂತಹದ್ದು. ಹೊಸ ಹೊಸ ಧಿರಿಸು ಧರಿಸಿ ಬರುವ ಮಹಿಳಾ ವಿರೋಧಿ ಮೌಲ್ಯಗಳು ಎಲ್ಲ ಹಂತದಲ್ಲೂ ಹರಿದಾಡುತ್ತಿವೆ.

ಕಣ್ಣೆದುರೇ ಕೊಲೆಯಾಗುತ್ತಿರುವ ಹೆಣ್ಣು ಜೀವಿಗಳು, ಹಾಡು ಹಗಲೇ ಮಾರಾಲ್ಪಡುತ್ತಿರುವ ಹೆಂಗೂಸುಗಳು. ಚರಂಡಿ ಕಸದ ತೊಟ್ಟಿಗಳಲ್ಲಿ ಚೆಲ್ಲಲ್ಪಡುತ್ತಿರುವ ಸ್ತ್ರೀಭ್ರೂಣಗಳು, ಕಣ್ಣು ಕುಣಿಯಲ್ಲಿ ನೀಡಿಲ್ಲ, ರಕ್ತದ ಹನಿ ಮಡುಗಟ್ಟುತ್ತದೆ. ಮೆದುಳ ಮೂಲೆಯಲ್ಲಿ ಆಕ್ರೋಶದ ಜ್ವಾಲೆ ಪ್ರಜ್ವಲಿಸುತ್ತದೆ.

ಹೆಣ್ಣು ಕೂಸಿನ ಮಾರಾಟ

ನನಗೀಗಲೂ ನೆನಪಿದೆ. ಗುಲ್ಬರ್ಗಾ ಜಿಲ್ಲೆಯ ಚಿಂಚೋಳಿ ತಾಲ್ಲೂಕಿನ ಕೊಂಚಾವರಂ ಪ್ರದೇಶದ ಥಾಂಡಾಗಳಲ್ಲಿ ಹೆಣ್ಣು ಕೂಸುಗಳ ಮಾರಾಟದ ಜಾಲ ಅನಾವರಣಗೊಂಡ ಸಮಯವದು. ಲಂಬಾಣಿ ಜನಾಂಗದ ಸುಂದರ ಹೆಂಗೂಸುಗಳನ್ನು ಕೇವಲ ರೂ.500 ರಿಂದ ರೂ.2000ಕ್ಕೆ ಮಾರಾಟ ಮಾಡಲಾಗಿತ್ತು. ಅನೇಕ ವರ್ಷಗಳಿಂದ ಗೌಪ್ಯವಾಗಿ ನಡೆಸಿಕೊಂಡು ಬಂದ 'ಜಾಲ' ವೂ ಈವರೆಗೂ ಅಭೇದ್ಯವಾಗಿಯೇ ಇದೆ. ಅನೇಕ ಬಾರಿ ನಾವು ಥಾಂಡಾಗಳಿಗೆ ಭೇಟಿಯಿತ್ತಿದ್ದೇವು. ಥಾಂಡಾ ವಾಸಿಗಳಾದ ಲಂಬಾಣಿ ಜನಾಂಗವು ಖಂಡಿತ ಕಡು ಬಡವರೇ, ಹತ್ತಾರು ವರ್ಷಗಳಿಂದ ಅರಣ್ಯ ಪ್ರದೇಶದಲ್ಲಿ ವಾಸವಿದ್ದರೂ-ಅರಣ್ಯ ಸಂಪತ್ತಿಗೆ ಇವರು ಒಡೆಯರಲ್ಲ. ಉಳುಮೆ ಮಾಡಿಕೊಂಡಿದ್ದ ಭೂಮಿಯಿಂದ ಹೊರದಬ್ಬುವ ಸಂಚು ಅರಣ್ಯ ಅಧಿಕಾರಿಗಳದ್ದು. ಉದ್ಯೋಗದ ಅವಕಾಶವಿಲ್ಲ.



199 ರೂ. ಗೆ ಭ್ರೂಣ ಹತ್ಯೆ – ಜಾಹಿರಾತು

ಬಾಂಬೆ-ಪುಣೆಗೆ ವಲಸೆ. ಕಿತ್ತು ತಿನ್ನುವ ಬಡತನ... ಅನೇಕ ಬೇಡಿಕೆಗಳನ್ನಿಟ್ಟು ಚಳುವಳಿಗಳು ನಡೆದವು. ನಾವಾಗ 15 ಜನ ಸಮೀಕ್ಷೆಗಾಗಿ ಲಿಂಗ ಸಮಾನತೆಯ ಬೆಳಕ್ಹಿಡಿದು ಹೊರಟೆವು. ಹೆಣ್ಣು ಕೂಸುಗಳ, ಕರುಳಕುಡಿಗಳ ಮಾರಾಟದ ಹಿಂದಿನ ಮೌಲ್ಯ ಭೇದಿಸಲು ನಾಲ್ಕು ದಿನಗಳ ಕಾಲ ಥಾಂಡಾಗಳಲ್ಲಿ ಠಿಕಾಣಿ ಹೂಡಿದೆವು. ಚೌಕಿ ಥಾಂಡಾ ದತ್ತ ನಮ್ಮ ಪಯಣ. ಎಳೆ ಮಗು ಮಾರಿಕೊಂಡ ಹೆಂಗಸು ಅಂಗಳದಲ್ಲಿ ಕೂತಿದ್ದಳು. ಆಕೆಯ ಗಂಡ ಬೀಡಿಯ ತುದಿಗೆ ಬೆಂಕಿ ಹೊತ್ತಿಸಿ ನಿರ್ಭಾವ ದಿಟ್ಟಿ ಹರಿಸಿದ. ಬಂದವರಿಗೆಲ್ಲ ಭೇಟಿಕೊಟ್ಟು, ವಿವರಿಸಿ ನುರಿತ ಅನುಭವದಿಂದಾಗಿ ಚಕಚಕನೇ ಬಡತನವೆಂಬ ಕೌದಿಯ ಮಗ್ಗಲುಗಳನ್ನು ತೋಡಿಕೊಂಡರು. ಸರ್ಕಾರ ತಮ್ಮ ನೆರವಿಗೆ ಬರಬೇಕೆಂದು ಆಗ್ರಹಿಸಿದರು. ನಾನು ಒಂದೇ ಒಂದು ಮಾತು ಕೇಳಿದೆ. 'ಅಂಗಾಲಿಗಿ ಹೇಸಿಕ್ಕಿಲ್ಲ. ಕಳ್ಳಿಗೆ ನಾಚಿಕಿಲ್ಲ ಅಂತಾರ. ಒಂಬತ್ತು ತಿಂಗಳು ಹೊತ್ತು ಹೆತ್ತಿದ ತಾಯಿ ನೀ ಕೂಸಿಗೆ ಮಾರಿದ ಮ್ಯಾಲ ಒತ್ತರಿಸಿ ಬಂದ ಎದಿ ಹಾಲ ಎಲ್ಲಿ ಚೆಲ್ಲಿದಿ? ನಿಂಗ ಹ್ಯಾಂಗ್ ಮನಸ ಬಂತು ಮಾರಲಾಕ? ಆಕಿಯ ಕರುಳಿನಲ್ಲಿ ಕತ್ತಿ ಆಡಿಸಿದಂಗಾಯ್ತೇನೋ. ಗಂಡನ ಕಡೆ ನೋಡಿದಳು. ನಮ್ಮ ಮಾತು ಕೇಳಿಸಿಕೊಳ್ಳುತ ಅವರ ಎರಡನೇಯ ಮಗಳು, 12 ವರ್ಷದವಳಿರಬೇಕು, ದೊಡ್ಡ ಕೊಡಪಾನದಲ್ಲಿ ನೀರು ಹೊತ್ತು ಡ್ರಮ್ಮಿನಲ್ಲಿ ಸುರುವಿ ನಿಂತಿದ್ದಳು. ಎಂಥ ಸುಂದರ ಹುಡುಗಿ! ಈಗಾಗಲೇ ಮಾರಲ್ಪಟ್ಟ ಎಳೆಯ ಕೂಸುಗಳೊಂದಿಗೆ ಏನೆಲ್ಲ ನಡೆದಿರಬಹುದು!! ಊಹಿಸಿಯೇ ಎದೆ ನಡುಗಿತು. ಕೂಸುಗಳೊಂದಿಗೆ ಲೈಂಗಿಕ ಚಟುವಟಿಕೆ ನಡೆಸುವ ವಿಕೃತ ಶಕ್ತಿಗಳು ಎಲ್ಲೆಡೆಯೂ ಕಾಣಸಿಗುತ್ತವೆ. ಆ ತಂದೆಯೆಂಬ ಮನುಷ್ಯ ತನ್ನ ತೋರು ಬೆರಳು ಮಗಳತ್ತ ತೋರಿಸಿ ಹೇಳತೊಡಗಿದ. "ಇಕಿ ಹಳಾ ನೋಡ್ರೀ, ದೊಡ್ಡಕ್ಕಾಗಿ ಒಂದ್ ವರ್ಷಾಯ್ತು. ಮದ್ಯಾಗ ಹುಂಡಾ ಕೇಳ್ತಾರ; ಹುಟ್ಸಿ, ಬೆಳ್ಸಿದ ಮ್ಯಾಲ ನಮಗೇನ ಲಾಭ ಅದಾ? ಓದಸ್ಲಾಕ ಮದಿಗೆ ರೊಕ್ಕ ಹಾಕಲಾಕ ಸಾಧ್ಯ ಇಲ್ಲ. ನಾವು ಬಡವ್ರು. ಮುಪ್ಪ ಕಾಲಕ ಗಂಡ ಮಗ ಬೇಕೇ ಅಲ್ಲ. ಗಂಣಸ ಮಗ ಅಂದ್ರ ದೀಪಕ್ಕ ದಿಕ್ಕ ಆಗ್ತಾನ. ಈ ಹೆಣ್ ಪೋರಿ ಗೋಳಿಗೆ ತಗೊಂಡು ಏನ್ ಮಾಡಾರಿ...?" ಅವನು ಹೇಳುತ್ತಲೇ ಇದ್ದ.

ತಿರಸ್ಕಾರ ಬೇರು ಬಿಟ್ಟಿತ್ತು

ಅಲ್ಲಿ ಖಂಡಿತ ಬಡತನವೂ ಇತ್ತು. ಆದರೆ ಬಡತನ್ನಕಿಂತಲೂ ಹೆಣ್ಣಿನ ಬಗೆಗಿನ ತಿರಸ್ಕಾರ ಬೇರು ಬಿಟ್ಟಿತ್ತು. ಪುತ್ರಫಲಾಪೇಕ್ಷೆಯ ವ್ಯಾಮೋಹವು ಎಷ್ಟು ತೀವ್ರವಾಗಿತ್ತೆಂದರೆ ಹೆಂಗೂಸುಗಳನ್ನು ಮಾರಿ ಬಿಡುವ ಕಟುಕರನ್ನು ಸೃಷ್ಟಿಸುತ್ತಿತ್ತು. 'ಹೆಣ್ಣು ಕೂಸು ಉಳಿಸಿ ಮಾನವ ಕುಲ ರಕ್ಷಿಸಿ ಎಂಬ ಘೋಷಣೆಯು ಕೇವಲ ಮಹಿಳಾ ಸಂಘ-ಸಂಸ್ಥೆಗಳದ್ದೆ ಆಗಬೇಕೇ? ಯಾಕೆ ಇಂದಿಗೂ ಈ ಪ್ರಶ್ನೆ ರಾಜಕೀಯ ಪ್ರಶ್ನೆಯಾಗಿ ತಗೊಳ್ಳಲು ಸಾಧ್ಯವಾಗುತ್ತಿಲ್ಲ? (ಸಿಪಿಐ(ಎಂ) ಪಕ್ಷ ಮಾತ್ರ ಮಹಿಳಾ ಮೀಸಲಾತಿಗಾಗಿ ಹೋರಾಟಕ್ಕೆ ಕರೆಕೊಟ್ಟಿತ್ತು) ಪಕ್ಷದ ನೇತಾರ ಜ್ಯೋತಿ ಬಸು ಜನವಾದಿಯ ರಾಷ್ಟ್ರೀಯ ಸಮ್ಮೇಳನದಲ್ಲಿ ಮಾತನಾಡುತ್ತಾ 'ಇದು ರಾಜಕೀಯ ಪ್ರಶ್ನೆಯಾಗಬೇಕೆಂದು ಆಗ್ರಹಿಸಿದರು. ಹೆಣ್ಣು ಭ್ರೂಣಹತ್ಯೆ ತಡೆಗೆ ಚಳುವಳಿಗಳು ನಡೆವಾಗಲೇ, ಬಿಹಾರ ರಾಜ್ಯದ ಬುದ್ಧಗಯಾ ದಾರಿಯಲ್ಲಿ ಗರ್ಭಪಾತದ ಬಹಿರಂಗ ಜಾಹಿರಾತು ನೋಡಿದ್ದೇವೆ. ಕಂಪನಿಗಳ ಲಾಭದ ವ್ಯಾಪಾರಿ ಭಾಷೆಯ ಸಂಖ್ಯೆ ಇಲ್ಲಿ ಬಳಸಲಾಗಿದೆ. ಕೇವಲ 199 ರೂ. ಗೆ ಔಷಧಿ ಮೂಲಕ ಸುಲಭ ಗರ್ಭಪಾತಕ್ಕೆ ಆಕರ್ಷಕ ಜಾಹಿರಾತು ಸೂರ್ಯ ಕ್ಲಿನಿಕ್‌ನಿಂದ. ನಾವು ಕ್ಯಾಮೆರಾ ಕ್ಲಿಕ್ಕಿಸಿದೆವು. ಇದು ಪ್ರಜಾಪ್ರಭುತ್ವದ ನಾಡೆ?

○

ಇವು ವಿಷದ ಹಾವು

ಗೋವುಗಳ ರಕ್ಷಿಸಿರಿ ಮಠ ಗುಡಿಯ ಉಳಿಸಿ
ಬೆಳೆಸುತ್ತ ನಮ್ಮವರ ಪ್ರಭುತ್ವ ಬೆಳೆಸಿ
ಇವು ಇವರ ಹೆಗ್ಗುರಿಯು ಬಲ್ಲಿರಾ ನೀವು
ಎಚ್ಚರಿಕೆ ಎಚ್ಚರಿಕೆ ಇವು ವಿಷದ ಹಾವು!

– ವಿಡಂಬಾರಿ

ವಿಜ್ಞಾನ ನಂಟು

ಪಠ್ಯಪುಸ್ತಕದೊಳಗೆ ವಿಜ್ಞಾನ ಉಂಟು
ಪ್ರಶ್ನೆಪತ್ರಿಕೆಗಷ್ಟೆ ಸೀಮಿತವು ಉಂಟು
ದಿನನಿತ್ಯ ಬದುಕಿನಲಿ ಬರದಂತೆ ಮೂಡಿ
ತಡೆಯುತ್ತ ಬಂದಿಹರು ಕೆಲವು ಜನ ಕೂಡಿ

– ವಿಡಂಬಾರಿ

ಗಂಗಾವತಿಯ ಹೊಸ್ಕೇರಾ ಗ್ರಾಮದಲ್ಲಿ ಹಲವು ದಲಿತ ಯುವಕರ ತಲೆ ಒಡೆಯಲಾಗಿದೆ. ಅವರ ರಕ್ಷಣೆಗೆ ಪೊಲೀಸ್ ಠಾಣೆಗೆ ಧಾವಿಸಿ ಬಂದ ಸಿಪಿಐ(ಎಂ) ಮುಖಂಡರ ಮೇಲೆ ಅಮಾನುಷವಾಗಿ ಥಳಿಸಲಾಗಿದೆ. ಯಾಕೆ? ಇದರ ಹಿಂದೇನಿದೆ?

ಹೊಸ್ಕೆರಾ: ದಲಿತರ ಮೇಲೆ ಭೂಮಾಲೀಕರ ದೌರ್ಜನ್ಯ

ಆರ್.ರಾಮಕೃಷ್ಣ

ದಲಿತರ ಸಂಕಷ್ಟಗಳಲ್ಲಿ ಬಡತನ, ಇತ್ಯಾದಿ ಅಸಮಾನತೆ, ಆರ್ಥಿಕ ಶೋಷಣೆ, ಆರ್ಥಿಕ ಅಂಶಕ್ಕೆ ಆದ್ಯತೆ ಕೊಡಬೇಕೋ, ಅಥವಾ ಅವರು ಅಸ್ಪೃಶ್ಯತೆ ಜಾತಿ ತಾರತಮ್ಯದಂತಹ ಪ್ರಶ್ನೆಗಳಿಗೆ ಪ್ರಾಮುಖ್ಯತೆ ಕೊಡಬೇಕೋ ಎಂಬುದು ದಲಿತ ಚಳುವಳಿ ಮತ್ತು ಕಮ್ಯೂನಿಸ್ಟ್ ಚಳುವಳಿಯೊಳಗೆ ಬಹಳವಾಗಿ ಚರ್ಚಿತವಾಗಿ ಹೋಗಿರುವ ವಿಷಯ.

ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲ್ಲೂಕಿನ ಹೊಸ್ಕೆರಾ ಎಂಬ ಗ್ರಾಮದಲ್ಲಿ ಮೊನ್ನೆ ಮೊನ್ನೆ ದಲಿತ ಯುವಕರು ಅವರ ಪೋಷಕರು ಹಾಗೂ ದಲಿತರ ರಕ್ಷಣೆಗೆಂದು ಬಂದವರ ಮೇಲೆ ನಡೆದಿರುವ ದೌರ್ಜನ್ಯಗಳನ್ನು ನೋಡಿದರೆ ಈ ವಿಷಯದ ಸಂಕೀರ್ಣತೆ ಮತ್ತು ಅದನ್ನು ನೋಡಲು ಬೇಕಾದ ದೃಷ್ಟಿ ಎರಡೂ ಅರ್ಥವಾಗುತ್ತದೆ ಎನಿಸುತ್ತದೆ.

ಹೊಸ್ಕೆರಾ ಎಂಬ ಗ್ರಾಮದಲ್ಲಿ

ಹೊಸ್ಕೆರಾ ಸುಮಾರು 4000 ಜನಸಂಖ್ಯೆ ಇರುವ ಒಂದು ಗ್ರಾಮ. ಡಿಸೆಂಬರ್ 26ರ ಸಂಜೆ ದಲಿತ ಕೇರಿಯ ಸಮುದಾಯ ಭವನಕ್ಕೆ ನುಗ್ಗಿದ ಸವರ್ಣೀಯ ಯುವಕರ ತಂಡ ಅಲ್ಲಿದ್ದ ದಲಿತ ಸಮುದಾಯಕ್ಕೆ ಸೇರಿದ ವಿರೇಶ, ರಾಮು, ಹನುಮಂತ ಎಂಬುವವರ ಮೇಲೆ ಎರಗಿ ಕಲ್ಲುಗಳಿಂದ ಬಡಿದು ಅವರ ತಲೆಗೆ ತೂತಿಕ್ಕಿದರು. ಭೀಮ, ಹನುಮಂತಪ್ಪ ಎಂಬುವವರ ಮೇಲೂ ಕೈಮಾಡಿದ ಇವರು ಅವರನ್ನು ಬಡಿದರು.

ಏನು ಕಾರಣ ಅವರನ್ನು ಹೀಗೆ ಬಡಿಯಲು. ಆ ಊರಿನಲ್ಲಿ ಅಂದು ರೇಷನ್ ಕಾರ್ಡುದಾರರ ಫೋಟೋ ತೆಗೆಯುವ ಕೆಲಸ ನಡೆಯುತ್ತಿತ್ತು. ಊರಿನ ಸರ್ಕಾರಿ ಶಾಲೆಯಲ್ಲಿ ಅಂದರೆ ಸವರ್ಣೀಯರ ಕೇರಿಯಲ್ಲಿ ಅದು ನಡೆದಿತ್ತು. ಸವರ್ಣೀಯರಿಗೆ ಸಮಸ್ಯೆಯಾಗದಿದ್ದರೆ ದಲಿತರಿಗೆ ಅದೇನು ದೊಡ್ಡ ಸಮಸ್ಯೆಯಲ್ಲ. ಆದರೆ ದಲಿತರ ಕಷ್ಟವೇ ಬೇರೆ. ದೇಶದ ಉದ್ದಗಲಕ್ಕೂ ಇರುವ ವಾಸ್ತವ ಸತ್ಯದಂತೆ ಇಲ್ಲೂ ದಲಿತರೆಂದರೆ ಬಹುತೇಕ ಭೂಮಿ ಇಲ್ಲದ ಕೃಷಿ ಕೂಲಿಕಾರರು. ಹಗಲು ಹೊತ್ತಿನಲ್ಲಿ ಕೂಲಿ ಬಿಟ್ಟು ಬಂದು ಫೋಟೋ ತೆಗೆಸಲು ಆಗಿಲ್ಲ. ಕೆಲಸ ಮುಗಿಸಿ ಹೊರಡಲು ಸಿದ್ಧವಾಗಿದ್ದ ಸಿಬ್ಬಂದಿಯಲ್ಲಿ ಅವರು ತಮ್ಮ ಕೇರಿಗೆ ಬಂದು ಸಂಜೆ ಕೂಲಿ ಮುಗಿಸಿ ಬಂದವರದ್ದು ಫೋಟೋ ತೆಗೆಯಲು ವಿನಂತಿಸಿದ್ದಾರೆ. ಅದಕ್ಕೆ ಒಪ್ಪಿದ ಸಿಬ್ಬಂದಿ ಹೊಸ್ಕೇರಾ ಡಗ್ಗಿಯ ಸಮುದಾಯ ಭವನದಲ್ಲಿ ಫೋಟೋ ತೆಗೆಯುತ್ತಿದ್ದಾಗ ನಾಗೇಶ ಮತ್ತು ಜೊತೆಗೆ ಮೂರು ಮಂದಿ ಕುಡಿದು ಬಂದು ಹೆಣ್ಣು ಮಕ್ಕಳನ್ನು ಎಳೆದಾಡಿ ಗದ್ದಲ ಮಾಡಿ ಬಯ್ದಿದ್ದಾರೆ. "ಮಾದಿಗ ಸೂ..... ಮಕ್ಕಳ ನೀವೇಳಿದಂಗೆ ಕೇಳ್ಬೇಕೇನ್ರೋ......" ಅಂತೆಲ್ಲಾ ಕೂಗಾಡಿ ಗದ್ದಲ ಮಾಡಿದ್ದಾರೆ. ದಾರಿಯ ಅಂಗಡಿಯೊಂದರಲ್ಲಿ ಸಿಕ್ಕ ತೂಕದ ಕಲ್ಲುಗಳನ್ನು ತೆಗೆದುಕೊಂಡು ತಲೆಗೆ ಬಡಿದಿದ್ದಾರೆ.


ದೂರು ಕೊಡಬೇಕಾಗಿದ್ದವರು ದಲಿತರು. ಆದರೆ....

ಇಷ್ಟಾದ ಮೇಲೆ ದೂರು ಕೊಡಬೇಕಾಗಿದ್ದವರು ದಲಿತರು. ಅವರ ಕಷ್ಟ ನೋಡಿ. ಅವರು ಆ ಅಪರಾತ್ರಿಯಲ್ಲಿ 13 ಕಿಲೋ ಮೀಟರ್ ದೂರದ ಗಂಗಾವತಿ ಗ್ರಾಮೀಣ ಪೊಲೀಸ್ ಠಾಣೆ ತಲುಪಲು ಅವರಿಗೆ ತಮ್ಮದೂ ಅಂತ ಒಂದು ಕಾರು, ಜೀಪು ಬಿಡಿ, ಒಂದು ಮೋಟಾರು ಬೈಕು ಸಹ ಇಲ್ಲ. ಎರಡು ಕಿ.ಮೀ ನಡೆದು ಪ್ರಗತಿನಗರಕ್ಕೆ ಭಂದು ಅಲ್ಲಿಂದ ಬಸ್ ಹತ್ತಿ ಬಂದಿದ್ದಾರೆ. ಅವರು ಠಾಣೆಗೆ ಬರುವ ಹೊತ್ತಿಗಾಗಲೇ ಏಟು ತಿಂದ ದಲಿತರ ಮೇಲೇ ದೂರು ದಾಖಲಾಗಿದೆ. ಹಲ್ಲೆ ಮಾಡಿದ ಅವರ ಬಳಿ ಮೋಟಾರು ಬೈಕ್‌ಗಳಿವೆ. ಈ ಹಲ್ಲೆಕೋರರ ಬೆನ್ನೆಲುಬಾಗಿ ದಾಳಿಗೆ ಪ್ರೇರಣೆ ಕೊಟ್ಟ ಗ್ರಾಮದ ಸವರ್ಣೀಯ ಕರಡಿ ಲಿಂಗಪ್ಪ, ಹುಲಿಗೆಪ್ಪ, ಯಂಕನಗೌಡ ಇವರೆಲ್ಲಾ ಭೂಮಾಲಕರು, ಶ್ರೀಮಂತ ರೈತರು. ಅವರ ಬಳಿ ಕಾರೂ ಇದೆ. ಜೀಪೂ ಇದೆ. ಇರಲಿ, ಈ ಭೂಮಾಲಕರ ಜೊತೆಗೆ ಕೈಜೋಡಿಸಿರುವವರು ವಕೀಲ ತಿಪ್ಪೇರುದ್ರಸ್ವಾಮಿ, ಮರಿಸ್ವಾಮಿ ಇತರರು. ತಿಪ್ಪೇರುದ್ರಸ್ವಾಮಿ ಆರೆಸ್ಸೆಸ್‌ನ ಮನುಷ್ಯ. ಅಷ್ಟು ಮಾತ್ರವಲ್ಲ, ಬಿಜೆಪಿಯ ರೈತ ಮೋರ್ಚಾದ ತಾಲ್ಲೂಕು ಅಧ್ಯಕ್ಷ.

ಭಾರಿ ಸ್ಪಂದನ! ಬಹುಮಾನ!!

ಇತ್ತ ಗಂಗಾವತಿ ಪೊಲೀಸ್ ಠಾಣೆಯಲ್ಲಿ ಏನಾಯ್ತು? ಹಲ್ಲೆಗೊಳಗಾಗಿ ಬಸವಳಿದು ತಡವಾಗಿ ಪೊಲೀಸ್ ಠಾಣೆಗೆ ಬಂದ ದಲಿತರಿಗೆ ಭಾರಿ ಸ್ಪಂದನವೇ ಸಿಕ್ಕಿತು. ದಲಿತರ ದೂರು ದಾಖಲಿಸಲು ನಿರಾಕರಿಸಿದ ಠಾಣೆಯ ಸಬ್ ಇನ್ಸ್‌ಪೆಕ್ಟರ್ ಕಿರಣ್‌ಕುಮಾರ್ ಎಸ್.ನೀಲಗಾರ್, ದಲಿತ ಭೀಮಣ್ಣನ ಕುರಿತು ಅವಾಚ್ಯ ಶಬ್ದಗಳಿಂದ ಬೈದು, ಜಾತಿ ನಿಂದನೆ ಮಾಡಿದ್ದಾರೆ.

ಪೊಲೀಸ್ ಠಾಣೆಯಲ್ಲಿದ್ದುಕೊಂಡು ಹಲ್ಲೆಗೊಳಗಾದವರು ಬರುವುದನ್ನೇ



ಕಾಯುತ್ತಿದ್ದವರು ಗಂಗಾವತಿ ಸಿಪಿಐ(ಎಂ) ಪಕ್ಷದ ತಾಲ್ಲೂಕು ಕಾರ್ಯದರ್ಶಿ ನಾಗರಾಜ್, ಜಿಲ್ಲಾ ಕಾರ್ಯದರ್ಶಿ ಹಾಗೂ ವಕೀಲರಾದ ಆರ್.ಕೆ.ದೇಸಾಯಿ. ಯಾವಾಗ ಎಸ್.ಐ. ಎರ್ರಾಬಿರ್ರಿ ಮಾತು ಕೇಳಿದ್ರೋ ಆಗ ಮಧ್ಯಪ್ರವೇಶ ಮಾಡಿ ಪ್ರಶ್ನಿಸಿದ್ದಾರೆ. ನಾಗರಾಜ್ ತೆಳ್ಳಗಿನ ದೇಹದ ಸಂಗಾತಿ. ಕಿರಣ್‌ಕುಮಾರ್ ಇರುವುದು ದಾಂಡಿಗನಂತೆ. ಆ ಮನುಷ್ಯ ನಾಗರಾಜರನ್ನು ನೆಲಕ್ಕೆ ಕೆಡವಿ ಬೂಟು ಕಾಲಿಂದ ಒದ್ದು ಎದೆಯ ಮೇಲೆ ಕಾಲಿಡಬೇಕೇ? ತಾನೇನೋ ಕಾಳಿಂಗ ಮರ್ದನ ಮಾಡುತ್ತಿರುವ ಶ್ರೀಕೃಷ್ಣ ಪರಮಾತ್ಮ ಅಂತಾ ಭಾವಿಸಿಕೊಂಡರೋ ಏನೋ.

ಆರ್.ಕೆ.ದೇಸಾಯಿ ಅಡ್ಡಬಂದಿದ್ದಾರೆ. ಅವರಿಗೂ ಬಿದ್ದವು ಬಡಿತ. ಆಮೇಲೆ ಇಬ್ಬರ ಬಂಧನ. ಮೊಕದ್ದಮೆ. ಹೇಗಿದೆ? ದಲಿತರ ಪರವಾಗಿ ದನಿ ಎತ್ತಿದ್ದಕ್ಕೆ ಬಹುಮಾನ!!

ಆದರೆ ಸಿಪಿಐ(ಎಂ) ಪಕ್ಷಕ್ಕೆ ಇಂಥದ್ದು ಹೊಸತು ಅಲ್ಲ. ಇಂಥದ್ದು ತೀರಾ ಅನಿರೀಕ್ಷಿತವೂ ಅಲ್ಲ. ಅಲ್ಲಿ ಕಳೆದ ಹಲವು ದಶಕಗಳಿಂದ ಸಿಪಿಐ(ಎಂ) ಪಕ್ಷವು ಇಂಥಾ ದೌರ್ಜನ್ಯ ದಬ್ಬಾಳಿಕೆಯ ವಿರುದ್ಧ ಸೆಣಸುತ್ತಲೇ ಬರುತ್ತಿದೆ.

ಯಾಕೆ ಈ ಪರಿ ದೌರ್ಜನ್ಯ

ದಲಿತರ ಮೇಲೆ ನಡೆದ ದೌರ್ಜನ್ಯಕ್ಕೆ ಫೋಟೋ ತೆಗೆಸುವುದು, ಅದು ಇದೂ ಎಲ್ಲ ತತ್‌ಕ್ಷಣದ ಕಾರಣಗಳಷ್ಟೇ. ಇದರ ಮೂಲ ಕಾರಣಗಳು ಬೇರೆಯೇ ಇವೆ. ಸುಮಾರು ನಲವತ್ತು ವರ್ಷಗಳ ಹಿಂದೆ ಬರಡು ನಾಡಾಗಿದ್ದ ಗಂಗಾವತಿ ತಾಲ್ಲೂಕಿನ ಭೂಮಿಗೆ ನೀರಾವರಿ ಸೌಲಭ್ಯ ದೊರಕಿದಾಗ, ತಾಲ್ಲೂಕಿನಲ್ಲಿ ಅದರ ಲಾಭ ಹೆಚ್ಚಾನೆಚ್ಚು ದಕ್ಕಿದ್ದು ಏಕಕಾಲಕ್ಕೆ ಮೇಲ್ಜಾತಿಯವರು, ಭೂಮಾಲೀಕರೂ ಆಗಿದ್ದ ಶ್ರೀಮಂತರಿಗೆ. ಇಷ್ಟಕ್ಕೇ ತೃಪ್ತರಾಗದ ಭೂಮಾಲಕರ ಕಣ್ಣು ತಾಲ್ಲೂಕಿನ ಸಾವಿರಾರು ಎಕರೆ ಸರ್ಕಾರಿ ಜಮೀನಿನ ಮೇಲೆ ಬಿತ್ತು. 70ರ ದಶಕದ ಕೊನೆಯಲ್ಲಿ ರಾಜ್ಯದಲ್ಲಿ ಭೂಸುಧಾರಣೆ ಅಂತ ಆದಾಗ ಗಂಗಾವತಿಯಲ್ಲಿ ನಿರ್ಧಿಷ್ಟವಾಗಿ ಏನಾಯ್ತು ಗೊತ್ತೇ? ಸರ್ಕಾರದ ಭೂಮಿ ದಲಿತರ ಹೆಸರಿಗೆ ಮಂಜೂರಾಯ್ತು. ಆದರೆ ಆ ಬಗ್ಗೆ ಆ ದಲಿತರಿಗೆ ಏನು ಗೊತ್ತಿರಲೇ ಇಲ್ಲ. ಭೂಮಿ ಮಾತ್ರ ಭೂಮಾಲಕರ ವಶದಲ್ಲೇ ಇತ್ತು. ಗ್ರಾಮಗಳ ಭೂಮಾಲಕರಿಂದ 'ಎಲ್ಲೂ ಇಲ್ಲದ' ದಲಿತರ ಹೆಸರಿಗೆ ಭೂಮಿ ವರ್ಗಾವಣೆಯಾಯ್ತು. ಆದರೆ ಆ ಜಮೀನು ಭೂಮಾಲಕರ ಕಬ್ಜಾದಲ್ಲೇ ಉಳಿಯಿತು. ಹೀಗೆ ಹೇಳುತ್ತಾ ಹೋದರೆ ದೊಡ್ಡ ಪಟ್ಟಿಯನ್ನೇ ಮಾಡಬಹುದು.

ಕೃಷಿ ಕೂಲಿಕಾರರ ಸಂಘದ ಪ್ರವೇಶ

ಗಂಗಾವತಿಯ ಹತ್ತಾರು ಗ್ರಾಮಗಳಲ್ಲಿ ದಲಿತರನ್ನು ಅವರ ಜೀವನದ ಕೇಂದ್ರ ಪ್ರಶ್ನೆಯಾದ ಭೂಮಿಯ ಆಧಾರದಲ್ಲಿ - ಅದರ ಜೊತೆಜೊತೆಗೆ ಅಸ್ಪೃಶ್ಯತೆ, ಜಾತಿ ತಾರತಮ್ಯಗಳ ವಿರುದ್ಧದ ಹೋರಾಟಗಳ ಆಧಾರದಲ್ಲಿ ಸಂಘಟಿಸಿದ್ದು ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘ. ಜಾತಿ ತಾರತಮ್ಯ, ಅಸ್ಪೃಶ್ಯತೆಯಂತಹ ಸಾಮಾಜಿಕ ಪ್ರಶ್ನೆಗಳನ್ನು ಮಾತ್ರ ತೆಗೆದುಕೊಳ್ಳುವ ದಲಿತ ಸಂಘಗಳ ಧೋರಣೆಯಿಂದ ಬೇಸತ್ತ ದಲಿತರು ಕೃಷಿ ಕೂಲಿಕಾರರ ಸಂಘದೊಂದಿಗೆ ಗಟ್ಟಿಯಾಗಿ ನಿಂತರು. ತಮ್ಮ ಹೆಸರಿನಲ್ಲಿ ಭೂಮಿ ಇರುವುದೇ ಗೊತ್ತಿಲ್ಲದಿದ್ದ ಹೇರೂರಿನ ದಲಿತರಿಗೆ ಸಂಘದ ಹೋರಾಟದಿಂದ 25 ಎಕರೆ ಜಮೀನು ದೊರೆಯಿತು. ಸಿಂಗನಾಳ ಗ್ರಾಮದಲ್ಲಿ 50 ಎಕರೆ, ಗೋಡ್‌ನಾಳದಲ್ಲಿ 700 ಎಕರೆ, ಗಾಳಮ್ಮ ಗುಡಿ ಕ್ಯಾಂಪ್‌ನಲ್ಲಿ 20 ಎಕರೆ, ಶ್ಯಾಲಿಗನೂರು ಗ್ರಾಮದಲ್ಲಿ 10 ಎಕರೆ ಭೂಮಿ ದಲಿತರಿಗೆ ಹೋರಾಟದಿಂದ ಸಿಕ್ಕಿತು.

ಬರೀ ಭೂಮಿ ಮಾತ್ರವಲ್ಲ ಅಸ್ಪೃಶ್ಯತೆ, ಸಾಮಾಜಿಕ ತಾರತಮ್ಯ, ಅಪಮಾನ, ಅವಮಾನಗಳ ವಿರುದ್ಧ, ರೇಷನ್ ಕಾರ್ಡ್, ಮನೆ ನಿವೇಶನ ಇತ್ಯಾದಿಗಳಿಗಾಗಿ ಸಂಘದ ಹೋರಾಟ ಬಲಗೊಳ್ಳುತ್ತಾ ಬಂತು. ಇಂತಹ ಹೋರಾಟವು ತಾಲ್ಲೂಕು ದಿನೇ ದಿನೇ ಬಲಗೊಳ್ಳುತ್ತಾ ಕೂಲಿಕಾರರ ಸಂಘ ಬಲಗೊಳ್ಳುತ್ತಾ ಸಿಪಿಐ(ಎಂ) ಪಕ್ಷ ವಿಸ್ತರಿಸುತ್ತಾ ಇದೀಗ ಹೊಸ್ಕೇರಾ ಗ್ರಾಮದ ದಲಿತರೂ ತಮ್ಮ ಮೇಲಿನ ದೌರ್ಜನ್ಯ ಅನ್ಯಾಯದ ವಿರುದ್ಧ ಸಂಘಟಿತ ಹೋರಾಟ ಆರಂಬಿಸಿದ್ದಾರೆ. ಇದೇ ಈ ತಾಲ್ಲೂಕಿನ ಸವರ್ಣೀಯ ಭೂಮಾಲಕರನ್ನು ಕೆರಳಿಸಿರುವ ಅಂಶ. ಹೇಗಾದರೂ ಮಾಡಿ ದಲಿತರನ್ನು, ಅವರಿಗೆ, ಧ್ವನಿಯಾಗಿ ದುಡಿಯುತ್ತಿರುವ ಕೂಲಿಕಾರರ ಸಂಘ ಮತ್ತು ಕಮ್ಯೂನಿಸ್ಟ್ ಪಕ್ಷವನ್ನು ಬಗ್ಗು ಬಡಿಯಬೇಕೆನ್ನುವುದು ಅವರ ಸಂಚು.

ಇಂಥ ದೌರ್ಜನ್ಯ ಇದೇ ಮೊದಲಲ್ಲ

ತಾಲ್ಲೂಕಿನಲ್ಲಿ ಈಗ ನಡೆದ ದೌರ್ಜನ್ಯವೇನೂ ಮೊದಲನೆಯದು ಅಲ್ಲ. ಕೊನೆಯದೂ ಆಗಲಾರದು. ದಲಿತ ಸಮುದಾಯದ ದೇವದಾಸಿಯ ಮಗನಾಗಿ ಹುಟ್ಟಿ ಬೆಳೆದು ಭೂಮಾಲಿಕರ ದೌರ್ಜನ್ಯಗಳ ವಿರುದ್ಧ ದಲಿತರನ್ನು ಸಂಘಟಿಸಿ ಕೂಲಿಕಾರರ ಮತ್ತು ಕಮ್ಯೂನಿಸ್ಟ್ ಪಕ್ಷದ ದೊಡ್ಡ ಮುಖಂಡರಾಗಿ ಬೆಳೆದ ಕಾಂ.ಬಾಳಪ್ಪ ಅವರ ಮೇಲೆ 1995ರಲ್ಲಿ ಭೂಮಾಲಕರು ಮಾರಣಾಂತಿಕ ದಾಳಿ ಮಾಡಿದ್ದರು. ಇದರಿಂದ ಅವರು ಹೋರಾಟ ಕೈಬಿಡದಿದ್ದರೂ ಜೀವನ ಪೂರ್ತಿ ಮುರಿದ ತೊಡೆ ಮೂಳೆಯ ನೋವಿನೊಂದಿಗೆ ಭೂಮಾಲಕರ ವಿರುದ್ಧ ಸೆಣಸುವಂತಾಯಿತು. ಇನ್ನೂ 2004ರಲ್ಲಿ ಗೋನಾಳ ಗ್ರಾಮದಲ್ಲಿ ದಲಿತ ಬಸವರಾಜನನ್ನು ಭೂಮಾಲಕರು ಕೊಂದೇಬಿಟ್ಟರು. ಗುಂಪು ದಾಳಿ, ದೌರ್ಜನ್ಯಗಳಿಗೆ ಲೆಕ್ಕವೇ ಇಲ್ಲ. ಇಂತಹ ಸಂದರ್ಭದಲ್ಲೆಲ್ಲಾ ಹೆಚ್ಚಾಗಿ ಪೊಲೀಸರು ಭೂಮಾಲಿಕರ ಪರವಾಗಿ ಇರುತ್ತಾರೆ ಎಂದೇನೂ ಹೆಚ್ಚು ವಿವರಿಸಲು ಅಗತ್ಯವಿಲ್ಲ.

ಇದನ್ನೆಲ್ಲಾ ಎದುರಿಸಿ ಕೂಲಿಕಾರರ ಸಂಘ, ಕಮ್ಯೂನಿಸ್ಟ್ ಪಕ್ಷ ಬೆಳೆಯುತ್ತಿದೆ. ಈಗ ಹೊಸ್ಕೇರಾ ಗ್ರಾಮದಲ್ಲಿ ಭೂಮಾಲಿಕರ ಕೆಂಗಣ್ಣಿಗೆ ಗುರಿಯಾಗಿರುವ ಅಂಶ ಏನೆಂದರೆ ಭೂಮಾಲಿಕರು ಒತ್ತುವರಿ ಮಾಡಿಕೊಂಡಿರುವ ದಲಿತರ ಸ್ಮಶಾನ ಭೂಮಿಯನ್ನು ದಲಿತರು ಮರಳಿ ಕೇಳುತ್ತಿರುವುದು ಮತ್ತು ಇಂತಹ ಅಂಶಗಳು. 4 ಎಕರೆ ಇದ್ದ ಸ್ಮಶಾನ ಭೂಮಿ ಈಗ 1/2 ಎಕರೆಗೆ ಬಂದಿದೆ. ಪಂಚಾಯ್ತಿಯ ದಲಿತ ಮಹಿಳಾ ಮೀಸಲು ಕ್ಷೇತ್ರದ ಅಧ್ಯಕ್ಷರ ಸ್ಥಾನಕ್ಕೆ ಯಾರಾಗಬೇಕು, ಕೂಲಿಕಾರರ ಸಂಘದ ಮಾತು ಕೇಳುವವರೋ ಇಲ್ಲ, ಇಲ್ಲಿ ಭೂಮಾಲಕರ ಮಾತು ಕೇಳುವವರೋ ಎಂಬಂತಹ ಪ್ರಶ್ನೆಗಳೂ ಇಲ್ಲಿವೆ. ಇಂತಹ ಪ್ರಕರಣದಲ್ಲಿ ಚುನಾಯಿತ ಪಂಚಾಯ್ತಿ ಸದಸ್ಯರುಗಳನ್ನೇ ಅಪಹರಿಸಿದ ಕೀರ್ತಿ ಈ ಭೂಮಾಲಕರಿಗಿದೆ.

ಕೃಷಿ ಕೂಲಿಕಾರರ ಸಂಘದ ರಾಜ್ಯಪ್ರಧಾನ ಕಾರ್ಯದರ್ಶಿ ಚಂದ್ರಪ್ಪ ಹೊಸ್ಕೇರಾ ಇದೇ ಗ್ರಾಮದವರಾಗಿದ್ದು ಅವರು ನಿರಂತರವಾಗಿ ಆ ಗ್ರಾಮದಲ್ಲಿ ವಾಸ ಇಲ್ಲದಿದ್ದರೂ ಹೋರಾಟಗಳ ಹಿಂದಿನ ಪ್ರೇರಣೆ ಅವರೇ ಎಂದು ನಂಬಿರುವ ಭೂಮಾಲಿಕರು ಮತ್ತು ಅವರ ಏಜೆಂಟರು ಈಗ ಅವರ ಕುಟುಂಬ ವರ್ಗದವರ ಮೇಲೆ ಎರಗಿಬಿದ್ದಿದ್ದಾರೆ. ಅವರ ತಂದೆ ಮತ್ತು ಅವರ ತಮ್ಮಂದಿರ ಮೇಲೆಯೂ ಠಾಣೆಯಲ್ಲಿ ದೂರು ಕೊಟ್ಟು ತಮ್ಮ ದ್ವೇಷ ಕಾರುತ್ತಿದ್ದಾರೆ.

ಚಂದ್ರಪ್ಪ, ಬಾಳಪ್ಪ, ಅವರಂತಹ ಮುಖಂಡರೂ ದಲಿತ ಸಮುದಾಯದ ನಡುವಿನಿಂದಲೇ ಬೆಳೆದು ಬಂದವರು. ಆದರೆ ಕಮ್ಯೂನಿಸ್ಟ್ ಪಕ್ಷ, ಕೂಲಿಕಾರರ ಸಂಘಗಳು ಜಾತಿ ಆಧಾರಿತವಾಗಿ ಸಮಾಜವನ್ನು ಸೀಳಿ ಭಾಗ ಮಾಡುವುದರ ಅಪಾಯವೇನೆಂದು ಚೆನ್ನಾಗಿ ಅರಿತಿವೆ. ಹೀಗಾಗಿ ಮಾನವೀಯತೆ ಹಾಗೂ ನ್ಯಾಯದ ಪರವಾಗಿ ಬರುವ ಎಲ್ಲರನ್ನೂ ಜೊತೆಯಲ್ಲಿ ಅವು ಒಯ್ಯುತ್ತಿವೆ. ಜಾತಿಯ ಗೋಡೆಗಳನ್ನು ಅಡ್ಡ ಇಟ್ಟಿಲ್ಲ. ಹೀಗಾಗಿ 26ರ ಸಂಜೆ ದಲಿತರ ಪರವಾಗಿ ರಕ್ಷಣೆಗೆ ಠಾಣೆಗೆ ಬಂದು ಹೊಡೆತ ತಿಂದವರು ಹುಟ್ಟಿನಿಂದ ದಲಿತೇತರ ಸಮುದಾಯದಿಂದ ಬಂದವರು.

ದಲಿತರ ಮೇಲಿನ ದೌರ್ಜನ್ಯವನ್ನು ಬರೀ ದಲಿತರು ಮಾತ್ರ ಖಂಡಿಸಬೇಕಿಲ್ಲ. ಎಲ್ಲರಿಗೂ ಆ ಜವಾಬ್ದಾರಿ ಇದೆ ಎಂಬ ಎಚ್ಚರಿಕೆಗೆ ಇದೊಂದು ಸಾಕ್ಷಿ. ಸವರ್ಣೀಯ ಭೂಮಾಲಿಕರ ಏಜೆಂಟರಂತೆ ಬಂದು "ಮಾದಿಗ...." ಇತ್ಯಾದಿಯಾಗಿ ಜಾತಿ

ಪುಟ 12 ಕ್ಕೆ

ರಾಮದುರ್ಗದಲ್ಲೊಂದು ದುಡಿವ ಜನರ ಜಾತ್ರೆ


ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ರಾಮದುರ್ಗ ಪ್ರಾದೇಶಿಕ ಸಮಿತಿಯ ಸಮ್ಮೇಳನವು ಡಿಸೆಂಬರ್ 07 ಮತ್ತು 08 ರಂದು ರಾಮದುರ್ಗ ನಗರದ ಸರಸ್ವತಿ ಕಲ್ಯಾಣ ಮಂಟಪದಲ್ಲಿ ಜರುಗಿತು.

3 ವರ್ಷಗಳು ಕಳೆದವು ಮತ್ತೆ ಸಮ್ಮೇಳನ, ವರದಿ. ವರದಿ ಮೇಲೆ ಚರ್ಚೆ ಹೀಗೆ ಒಂದು ರೀತಿಯ ಉತ್ಸಾಹ ಕಾರ್ಯಕರ್ತರಲ್ಲಿ ಮೂಡಿತು. ಎರಡು ದಿನಗಳಿಂದ ಎಲ್ಲರೂ ಕೆಲಸ ಹಂಚಿಕೊಂಡು ತಮ್ಮ ತಮ್ಮ ಕೆಲಸದಲ್ಲಿ ಮಗ್ನರಾಗಿ ಕೊನೆಗೂ ರಾಮದುರ್ಗ ಪ್ರಾದೇಶಿಕ ಸಮಿತಿಯ ಸಮ್ಮೇಳನವು ಯಶಸ್ವಿಯಾಯಿತು.

07.12.2007ರಂದು ಸಮ್ಮೇಳನದ ಉದ್ಘಾಟನೆ, ಸಮ್ಮೇಳನ ನಡೆಯುವ ಸ್ಥಳ ಕೆಂಪು ಧ್ವಜಗಳಿಂದ ಕಂಗೊಳಿಸುತ್ತಿತ್ತು. ಸರಿಯಾಗಿ ಮಧ್ಯಾಹ್ನ 12.00 ಗಂಟೆಗೆ ಹಿರಿಯರಾದ ಎಚ್.ಎಚ್.ಕಪ್ಪನ್ನವರ ರವರು ಸಮ್ಮೇಳನದ ಅಂಗವಾಗಿ ಧ್ವಜಾರೋಹಣ ಮಾಡಿ ಕೆಂಪು ಧ್ವಜದ ಕುರಿತು ಕೆಲವು ಮಾತುಗಳನ್ನು ಹೇಳುವ ಮೂಲಕ 'ಇಂಕ್ವಿಲಾಬ್ ಜಿಂದಾಬಾದ್' ಎಂಬ ಘೋಷಣೆ ಮೊಳಗಿತು. ನಂತರ ಪ್ರತಿನಿಧಿ ಸಂಗಾತಿಗಳು ಕಾಂ: ಡಿ.ಎಂ.ಖಲಾಸಿ ವೇದಿಕೆಯತ್ತ ಸಾಗುತ್ತಾ ಡಿ.ಎಂ. ಖಲಾಸಿಯವರ ಭಾವಚಿತ್ರಕ್ಕೆ ಹೂವುಗಳನ್ನು ಅರ್ಪಿಸಿ ಲಾಲ್ ಸಲಾಮ್ ಹೇಳಿ ಸಮ್ಮೇಳನದ ಕಲಾಪಗಳಲ್ಲಿ ಭಾಗಿಯಾದರು.

"ಇಡೀ ದೇಶದಲ್ಲಿ ಕಾರ್ಮಿಕರನ್ನು ರೈತರನ್ನು ಸಂಘಟಿಸಿ ಹೋರಾಟ ಮಾಡಿ ಅವರ ಸಮಸ್ಯೆಗಳಿಗೆ ಸ್ಪಂದಿಸಿ ನವ ಸಮಾಜ ಕಟ್ಟುವ ಕೆಲಸದಲ್ಲಿ ಎಡಪಕ್ಷಗಳು ಭಾಗಿಯಾಗಿವೆ. ಮೂರು ವರ್ಷಕ್ಕೊಮ್ಮೆ ಈ ರೀತಿ ಸಮ್ಮೇಳನ ನಡೆದು ನಾವು ಮಾಡಿದ ಚಳುವಳಿಗಳ ಬಗ್ಗೆ ಚರ್ಚೆ ನಡೆಯುವುದೇ ಸಮ್ಮೇಳನ. ಈ ರೀತಿ ಯಾವ ಪಕ್ಷದಲ್ಲೂ ನಡೆಯುವುದಿಲ್ಲ. ಬೇರೆ ಬೇರೆ ಪಕ್ಷದಲ್ಲಿ ಆ ಪಕ್ಷದ ಮುಖಂಡರು ಹೇಳಿದ ಮಾತೇ ವೇದ ವಾಕ್ಯ. ಆದರೆ ಎಡಪಕ್ಷಗಳಲ್ಲಿ ಈ ರೀತಿ ನಡೆಯುವುದಿಲ್ಲ. ನಾವೆಲ್ಲರೂ ಕೂಡಿ ಚರ್ಚೆ ಮಾಡಿ ಮುಂದಿನ ಹೋರಾಟದ ಕುರಿತು ಚರ್ಚೆ ಮಾಡುತ್ತೇವೆ". ಸಮ್ಮೇಳನವನ್ನು ಉದ್ಘಾಟಿಸಿ ರಾಜ್ಯ ಸಮಿತಿ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕಾಂ: ನಿತ್ಯಾನಂದ ಸ್ವಾಮಿಯವರು ಹೀಗೆಂದು ಮಾತನಾಡುತ್ತಾ, ಸಮ್ಮೇಳನ ಕುರಿತು ಪ್ರತಿನಿಧಿ ಸಂಗಾತಿಗಳಿಗೆ ಮನದಟ್ಟು ಮಾಡಿದರು.

"ನಮ್ಮ ಜೊತೆ ಖಾಯಂ ಆಗಿ ಇರುವ ಜಮಾತವೆಂದರೆ ಕಮ್ಯೂನಿಸ್ಟ್ ಪಾರ್ಟಿ ಜಮಾತ ಎಂದು ನಾವು ಹೇಳಿದ್ದೇವೆ. ಕಮ್ಯೂನಿಸ್ಟ್ ಪಾರ್ಟಿಯಿಂದಲೇ ಬಡವರ ಉದ್ದಾರ ಆಗುವುದು" ಎಂದು ಬೀಡಿ ಕಾರ್ಮಿಕ ಶಾಖೆಯ ಸಂಗಾತಿ ಜುಬೇದಾ ಪೆಂಡಾರಿ ಚರ್ಚೆಯ ಸಮಯದಲ್ಲಿ ಹೇಳಿದರು.



ಗೈಬು ಜೈನೆಖಾನ ವರದಿಯನ್ನು ಮಂಡಿಸಿದರು. ಸವದತ್ತಿ ಶಾಖೆ, ರಾಮದುರ್ಗ ನಗರ ಶಾಖೆ, ಭಾಗ್ಯನಗರ 'ಎ' ಮತ್ತು 'ಬಿ' ಶಾಖೆ, ರೈತ ಶಾಖೆ, ಬೀಡಿ ಕಾರ್ಮಿಕರ ಶಾಖೆ, ಅಂಗನವಾಡಿ ಶಾಖೆ, ಹಾಗೂ ಪಂಚಾಯತ್ ನೌಕರರ ಶಾಖೆಯವರು ವರದಿಯ ಮೇಲೆ ಚರ್ಚೆ ನಡೆಸಿದರು.

ಬೆದರಿಕೆಗೆ ಬಗ್ಗಲಿಲ್ಲ

"ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷ ರಾಮದುರ್ಗದಲ್ಲಿ ತನ್ನ ಕೆಲಸ ಪ್ರಾರಂಭ ಮಾಡಿದ ದಿನಗಳಿಂದಲೂ ಕಾರ್ಮಿಕರಿಗೆ ಹಾಗೂ ಇತರೆ ಎಲ್ಲಾ ಕಾರ್ಮಿಕರಿಗೆ ಆಸರೆಯಾಗಿದೆ. ಓಣಿಯ ಮುಸ್ಲಿಂ ಹಿರಿಯರು 'ಏಕೆ ಅಲ್ಲಿ ಹೋಗುತ್ತೀರಿ? ನಿಮ್ಮನ್ನು ಜಮಾತದಿಂದ ತೆಗೆಯುತ್ತೇವೆ, ಎಂದು ಹೆದರಿಸಿದರು. ನಮ್ಮ ಜೊತೆ ಖಾಯಂ ಆಗಿ ಇರುವ ಜಮಾತವೆಂದರೆ ಕಮ್ಯೂನಿಸ್ಟ್ ಪಾರ್ಟಿ ಜಮಾತ ಎಂದು ನಾವು ಹೇಳಿದ್ದೇವೆ. ಕಮ್ಯೂನಿಸ್ಟ್ ಪಾರ್ಟಿಯಿಂದಲೇ ಬಡವರ ಉದ್ದಾರ ಆಗುವುದು" ಎಂದು ಬೀಡಿ ಕಾರ್ಮಿಕ ಶಾಖೆಯ ಸಂಗಾತಿ ಜುಬೇದಾ ಪೆಂಡಾರಿ ಚರ್ಚೆಯ ಸಮಯದಲ್ಲಿ ಹೇಳಿದರು.



ಪ್ರತಿನಿಧಿಗಳ ಸಮೂಹ

ಓದಲು ಬರದಿದ್ದರೂ

ಯಾವತ್ತೂ ಮಾತನಾಡದ ಭಾಗ್ಯ ನಗರ 'ಎ' ಶಾಖೆಯ ಸಂಗಾತಿ ಕಾಂ. ಲೋಕೇಶ್ ಕಾಂಬಳೇಕರ ವರದಿ ಮೇಲೆ ಚರ್ಚೆ ಮಾಡುತ್ತಾ ಜನಶಕ್ತಿ ಪತ್ರಿಕೆಯ ಕುರಿತು ಮಾತನಾಡಿ ನನಗೆ ಓದಲು ಬರದೇ ಇದ್ದರೂ ಜನಶಕ್ತಿ ಪತ್ರಿಕೆಗೆ ನಾನು ಚಂದಾದಾರನಾಗುತ್ತೇನೆಂದು ಬೇರೆ ಯುವರಿಂದ ಓದಿಸಿಕೊಳ್ಳುತ್ತೇನೆ ಎಂದು ಹೇಳಿದರು. ಹಲವಾರು ಸಂಗಾತಿಗಳು ವರದಿ ಮೇಲೆ ಚರ್ಚೆ ಮಾಡಿದ್ದು ಗಮನ ಸೆಳೆಯಿತು.

ಕಳಸಾ ಬಂಡೂರ ನಾಲಾವನ್ನು ಮಲಪ್ರಭಾ ನದಿಗೆ ಜೋಡಿಸಲು ಒತ್ತಾಯಿಸಿ,

ಅರಣ್ಯ ಭೂಮಿ ಸಾಗುವಳಿ ಮಾಡಿದ ರೈತರಿಗೆ ಪಟ್ಟಾ ಕೊಡುವುದಕ್ಕಾಗಿ

ಎಲ್ಲಾ ಬಡವರಿಗೆ ಹಳದಿ ರೇಷನ್ ಕಾರ್ಡ್ ಒದಗಿಸುವುದು ಹಾಗೂ ಮೊದಲಿನಂತೆ ರೇಷನ್ ವ್ಯವಸ್ಥೆ ಜಾರಿ ಮಾಡುವುದಕ್ಕಾಗಿ

ಅಂಗನವಾಡಿ ನೌಕರರ ಮೇಲೆ ಒತ್ತಾಯ ಪೂರ್ವಕವಾಗಿ ರಚಿಸುತ್ತಿರುವ ಬಾಲ ವಿಕಾಸ ಸಮಿತಿ ರದ್ದುಪಡಿಸಲು,

ಬಿಸಿ ಅಡುಗೆ ಯೋಜನೆಯ ಖಾಸಗೀಕರಣ ವಿರೋಧಿಸಿ ಹಾಗೂ ಹೆಚ್ಚಳವಾದ ರೂ.100 ವೇತನ ಕೊಡಲು ಒತ್ತಾಯಿಸಿ.

ಗ್ರಾಮ ಪಂಚಾಯತ್ ನೌಕರರಿಗೆ ಕನಿಷ್ಠ ವೇತನ ಕೊಡುವುದು ಹಾಗೂ ಪೆನ್ಷನ್ ಯೋಜನೆ ಜಾರಿ ಮಾಡಲು ಒತ್ತಾಯಿಸಿ.

4 ತಿಂಗಳಿಂದ ಬಾಕಿ ಇರುವ ವಿಧವಾ, ವೃದ್ದಾಪ್ಯ ಹಾಗೂ ಅಂಗವಿಕಲ ವೇತನ ಬಿಡುಗಡೆ ಮಾಡಲು ಒತ್ತಾಯಿಸಿ ನಿರ್ಣಯಗಳನ್ನು ಸರ್ವಾನುಮತದಿಂದ ಪಾಸು ಮಾಡಲಾಯಿತು.

ರಾಮದುರ್ಗ ಪ್ರಾದೇಶಿಕ ಸಮಿತಿಯ ಸದಸ್ಯರನ್ನು ಆಯ್ಕೆ ಮಾಡಲಾಯಿತು. ಎಸ್. ಎಚ್. ಕಪ್ಪನ್ನವರ, ಜಿ.ಬಿ. ತೊರಗಲ್ಲ, ವಿ.ಪಿ. ಕುಲಕರ್ಣಿ, ಎಲ್.ಎಸ್.ನಾಯಕ ನಾಗಪ್ಪ ಸಂಗೊಳ್ಳಿ, ಖಲಂದರಸಾಬ, ಗೈಬು ಎಂ.ಜೈನೆಖಾನ ಹೀಗೆ ಪ್ರಾದೇಶಿಕ ಸಮಿತಿಗೆ ಸದಸ್ಯರನ್ನು ಆಯ್ಕೆ ಮಾಡಲಾಯಿತು. ವಿ.ಪಿ.ಕುಲಕರ್ಣಿಯವರ ಅನಾರೋಗ್ಯದ ಕಾರಣ ಗೈಬು ಎಂ.ಜೈನೆಖಾನರವರನ್ನು ರಾಮದುರ್ಗ ಪ್ರಾದೇಶಿಕ ಸಮಿತಿಯ ಕಾರ್ಯದರ್ಶಿಯನ್ನಾಗಿ ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು. ಕೊನೆಯಲ್ಲಿ ರಾಜ್ಯ ಸಮಿತಿಯ ಸದಸ್ಯರು ಹಾಗೂ ರಾಮದುರ್ಗ ತಾಲ್ಲೂಕಿನ ಉಸ್ತುವಾರಿ ವಹಿಸಿರುವ ಕಾಂ: ಶಾಂತಾರಾಮುನಾಯಕ್‌ರವರು ಸಮಾರೋಪ ಭಾಷಣ ಮಾಡಿ ಇವತ್ತಿನ ರಾಜಕೀಯ ಪರಿಸ್ಥಿತಿಯಲ್ಲಿ ನಮ್ಮ ಮುಂದಿನ ಕರ್ತವ್ಯಗಳ ಕುರಿತು ಹೇಳಿದರು.

08.12.2007ರಂದು ಸಮ್ಮೇಳನದ 2ನೇ ದಿನ ಮೆರವಣಿಗೆಯ ಸಡಗರ. ಹಳ್ಳಿ ಹಳ್ಳಿಗಳಿಂದ ಅಂಗನವಾಡಿ, ಬಿಸಿ ಅಡುಗೆ, ಪಂಚಾಯತ್ ನೌಕರರು, ಕಟ್ಟಡ ಕಾರ್ಮಿಕರು, ಹಾಗೂ ಬೀಡಿ ಕಾರ್ಮಿಕರ ಜನಸಾಗರ, ಮಧ್ಯಾಹ್ನ 1 ಗಂಟೆಗೆ ಭಾರೀ ಮೆರವಣಿಗೆ ರಾಮದುರ್ಗ ನಗರದಲ್ಲಿ ಜನರು ನಿಂತು ನೋಡುವಂತಾಗಿತ್ತು. ಕೆಂಬಾವುಟಗಳ ಹಾರಾಟ ಕಾರ್ಮಿಕರ ಮುಗಿಲು ಮುಟ್ಟುವ ಘೋಷಣೆಗಳು ಹೀಗೆ ಮೆರವಣಿಗೆ ಸಾಗುತ್ತಾ ಸರಸ್ವತಿ ಕಲ್ಯಾಣ ಮಂಟಪದಲ್ಲಿ ಸಮಾವೇಶಗೊಂಡಿತು.

ಸಿ.ಪಿ.ಐ(ಎಂ) ಪಕ್ಷದ ರಾಜ್ಯ ಸಮಿತಿ ಸದಸ್ಯ ಕಾಂ: ಶಾಂತರಾಮ ನಾಯಕ, ಹಿರಿಯ ಮುಖಂಡರಾದ ವಿ.ಪಿ.ಕುಲಕರ್ಣಿರವರು ಬಹಿರಂಗ ಸಭೆಯನ್ನು ಉದ್ದೇಶಿಸಿ ಮಾತನಾಡಿದರು.

ಗ್ರಾಮಾಂತರ ಪ್ರದೇಶದಲ್ಲಿ ಕೆಲಸ ಮಾಡುತ್ತಿರುವ ಕಾರ್ಮಿಕರು ಸಂಘಟನೆಗಳನ್ನು ಬಲಪಡಿಸುವುದರ ಜೊತೆ ಜೊತೆಗೆ ಪಕ್ಷ ಬೆಳೆಸುವ ಕಾರ್ಯದಲ್ಲಿ ತೊಡಗಬೇಕೆಂದು ನಿವೃತ್ತ ಗುರುಗಳಾದ ಎಸ್.ಬಿ.ಹಳ್ಳಿ ಗುರುಗಳು ಮಾತನಾಡಿದರು.

ಸಭೆಯ ಅಧ್ಯಕ್ಷತೆ ವಹಿಸಿದ್ದವರು ಹಿರಿಯರಾದ ಕಾಂ: ಎಸ್.ಎಚ್. ಕಪ್ಪನ್ನವರ ರವರು ಕಾಂ:ಗೈಬು ಜೈನೆಖಾನ ಎಲ್ಲರನ್ನು ಸ್ವಾಗತಿಸಿ ಕೊನೆಯಲ್ಲಿ ಸವದತ್ತಿ ಶಾಖೆಯ ಸದಸ್ಯರಾದ ಕಾಂ:ಎಫ್.ಎಂ. ನದಾಫರವರು ವಂದನಾರ್ಪಣೆ ಮಾಡಿದರು. ಕಾಂ:



ನಾಗಪ್ಪ ಸಂಗೊಳ್ಳಿ, ಕಾಂ: ಎಲ್.ಎಸ್. ನಾಯಕ, ಕಾಂ: ಖಲಂದರಸಾಬ, ಕಾಂ: ಶಂಭು ಸೊನ್ನದ, ಮತ್ತು ಪ್ರೇಮಾ ಕಿಲ್ಲೇದಾರ ವೇದಿಕೆಯ ಮೇಲೆ ಉಪಸ್ಥಿತರಿದ್ದರು.

'ಗೆಲುವ ನಮ್ಮದು' ಕ್ರಾಂತಿ ಗೀತೆಯೊಂದಿಗೆ ಸಮ್ಮೇಳನ ಮುಕ್ತಾಯವಾಯಿತು.

ವರದಿ: ಗೈಬು ಎಂ.ಜೈನೆಖಾನ

.....ದಲಿತರ ಮೇಲೆ ದೌರ್ಜನ್ಯ

ಪುಟ 11 ರಿಂದ

ನಿಂದನೆ ಮಾಡಿ ಹಲ್ಲೆ ಮಾಡಿದವರಲ್ಲಿ ಹಿಂದುಳಿದ ಹಾಗೂ ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿದ ಜನರಿದ್ದಾರೆ ಎಂಬುದನ್ನು ಚಳುವಳಿ ಗಮನಿಸಿದೆ. ಇದು ಬಹುಸಂಕೀರ್ಣ ಸಮಸ್ಯೆ. ಜಾಣ್ಮೆಯಿಂದ, ಎಚ್ಚರದಿಂದ ಚಳುವಳಿ ಮುಂದೆ ಒಯ್ಯಬೇಕು. ಸಾಮಾಜಿಕ ದಮನದ ಪ್ರಶ್ನೆಗಳ ವಿರುದ್ದದ ಹೋರಾಟ, ಆರ್ಥಿಕ ಶೋಷಣೆಯ ವಿರುದ್ಧ ಹೋರಾಟ, ಎರಡನ್ನು ಬೆಸೆದು ಸಾಧ್ಯಕ್ಕಾಗಿ ಸಂಘರ್ಷ ನಡೆಸಬೇಕು. ಅದನ್ನೇ ಕೂಲಿಕಾರರ ಸಂಘ. ಕಮ್ಯೂನಿಸ್ಟ್ ಪಕ್ಷ ಮಾಡುತ್ತಿವೆ. ಮುಂದೆಯೂ ಮಾಡಲಿವೆ. ಭೂಮಾಲಕರ ಸಂಚು ಮತ್ತು ಪಿತೂರಿ ಈಗ ಎಲ್ಲಿಗೆ ತಲುಪಿದೆ ಎಂದರೆ ದಲಿತರು ಬಾಲಕಿಯೊಬ್ಬಳ ಮೇಲೆ ಸಾಮೂಹಿಕ ಅತ್ಯಾಚಾರ ನಡೆಸಲು ಯತ್ನಿಸಿ, ಆಕೆಯ ಮಾನಭಂಗ ಮಾಡಿದ್ದಾರೆ ಎಂದು ಠಾಣೆಯಲ್ಲಿ ದೂರು ನೀಡಿದ್ದಾರೆ. ಮೊದಲು ದೂರಿನಲ್ಲಿ ಈ ಅಂಶ ಇರಲಿಲ್ಲ. ಸುಳ್ಳು ಪೋಣಿಸಿಕೊಂಡು ಬಂದ ನೀಡಲಾದ ದೂರು ಇದು ಎಂದು ಹೇಳದೆಯೇ ಅರ್ಥವಾಗುತ್ತದೆ. ಪೊಲೀಸರಾದರೋ ಶಾಂತಿಭಂಗ, ದೊಂಬಿ, ಮಾನಭಂಗದ ಉದ್ದೇಶದ ಹಲ್ಲೆ ಇತ್ಯಾದಿ ಆರೋಪ ಹೊರಿಸಿ ಮೊಕದ್ದಮೆ ಹೂಡಿದ್ದಾರೆ. ನಾಗರಾಜ್, ಆರ್.ಕೆ.ದೇಸಾಯಿ ಯವರು ಜಾಮೀನು ಮೇಲೆ ಬಿಡುಗಡೆಯಾಗಿದ್ದು, ಈ ದಾಳಿ ಸಂಚನ್ನು ಸಮರ್ಥವಾಗಿ ಎದುರಿಸಲು ಸಿದ್ಧತೆ ನಡೆದಿದೆ. ವ್ಯಾಪಕ ಪ್ರತಿಭಟನೆ ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿಯು ಡಿಸೆಂಬರ್ 27ರಂದು ಈ ದೌರ್ಜನ್ಯದ ವಿರುದ್ಧ ರಾಜ್ಯವ್ಯಾಪಿ ಪ್ರತಿಭಟನೆ ನಡೆಸಲು ಕರೆಕೊಟ್ಟಿತ್ತು. ಅಂದು ಬೆಂಗಳೂರಿನ ಕಾರ್ಪೊರೇಷನ್ ವೃತ್ತದಲ್ಲಿ ಪ್ರತಿಭಟನೆ ನಡೆಸಲಾಯಿತು. ಸಿಪಿಐ(ಎಂ) ರಾಜ್ಯ ಮುಖಂಡರಾದ ನಿತ್ಯಾನಂದಸ್ವಾಮಿಯವರ ನೇತೃತ್ವದ ನಿಯೋಗ ರಾಜ್ಯ ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕರಾದ ಶಂಕರ ಬಿದರಿಯವರನ್ನು ಕಂಡು ತಪ್ಪಿತಸ್ಥರ ವಿರುದ್ಧ ಕ್ರಮಕ್ಕಾಗಿ ಆಗ್ರಹಿಸಿ, ಸುಳ್ಳು ಮೊಕದ್ದಮೆ ವಾಪಸ್ಸಾತಿಗಾಗಿ ಆಗ್ರಹಿಸಿ ಮನವಿ ಸಲ್ಲಿಸಿತು. ಬಳ್ಳಾರಿ, ಗಜೇಂದ್ರಗಢ, ಸವದತ್ತಿ, ಮಳವಳ್ಳಿ, ಗುಲ್ಬರ್ಗಾ, ರಾಯಚೂರು, ದೇವದುರ್ಗ, ಕೊಪ್ಪಳ, ಗಂಗಾವತಿ, ಕುಷ್ಟಗಿ ಮುಂತಾಗಿ ವ್ಯಾಪಕ ಪ್ರತಿಭಟನೆಗಳ ವರದಿ ಬರುತ್ತಿವೆ.

ಗುಜರಾತ್ ಫಲಿತಾಂಶದ ಪಾಠ

ಬೇಕಿತ್ತು ಜನವಿರೋಧಿ ನೀತಿಗಳ ವಿರುದ್ಧ ಹೋರಾಟ

ಪ್ರಕಾಶ್ ಕಾರಟ್

ದುಡಿವ ಜನರ, ಬುಡಕಟ್ಟು, ಆದಿವಾಸಿಗಳನ್ನು ಭಾದಿಸುವ ಆರ್ಥಿಕ ನೀತಿಗಳ ವಿರುದ್ಧದ ಹೋರಾಟದಿಂದ ಮಾತ್ರ ಕೋಮುವಾದಿಗಳ ಹುಟ್ಟಡಗಿಸಲು ಸಾಧ್ಯ

ಕೋಮುವಾದ, ಮೂಲಭೂತವಾದದ ವಿರುದ್ಧ ನಿರ್ಣಾಯಕ ಹೋರಾಟ ನಡೆಸಬೇಕೆಂಬುದು ಇತ್ತೀಚೆಗೆ ಹೊರಬಿದ್ದ ಗುಜರಾತ್ ವಿಧಾನಸಭಾ ಫಲಿತಾಂಶಗಳು ತೋರಿಸಿಕೊಟ್ಟಿದೆ. ಅಂತಹ ಬದ್ಧತೆಯನ್ನು ಹೊಂದಿರುವ ರಾಜಕೀಯ ಶಕ್ತಿಯನ್ನು ಗುಜರಾತ್‌ನಲ್ಲಿ ರೂಪಿಸಬೇಕಾಗಿದೆ. ದುರಂತ ಎಂದರೆ ಗುಜರಾತ್‌ನಲ್ಲಿ ಪ್ರಮುಖ ವಿರೋಧ ಪಕ್ಷವಾಗಿರುವ ಕಾಂಗ್ರೆಸ್ ಇಂತಹ ಕೆಲಸ ಮಾಡುವಲ್ಲಿ ಸಂಪೂರ್ಣ ವಿಫಲವಾಗಿದೆ.

ಕೇಂದ್ರ ಸರ್ಕಾರಕ್ಕೆ ಸಂಬಂಧಿಸಿದ ವಿಷಯಗಳನ್ನು ಹೊರತುಪಡಿಸಿದರೆ ಕಾಂಗ್ರೆಸ್ ಸರ್ಕಾರ ಉಳಿದೆಲ್ಲ ವಿಷಯಗಳನ್ನು ಕ್ಷುಲ್ಲಕವಾಗಿ ಪರಿಗಣಿಸುತ್ತಿದೆ. ಅದರಲ್ಲೂ ಪ್ರತ್ಯೇಕವಾಗಿ ಮೂಲಭೂತವಾದಿಗಳಿಂದ ಎದುರಾಗುವ ಅಪಾಯಗಳ ಕುರಿತು ಬೇಜವಾಬ್ದಾರಿತನದಿಂದ ವರ್ತಿಸುತ್ತಿದೆ.


ಗುಜರಾತ್ ಚುನಾವಣೆ ಪ್ರಚಾರ ಸಭೆಗಳಲ್ಲಿ ಸೋನಿಯಾ ಗಾಂಧಿಯವರ ಕೆಲವು ಭಾಷಣಗಳನ್ನು ಹೊರತುಪಡಿಸಿದರೆ ಕೋಮುಶಕ್ತಿಗಳ ವಿರುದ್ಧ ನಿರ್ಣಾಯಕ ಹೋರಾಟವನ್ನು ನಡೆಸುವ ಬದ್ಧತೆಯನ್ನು ಕಾಂಗ್ರೆಸ್ ಪಕ್ಷ ಎಲ್ಲೂ ತೋರಿಸಲಿಲ್ಲ. 2002ರಲ್ಲಿ ನಡೆದ ಗೋದ್ರಾ ಘಟನೆ ನಂತರ ನಡೆಸಿದ ಮಾರಣಹೋಮಗಳ ಅಪರಾಧಿಗಳನ್ನು ಕಾನೂನು ಶಿಕ್ಷೆಗೆ ಒಳಪಡಿಸುವ ಜವಾಬ್ದಾರಿಯಿಂದ ಕಾಂಗ್ರೆಸ್ ಸರ್ಕಾರ ನುಣುಚಿಕೊಂಡಿದೆ.

ಹಲ್ಲು ಕಿತ್ತ ಹಾವು

ಗುಜರಾತ್ ಚುನಾವಣೆಗಳಲ್ಲಿ ಕೋಮುವಾದಿ ಬಿಜೆಪಿ ಸರ್ಕಾರವನ್ನು ಎದುರಿಸುವ ತಂತ್ರಗಳು ಹಲ್ಲು ಕಿತ್ತ ಹಾವಿನಂತಿದ್ದವು. ಕೋಮುವಾದಿ ತಂತ್ರಗಳ ವಿರುದ್ಧ ಆಗಿಂದಾಗ್ಗೆ ಪ್ರತಿ ಕಾರ್ಯತಂತ್ರ ರೂಪಿಸಲು ಕಾಂಗ್ರೆಸ್‌ನಿಂದ ಸಾಧ್ಯವಾಗಲಿಲ್ಲ. ಅಲ್ಲಿನ ಮುಖ್ಯಮಂತ್ರಿ ನರೇಂದ್ರ ಮೋದಿ ಮತ್ತು ಬಿಜೆಪಿ-ಆರ್‌ಎಸ್‌ಎಸ್ ನಡುವಿನ ವೈರುಧ್ಯಗಳನ್ನು ಪರಿಣಾಮಕಾರಿಯಾಗಿ ಬಳಸಿ ನಿರ್ಣಾಯಕ ಪ್ರತಿರೋಧ ಒಡ್ಡುವ ಪ್ರಯತ್ನಗಳನ್ನು ಮಾಡಲಿಲ್ಲ. ಅದಕ್ಕೆ ಬದಲಾಗಿ ಎಂದಿನ ರೀತಿಯ ಬೂರ್ಶ್ವಾ ರಾಜಕೀಯದಲ್ಲೇ ಮುಳುಗಿ ಚುನಾವಣೆಗೆ ಮುಂದಾದದ್ದು ದೋಷಪೂರಿತವಾದ ಚುನಾವಣಾ ತಂತ್ರವಾಗಿದೆ.

ಕೋಮುವಾದಿ ಪಕ್ಷವನ್ನು ಹಿಮ್ಮೆಟ್ಟಿಸಲು ಅಲ್ಲಿನ ಬಲಪಂಥೀಯ ಪ್ರತಿಗಾಮಿ ಸರ್ಕಾರ ಅನುಸರಿಸುತ್ತಿರುವ ಆರ್ಥಿಕ ನೀತಿಗಳಿಂದ ಸಾಮಾನ್ಯ ಜನಕ್ಕೆ ಉಂಟಾಗಿರುವ ಸಂಕಷ್ಟಗಳ ಪರಿಹಾರಕ್ಕೆ ಆಗಿಂದಾಗ್ಗೆ ತೀವ್ರತರವಾದ ಹೋರಾಟಗಳನ್ನು ರೂಪಿಸಬೇಕಾಗಿತ್ತು. ರೈತರ ಹಕ್ಕುಗಳು, ಕಾರ್ಮಿಕರ ಹಕ್ಕುಗಳು, ಆದಿವಾಸಿಗಳು, ಬುಡಕಟ್ಟು ಜನಾಂಗಗಳು, ನಗರ ಪ್ರದೇಶಗಳಲ್ಲಿನ ಬಡಜನತೆಯನ್ನು ಅಭಿವೃದ್ಧಿಯ ಹೆಸರಿನಲ್ಲಿ ಸ್ಥಳಾಂತರಿಸುವುದು ಇಂತಹ ಸಮಸ್ಯೆಗಳನ್ನು ಪ್ರಶ್ನಿಸುವ ಮೂಲಕ ಕೋಮುವಾದಿ ಬಿಜೆಪಿ ವಿರುದ್ಧ ನಿರ್ಣಾಯಕ ಹೋರಾಟ ನಡೆಸಬೇಕಾಗಿತ್ತು. ಆದರೆ ಕಾಂಗ್ರೆಸ್ ಪಕ್ಷ ಇಂತಹ ಯಾವುದೇ ಪರಿಣಾಮಕಾರಿ ಕಾರ್ಯತಂತ್ರ ರೂಪಿಸಲು ಮುಂದಾಗಲಿಲ್ಲ.

ಎಡಪಕ್ಷಗಳು ಮಾತ್ರ ಇಂತಹ ಪ್ರತಿರೋಧವನ್ನು ಒಡ್ಡಿದವು. ಆದರೆ ಎಡಪಕ್ಷಗಳ ಶಕ್ತಿ ಗುಜರಾತ್‌ನಲ್ಲಿ ತುಂಬಾ ಸೀಮಿತವಾಗಿದೆ. ಪ್ರತಿಗಾಮಿ ವರ್ಗ ಗುಣಗಳು, ನೀತಿಗಳನ್ನು ಹಿಮ್ಮೆಟ್ಟಿಸದೆ ಕೋಮುವಾದಿಗಳ ವಿರುದ್ಧ ನಿರ್ಣಾಯಕ ಹೋರಾಟ



ಕೋಮುವಾದಿ ಕೊಲೆಪಾತಕ ರಾಜಕೀಯದ ನರೇಂದ್ರಮೋದಿ

ಮಾಡುವುದು ಕಷ್ಟವಾಗುತ್ತದೆ. ದುಡಿಯುವ ವರ್ಗ, ಬಡವರು, ಹಿಂದುಳಿದ, ಬುಡಕಟ್ಟು ಜನರಲ್ಲಿ ವರ್ಗ ಪ್ರಜ್ಞೆ ಮೂಡಿಸಿ ವರ್ಗ ಹೋರಾಟಗಳನ್ನು ಕೈಗೊಳ್ಳದೆ ಕೋಮುವಾದದ ಹುಟ್ಟಡಗಿಸುವುದು ಕಷ್ಟವಾಗುತ್ತದೆ. ಆದರೆ ಕಾಂಗ್ರೆಸ್ ಇಲ್ಲಿ ಮತ್ತೆ ಹೊಸ ಆರ್ಥಿಕ, ಉದಾರೀಕರಣ ನೀತಿಗಳನ್ನೇ ಮುಂದೆ ಮಾಡಿತು. ಒಮ್ಮೆಯೂ ಬಿಜೆಪಿ ಸರ್ಕಾರದ ನೀತಿಗಳನ್ನು ಪ್ರತಿರೋಧಿಸಲು ಮುಂದಾಗಲಿಲ್ಲ.

ಹಣಕಾಸು ಬಂಡವಾಳಗಾರರ ಓಲೈಕೆ

ಕಳೆದ ಎರಡು ದಶಕಗಳಿಂದಲೂ ಕಾಂಗ್ರೆಸ್ ಪಕ್ಷ ಶ್ರೀಮಂತರ ಪರವಾದ ನೀತಿಗಳನ್ನು ಅನುಸರಿಸುತ್ತಾ ಬಂದಿರುವುದರಿಂದ ಅದರ ಶಕ್ತಿ ದಿನೇ ದಿನೇ ಕುಸಿಯುತ್ತಾ ಬಂದಿದೆ. ಕಾಂಗ್ರೆಸ್ ಪಕ್ಷ ಅಂತಾರಾಷ್ಟ್ರೀಯ ಹಣಕಾಸು ಬಂಡವಾಳಿಗರನ್ನು ಓಲೈಸುತ್ತಾ ಬಂದಿದೆ. ಇದರಿಂದಾಗಿ ಕಾಂಗ್ರೆಸ್ ಪಕ್ಷ ಬಡವರು ಮತ್ತು ಗ್ರಾಮೀಣ ಪ್ರದೇಶಗಳಲ್ಲಿನ ಜನ ಮತ್ತು ನಗರ ಪ್ರದೇಶದ ಬಡಜನರ ವಿಶ್ವಾಸವನ್ನು ಕಳೆದುಕೊಂಡಿದೆ.

ಗುಜರಾತ್ ಬಿಜೆಪಿ-ಆರ್‌ಎಸ್‌ಎಸ್‌ನ ಹಿಂದುತ್ವದ ಪ್ರಯೋಗಶಾಲೆಯಾಗಿದೆ. 80ರ ದಶಕದಿಂದಲೂ ಅಲ್ಲಿ ವಿಎಚ್‌ಪಿ- ಆರ್‌ಎಸ್‌ಎಸ್ ಜಾಲ ವ್ಯಾಪಕವಾಗಿ ವಿಸ್ತರಿಸಿದೆ. ಮುಸ್ಲಿಮರು ಮತ್ತು ಕ್ರೈಸ್ತರನ್ನು ಈ ಸಂಘಪರಿವಾರದವರು ಗುರಿ ಮಾಡಿದ್ದರಿಂದ ಮಧ್ಯಮ ವರ್ಗದವರನ್ನು ತಮ್ಮತ್ತ ಸೆಳೆಯಲು ಸಾಧ್ಯವಾಯಿತು. ಅಧಿಕಾರಕ್ಕೆ ಬಂದ ನಂತರ ಕಾರ್ಮಿಕರ ವಿರುದ್ಧವಾಗಿ ಬಂಡವಾಳಶಾಹಿಗಳನ್ನು ಮನವೊಲಿಸಲು ಮುಂದಾಯಿತು. ಹಲವಾರು ವರ್ಷಗಳ ಕಾಲ ಇಂತಹದೇ ಸಂಘಟನಾ ಕಾರ್ಯತಂತ್ರಗಳಲ್ಲಿ ಬಿಜೆಪಿ ತೊಡಗಿಸಿಕೊಂಡಿರುವುದರಿಂದ ಇಡೀ ರಾಜ್ಯದಲ್ಲಿ ಕೋಮುವಾದಿ ವಾತಾವರಣ ನಿರ್ಮಾಣವಾಗಿದೆ. ಗುಜರಾತ್‌ನಲ್ಲಿ ಇಂದು ನಡೆಯುತ್ತಿರುವ ಈ ಬೆಳವಣಿಗೆಗಳು ಸಾಮಾನ್ಯ ವಿಷಯವಾಗಿ ಪರಿಣಮಿಸಿದೆ. ದುಡಿಯುವ, ಗ್ರಾಮೀಣ ಜನತೆಯನ್ನು ಬಾಧಿಸುತ್ತಿರುವ ಆರ್ಥಿಕ ನೀತಿಗಳು, ಅಭಿವೃದ್ಧಿ ಹೆಸರಿನಲ್ಲಿ ನಗರ ಪ್ರದೇಶದ ಜನತೆಯನ್ನು ಸ್ಥಳಾಂತರಿಸುತ್ತಿರುವ ಪ್ರಶ್ನೆಗಳು ಪ್ರಮುಖ ವಿಷಯಗಳಾಗದೆ ಕೋಮು ಶಕ್ತಿಗಳನ್ನು ಹಿಮ್ಮೆಟ್ಟಿಸುವುದು ಅಸಾಧ್ಯ.

ಅಡ್ವಾಣಿಯ ತಿರುಕನ ಕನಸು

ಗುಜರಾತ್‌ನಲ್ಲಿ ಕೋಮುವಾದ ಆಳವಾಗಿ ಬೇರೂರಿರುವುದರಿಂದ ಅಲ್ಲಿರುವ ಹಲವಾರು ಜಾತ್ಯಾತೀತ ಮೌಲ್ಯಗಳ ಕುರಿತು ಅಡ್ವಾಣಿ ಮನಗಂಡಿಲ್ಲ. ರಾಷ್ಟ್ರ ರಾಜಕಾರಣದಲ್ಲಿ ಗುಜರಾತ್ ಫಲಿತಾಂಶ ತಿರುವು ಬಿಂದು ಎಂದು ತಪ್ಪಾಗಿ ಅರ್ಥೈಸಿಕೊಂಡಿದ್ದಾರೆ. 2003ರಲ್ಲಿ ಮಧ್ಯಪ್ರದೇಶ, ರಾಜಾಸ್ಥಾನ ಮತ್ತು ಚತ್ತೀಸ್‌ಗಡಗಳಲ್ಲಿ ಬಿಜೆಪಿ ಜಯಗಳಿಸಿದ್ದರಿಂದ ಲೋಕಸಭೆ ಚುನಾವಣೆಗಳನ್ನು ಅವಧಿಗೆ ಮೊದಲೇ ನಡೆಸಲು ಬಿಜೆಪಿ ನಾಯಕತ್ವ ನಿರ್ಧರಿಸಿತು. ರಾಜ್ಯಗಳಲ್ಲಿನ ಚುನಾವಣೆಗಳಲ್ಲಿ ಜಯಗಳಿಸಿರುವುದರಿಂದ ಲೋಕಸಭೆ ಚುನಾವಣೆಯಲ್ಲೂ ಜಯಗಳಿಸುವ ಅತಿ ವಿಶ್ವಾಸವನ್ನು ಪಕ್ಷ ಹೊಂದಿತ್ತು. ಆದರೆ ಹೀನಾಯ ಸೋಲು ಅನುಭವಿಸಿತು. ಆ ರಾಜ್ಯಗಳಲ್ಲಿ ಅಧಿಕಾರದಲ್ಲಿದ್ದ ಕಡೆ ಕಾಂಗ್ರೆಸ್ ಪಕ್ಷಕ್ಕೆ ಮಾತ್ರ ಜನತೆ ಸೋಲುಣಿಸಿದರು. ಅದೇ ಪರಿಸ್ಥಿತಿಯನ್ನು 2008ರಲ್ಲಿ ನಡೆಯುವ ರಾಜಸ್ಥಾನ, ಮಧ್ಯಪ್ರದೇಶ ಮತ್ತು ಚತ್ತೀಸ್‌ಗಡ ಚುನಾವಣೆಗಳಲ್ಲಿ ಬಿಜೆಪಿ ಅನುಭವಿಸಲಿದೆ.

ಈ ರಾಜ್ಯಗಳಲ್ಲಿ ಬಿಜೆಪಿಯ ಅನೀತಿ ಮತ್ತು ಭ್ರಷ್ಟಾಚಾರ ಮಿತಿಮೀರಿದೆ. ದೊಡ್ಡ ಬಂಡವಾಳಿಗರ ಪರವಾದ ನೀತಿಯನ್ನು ಅನುಸರಿಸಲಾಗುತ್ತಿದೆ. ಅಲ್ಪಸಂಖ್ಯಾತರ ಮೇಲಿನ ಹಲ್ಲೆ ದೌರ್ಜನ್ಯಗಳು ಹೆಚ್ಚಾಗಿವೆ. ಜನಪರ ಚಳವಳಿಗಳನ್ನು ಹತ್ತಿಕ್ಕಲಾಗುತ್ತಿದೆ. ರಾಜಸ್ಥಾನದಲ್ಲಿ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದ ನಂತರ 43 ಬಾರಿ ಗೋಲಿಬಾರ್ ನಡೆದಿದ್ದು ಅದರಲ್ಲಿ 16 ರೈತರೂ ಸೇರಿದಂತೆ 43 ಮಂದಿ ಹತರಾಗಿದ್ದಾರೆ. ಗುಜರಾತ್ ಮಾತ್ರ ಸೋಲಿನಿಂದ ಹೊರತಾಗಿದೆ. ಬಿಜೆಪಿ ಅಧಿಕಾರದಲ್ಲಿರುವ ಇತರ ರಾಜ್ಯಗಳಲ್ಲಿಯೂ ಗುಜರಾತ್ ಮಾದರಿಯನ್ನೇ ಅನುಸರಿಸುವುದಾಗಿ ಹತಾಶರಾಗಿರುವ ಅಡ್ವಾಣಿ ಹೇಳುತ್ತಿದ್ದಾರೆ. ವಾಸ್ತವ ಏನೆಂದರೆ ತಾನೊಂದು ಭಿನ್ನ ಪಕ್ಷ ಎಂಬುದನ್ನು ತೋರಿಸಲು ಬಿಜೆಪಿ ಸಂಪೂರ್ಣವಾಗಿ ವಿಫಲವಾಗಿದೆ.

ರಾಜಿರಹಿತ ಹೋರಾಟ ಅಗತ್ಯ

ಕೇವಲ ತೋರಿಕೆಯ ಚುನಾವಣಾ ಹೋರಾಟಗಳಿಂದ ಕೋಮುವಾದಿ ಪಕ್ಷಗಳನ್ನು ಸೋಲಿಸಲು ಸಾಧ್ಯವಿಲ್ಲ ಎಂಬ ಪಾಠವನ್ನು ಗುಜರಾತ್ ಚುನಾವಣೆಗಳು ಕಲಿಸಿವೆ. ಕೋಮುವಾದಿ ರಾಜಕೀಯಕ್ಕೆ ಪ್ರತಿಯಾಗಿ ಬಲಿಷ್ಠವಾದ ಜಾತ್ಯಾತೀತ ಹೋರಾಟವನ್ನು ಮುಂದುವರೆಸಬೇಕಾಗಿದೆ. ಇದಕ್ಕೆ ದುಡಿಯುವ ವರ್ಗವನ್ನು ಸಂಘಟಿಸುವುದು ಅಗತ್ಯ. ಏಕೆಂದರೆ ಇವರು ದೊಡ್ಡ ಬಂಡವಾಳಿಗರ ಪರವಾದ ಆರ್ಥಿಕ ನೀತಿಗಳನ್ನು ಅನುಸರಿಸುವುದರಿಂದ ಕೋಮುವಾದಿಗಳ ರಾಜಕಾರಣಕ್ಕೆ ಅಂತಿಮವಾಗಿ ಬಲಿಯಾಗುವುದು ದುಡಿಯುವ ವರ್ಗದ ಜನರು ಮಾತ್ರ. ಜಾತ್ಯಾತೀತ ಮತ್ತು ದುಡಿಯುವ ವರ್ಗದ ಸಂಘಟನೆ ಈ ಎರಡೂ ರೀತಿಯ ಚಳವಳಿಯನ್ನು ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳು ಹಾಗೂ ಜಾತ್ಯಾತೀತತೆಗೆ ಬದ್ಧವಾಗಿರುವ ಸಂಘಟನೆಗಳು ಮುನ್ನಡೆಸಬೇಕಾಗಿದೆ.

ಹೀಗೊಂದು ಸೂಚನೆ

ನಮ್ಮ ನಡುವಿನ ವಿವಿಧ ರಾಜಕೀಯ ಪಕ್ಷಗಳಲ್ಲಿ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷ ಒಂದು ವಿಭಿನ್ನ ಪಕ್ಷ. ಇದರ ಅಖಿಲ ಭಾರತ ಮಹಾಧಿವೇಶನವು 2008ರ ಮಾರ್ಚ್-ಏಪ್ರಿಲ್ ತಿಂಗಳಿನಲ್ಲಿ ತಮಿಳುನಾಡಿನ ಕೊಯಮತ್ತೂರಿನಲ್ಲಿ ನಡೆಯಲಿದೆ. ರಾಷ್ಟ್ರೀಯ ಅಂತರಾಷ್ಟ್ರೀಯ ರಾಜಕೀಯ, ಆರ್ಥಿಕ, ಸಾಮಾಜಿಕ ಬೆಳವಣಿಗೆಗಳ ಕುರಿತ ಮಹತ್ವದ ಒಳನೋಟಗಳನ್ನು ನೀಡುವ ಮಹಾಮಂಥನ ಈ ಸಮ್ಮೇಳನದಲ್ಲಿ ನಡೆಯಲಿದೆ. ಇಂತಹದ್ದೇ ಸಮ್ಮೇಳನವು ಮಹಾಧಿವೇಶನಕ್ಕೆ ಪೂರ್ವಭಾವಿಯಾಗಿ ರಾಜ್ಯ, ಜಿಲ್ಲೆ, ತಾಲ್ಲೂಕು, ಸ್ಥಳೀಯ, ಗ್ರಾಮ/ಶಾಖಾ ಮಟ್ಟಗಳಲ್ಲಿ ನಡೆಯುತ್ತಿವೆ.

ಒಂದು ನಿರ್ಧಿಷ್ಟ ಪ್ರದೇಶದ ರಾಜಕೀಯ, ಸಾಮಾಜಿಕ ಪರಿಸ್ಥಿತಿಯ ಮೇಲೆ ಹೊಸ ಬೆಳಕನ್ನು ಚೆಲ್ಲುವ ಈ ಸಮ್ಮೇಳನದ ವರದಿಗಳು ಜನಶಕ್ತಿಯ ಓದುಗರಿಗೂ ಒಂದು ಅಮೂಲ್ಯ ಮಾಹಿತಿಯೇ ಆಗುತ್ತದೆ. ಈ ಹಿನ್ನೆಲೆಯಲ್ಲಿ ವರದಿಗಾರರು ಸಿಪಿಐ(ಎಂ)ನ ಜಿಲ್ಲಾ ಸಮ್ಮೇಳನಗಳ ವರದಿಯನ್ನು ಪ್ರಮುಖ ತಾಲ್ಲೂಕು ಸಮ್ಮೇಳನಗಳ ವರದಿಯನ್ನು ನೀಡಬೇಕೆಂದು ಕೋರಲಾಗಿದೆ. ಹಾಗೆ ವರದಿ ಮಾಡುವಾಗ ಅಲ್ಲಿನ ನಿರ್ಧಿಷ್ಟ ಪ್ರದೇಶದ ವಿವಿಧ ಜನಸಮುದಾಯಗಳನ್ನು ಬಾಧಿಸುತ್ತಿರುವ ಸಮಸ್ಯೆಗಳು, ಅಲ್ಲಿನ ರಾಜಕೀಯ, ಸಾಮಾಜಿಕ ಬೆಳವಣಿಗೆಗಳ ವಾಸ್ತವಗಳ ಚಿತ್ರಣವನ್ನು ನೀಡುವಂತಹ ವರದಿಯನ್ನು ಕಳುಹಿಸಬೇಕೆಂದು ಕೋರುತ್ತೇವೆ.

ಈ ಸಂಚಿಕೆಯಲ್ಲಿ ಹಾಸನ ವರದಿಯನ್ನು ಪ್ರಕಟಿಸಲಾಗಿದ್ದು ಇದನ್ನು ಒಂದು ಮಾದರಿಯನ್ನಾಗಿ ಸಂಗಾತಿಗಳು ಗಮನಿಸಬಹುದು. ನಿಮ್ಮ ವರದಿ ಸಂಕ್ಷಿಪ್ತವಾಗಿರಲಿ, ಆಕರ್ಷಕವಾಗಿರಲಿ. ಸಂಘಟನಾತ್ಮಕ ಅಂಶಗಳಿಗಿಂತ ಜನರ ಬದುಕಿನ ಪ್ರಶ್ನೆಗಳಿಗೆ ಹೆಚ್ಚು ಒತ್ತು ಇರಲಿ.

ಜಗದಗಲ

ಬಾಲಕೃಷ್ಣ ಶೆಟ್ಟಿ

ಪ್ರಜಾಪ್ರಭುತ್ವದ ಹೋರಾಟದಲ್ಲಿ ಮತ್ತೊಂದು ಬಲಿದಾನ

ಪಾಕಿಸ್ತಾನ ಪೀಪಲ್ಸ್ ಪಾರ್ಟಿಯ ಅಧ್ಯಕ್ಷೆ ಬೆನಜಿರ್ ಭುಟ್ಟೋರವರ ಬರ್ಬರ ಹತ್ಯೆಯು ಜಗತ್ತಿನಲ್ಲಿ ಪ್ರಜಾಸತ್ತೆಯ ಮರು ಸ್ಥಾಪನೆಗಾಗಿ ನಡೆಯುತ್ತಿರುವ ಹೋರಾಟದಲ್ಲಿನ ಮತ್ತೊಂದು ಬಲಿದಾನವಾಗಿದೆ.



1988ರಲ್ಲಿ ಇಡೀ ವಿಶ್ವದಲ್ಲಿ ಮುಸ್ಲಿಂ ಬಹುಸಂಖ್ಯಾತರಾಗಿದ್ದ ದೇಶಗಳಲ್ಲಿ ಪ್ರಧಾನಿ ಪಟ್ಟಕ್ಕೇರಿದ್ದ ಪ್ರಥಮ ಮಹಿಳೆ ಎಂದು ಖ್ಯಾತರಾಗಿದ್ದ ಬೆನಜಿರ್ ಭುಟ್ಟೋರವರನ್ನು, ಪಾಕಿಸ್ತಾನದ ಪ್ರಥಮ ಪ್ರಧಾನಿ ಲಿಯಾಖತ್ ಅಲಿಖಾನ್‌ರವರನ್ನು 1953ರಲ್ಲಿ ಗುಂಡಿಟ್ಟು ಕೊಂದ ಸ್ಥಳದಲ್ಲಿಯೇ ಹತ್ಯೆ ಮಾಡಲಾಗಿರುವುದು ವಿಪರ್ಯಾಸ. ಲಿಯಾಖತ್ ಅಲಿಖಾನ್‌ರನ್ನು ಕೊಂದವನನ್ನು ಪೋಲೀಸ್ ಅಧಿಕಾರಿಯೊಬ್ಬರು ಗುಂಡಿಟ್ಟು ಸಾಯಿಸಿದರೆ, ಈವರೆಗೆ ಬಂದ ವರದಿಗಳ ಪ್ರಕಾರ ಭುಟ್ಟೋರವರನ್ನು ಹತ್ಯೆ ಮಾಡಿದ 'ಮಾನವ ಬಾಂಬ್' ತನ್ನನ್ನು ತಾನೇ ಸಾಯಿಸಿಕೊಂಡಿತ್ತು.

ಜಗತ್ತಿನಲ್ಲಿ ನಡೆದ ಪ್ರಮುಖ ರಾಜಕಾರಣಿಗಳ ಹತ್ಯೆಗಳಲ್ಲಿ ಸಾಕ್ಷಿಗಳನ್ನು ಉಳಿಯಗೊಳಿಸಿಲ್ಲ. ಬೆನಜಿರ್ ಭುಟ್ಟೋ ಹತ್ಯೆಯಲ್ಲೂ ಆರೋಪಿಗಳನ್ನು ಇಲ್ಲದಂತೆ ಮಾಡಲಾಗಿದೆ. ಅಲ್‌ಖೈದಾ ಸಂಘಟನೆಯ ವಕ್ತಾರ ಎಂದು ಹೇಳಿಕೊಂಡವರು ತನ್ನ ಸಂಘಟನೆ ಈ ಕೃತ್ಯವನ್ನು ಎಸಗಿದೆ ಎಂದು ಹೇಳಿಕೊಂಡಿದ್ದರೂ ಅದರ ಹಿಂದಿರುವ ನಿಜವಾದ ಶಕ್ತಿ ಯಾರು ಎಂಬುದನ್ನು ತೀವ್ರವಾಗಿ ಚಿಂತಿಸಬೇಕಾಗಿದೆ.

ಯಾವಾಗಲೂ ಮಿಲಿಟರಿ ಸರ್ವಾಧಿಕಾರವೇ ಮೇಲುಗೈಯಾಗಿದ್ದ ಪಾಕಿಸ್ತಾನದಲ್ಲಿ ಬೆನಜಿರ್ ಭುಟ್ಟೋ ಅವರ ತಂದೆ ಜುಲ್ಫಿಕರ್ ಅಲಿ ಭುಟ್ಟೋ ಅವರನ್ನು ಮಿಲಿಟರಿ ಆಡಳಿತವು ಗಲ್ಲಿಗೇರಿಸಿತ್ತು. ಬೆನಜಿರ್ ಅವರ ಇಬ್ಬರ ಸಹೋದರರೂ ಅನುಮಾನಾಸ್ಪದ ರೀತಿಯಲ್ಲಿ ಮರಣವನ್ನಪ್ಪಿದರು. ಅಲ್ಲದೆ ಅಧ್ಯಕ್ಷರಾಗಿದ್ದ ಅಯೂಬ್ ಖಾನ್ ಅವರನ್ನು ಕೊಲ್ಲಲಾಗಿತ್ತು. ಮಿಲಿಟರಿ ಸರ್ವಾಧಿಕಾರಿಯಾಗಿದ್ದ ಜಿಯಾ-ಉಲ್-ಹಕ್ ಅವರು ವಿಮಾನ ಅಫಘಾತದಲ್ಲಿ ಮರಣವನ್ನಪ್ಪಿದರು. ಇದೂ ಕೂಡಾ ಸಂಶಯಾಸ್ಪದ ಎಂದೇ ಹೇಳಲಾಗಿತ್ತು.

ದುಬೈನಲ್ಲಿ ಉದ್ಯಮವನ್ನು ಹೊಂದಿರುವ ಪತಿ ಆಸಿಫ್ ಅಲಿ ಜರ್‌ದಾರಿ ಹಾಗೂ ಮೂವರು ಮಕ್ಕಳನ್ನು ಅಗಲಿದ ಬೆನಜಿರ್ ಅವರ ಕಳೇಬರವನ್ನು ಅವರ ಸ್ವಂತ ಊರಾದ ಸಿಂಧ್ ಪ್ರಾಂತದ ಲರ್ಖಾನ ಜಿಲ್ಲೆಯ ನೊದೆರೂದಲ್ಲಿ ಹೂಳಲಾಯಿತು.

ಜನರಿಂದ ತೀವ್ರ ಪ್ರತಿಕ್ರಿಯೆ

ಮಿಲಿಟರಿ ಸರ್ವಾಧಿಕಾರದ ವಿರುದ್ಧ ಮೊದಲೇ ಅತೃಪ್ತಿಗೊಂಡಿದ್ದ ಪಾಕಿಸ್ತಾನದ ಜನತೆ ಹತ್ಯೆಯ ವಿರುದ್ಧ ತೀವ್ರ ಪ್ರತಿಭಟನೆ ನಡೆಸಿದರು. ಕೆಲವು ಕಡೆಗಳಲ್ಲಿ ಅಂಬುಲೆನ್ಸ್‌ಗಳಿಗೂ ಬೆಂಕಿ ಹಾಕಿರುವುದು ಕಂಡುಬಂದಿರುವುದಲ್ಲದೆ, ಜನಾಂಗೀಯ ಗಲಭೆಗೂ ಕಾರಣವಾಗಿದೆ. ಕೆಲವು ಕಡೆಗಳಲ್ಲಿ ಪಂಜಾಬಿ ಹಾಗೂ ಉರ್ದು ಮಾತನಾಡುವ ಜನರ ಮೇಲೆ ಧಾಳಿಗಳು ನಡೆದಿವೆ.

ಸಾಮ್ರಾಜ್ಯಶಾಹಿ ಮತ್ತು ಮೂಲಭೂತವಾದ

ಸಾಮ್ರಾಜ್ಯವಾದ ಮತ್ತು ಮೂಲಭೂತವಾದ ಇವೆರಡೂ ಭಿನ್ನರೂಪದ ಭಿನ್ನ ಸೈದ್ಧಾಂತಿಕ ನೆಲೆಗಟ್ಟಿನ ಶಕ್ತಿಗಳಾದರೂ ಸಿದ್ಧಾಂತಗಳು ಈ ಎರಡೂ ಪ್ರಜಾಪ್ರಭುತ್ವವನ್ನು ಬೆಳೆಯಗೊಡುವುದಿಲ್ಲ ಎಂಬುದು ಸ್ಪಷ್ಟ. ಒಂದು ವೇಳೆ ಪ್ರಜಾಸತ್ತಾತ್ಮಕವಾಗಿ ಆಯ್ಕೆಯಾದರೂ ಅಂತಹ ಸರ್ಕಾರಗಳು ತಮ್ಮ ಹಿಡಿತದಲ್ಲಿಯೇ ಇರಬೇಕೆಂದು ಬಯಸುತ್ತವೆ.

ಧರ್ಮದ ಆಧಾರದಲ್ಲಿ ಭಾರತವನ್ನು ಒಡೆದು ಇಸ್ಲಾಂ ರಾಷ್ಟ್ರದ ಸ್ಥಾಪನೆಗೆ ಬ್ರಿಟಿಷ್ ಸಾಮ್ರಾಜ್ಯಶಾಹಿ ನೆರವಾದರೆ ಪಾಕಿಸ್ತಾನದಲ್ಲಿ ಪ್ರಜಾಸತ್ತಾತ್ಮಕ ಸರ್ಕಾರಗಳು ಹೆಚ್ಚು ಕಾಲ ಬಾಳದಂತೆ ಅಲ್ಲಿನ ಮಿಲಿಟರಿ ಸರ್ವಾಧಿಕಾರಿಗಳು ನೋಡಿಕೊಂಡರು. ಇದಕ್ಕೆ ಅಮೇರಿಕಾ ಸಾಮ್ರಾಜ್ಯಶಾಹಿಯ ನೇರವಾದ ಬೆಂಬಲ ಇದ್ದುದನ್ನು ಕಾಣುತ್ತೇವೆ. ಇತ್ತೀಚೆಗಂತೂ ಅಫಘಾನಿಸ್ತಾನದಲ್ಲಿ ಹಿಂದಿನ ಸೋವಿಯತ್ ಯೂನಿಯನ್ನಿನ ಮತ್ತು ಇಂದಿನ ರಶಿಯಾದ ಪ್ರಭಾವವನ್ನು ಕಡಿಮೆ ಮಾಡಲು ಅಲ್ಲಿನ ಮೂಲಭೂತವಾದಿ ಸಂಘಟನೆ ತಾಲಿಬಾನ್ ಬೆಳೆಯಲು ಅಮೇರಿಕಾದ ಬುಷ್ ಮತ್ತು ಪಾಕಿಸ್ತಾನದ ಅಧ್ಯಕ್ಷ ಮುಷರಫ್ ಇಬ್ಬರೂ ಬೆಂಬಲಿಸಿದ್ದಾರೆಂಬುದು ಜಗಜ್ಜಾಹೀರಾಗಿದೆ.

ಈಗ ನಡೆದಿರುವ ಹತ್ಯೆಯಿಂದಾಗಿ, ಜನವರಿ 8



ರಂದು ನಡೆಯಬೇಕಾಗಿರುವ ಚುನಾವಣೆ ನಡೆಯುವುದೇ ಸಂಶಯ. ಒಂದು ವೇಳೆ ಚುನಾವಣೆ ನಡೆದರೂ ಅದು ಪ್ರಜಾಪ್ರಭುತ್ವದ ಆಶಯಗಳಿಗೆ ಅನುಗುಣವಾಗಿ ನಡೆಯುವುದು ದುಸ್ತರವಾಗಿದೆ.

8 ವರ್ಷಗಳಿಂದ ವಿದೇಶಗಳಲ್ಲಿ ವಾಸಿಸಿದ್ದ ಬೆನಜಿರ್ ಭುಟ್ಟೋ ಪಾಕಿಸ್ತಾನಕ್ಕೆ ಕಾಲಿಡುತ್ತಲೇ ಅವರ ಮೇಲೆ ಹತ್ಯೆ ನಡೆಸಲು ಪ್ರಯತ್ನ ಮಾಡಲಾಗಿತ್ತು. ಈ ಬಾಂಬ್ ದಾಳಿಯಲ್ಲಿ ಸಾಧಾರಣ 150 ಜನ ಸತ್ತಿದ್ದರು. ಡಿಸೆಂಬರ್ 27 ರಂದು ನಡೆದ ಬಾಂಬ್ ದಾಳಿ ಮತ್ತು ಗುಂಡಿಟ್ಟ ಪ್ರಕರಣದಲ್ಲಿ ಶ್ರೀಮತಿ ಭುಟ್ಟೋ ಜೀವ ಕಳೆದುಕೊಂಡಿದ್ದು ಮಾತ್ರವಲ್ಲದೆ, ಇನ್ನೂ 30 ಕ್ಕೂ ಹೆಚ್ಚು ಜನರು ಅಸುನೀಗಿದ್ದಾರೆ.

ಅಮೆರಿಕಾದ ಹಿತಾಸಕ್ತಿಗಳಿಗಾಗಿ ಕೆಲಸ ಮಾಡುತ್ತಿರುವ ಪಾಕಿಸ್ತಾನವು ಭಯೋತ್ಪಾದಕರ ಧಾಳಿಗೂ ಒಳಗಾಗಿದೆ. ಜನಸಾಮಾನ್ಯರನ್ನು ಭಯೋತ್ಪಾದಕರಿಂದ, ಮೂಲಭೂತವಾದಿಗಳಿಂದ ದೂರವಿರಿಸುವ ಪ್ರಬಲವಾದ ಪ್ರಜಾಸತ್ತಾತ್ಮಕ ಶಕ್ತಿ ಪಾಕಿಸ್ತಾನದಲ್ಲಿ ಸದ್ಯಕ್ಕೆ ಇಲ್ಲದಿರುವುದು ದುರಂತ.

ಭಾರತಕ್ಕೆ ಆತಂಕ:

ಬೆನಜಿರ್ ಭುಟ್ಟೋರವರ ಭೀಕರ ಹತ್ಯೆಯನ್ನು ಭಾರತದಲ್ಲಿರುವ ಎಲ್ಲಾ ರಾಜಕೀಯ ಪಕ್ಷಗಳೂ ಖಂಡಿಸಿವೆ. ಪಾಕಿಸ್ತಾನದ ರಾಜಕೀಯ ಪರಿಸ್ಥಿತಿಯನ್ನು ಧಾರ್ಮಿಕ ಮೂಲಭೂತವಾದಿಗಳು ನಿಯಂತ್ರಿಸುತ್ತಿವೆ ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಪ್ರಕಾಶ್ ಕಾರಟ್‌ರವರು ಆತಂಕ ವ್ಯಕ್ತಪಡಿಸಿದ್ದಾರೆ.

ನೆರೆಯ ದೇಶಗಳಾದ ಪಾಕಿಸ್ತಾನ, ಬಾಂಗ್ಲಾದೇಶಗಳಲ್ಲಿ ಇಸ್ಲಾಂ ಮೂಲಭೂತವಾದಿ ಶಕ್ತಿಗಳ ಬೆಳವಣಿಗೆ, ಶ್ರೀಲಂಕಾದಲ್ಲಿ ಅರಾಜಕತೆ ಇತ್ಯಾದಿ ಅಂಶಗಳು ಭಾರತದ ಮೇಲೆ ಪರಿಣಾಮ ಬೀರಲಿದೆ. ದೇಶದಲ್ಲಿ ಇತ್ತೀಚಿಗೆ ನಡೆದ ಗುಜರಾತ್ ಮತ್ತು ಹಿಮಾಚಲಪ್ರದೇಶದ ಚುನಾವಣೆಗಳು ಹಿಂದೂ ಮೂಲಭೂತವಾದ ಇನ್ನೂ ಪ್ರಬಲವಾಗಿದೆ ಎಂಬುದನ್ನು ತೋರಿಸಿಕೊಟ್ಟಿದೆ. ಇದು ಇಸ್ಲಾಂ ಮೂಲಭೂತವಾದ ಬೆಳೆಯಲು ಇನ್ನಷ್ಟು ಇಂಬು ಕೊಡುವುದು ಮಾತ್ರವಲ್ಲದೆ ಪ್ರಜಾಸತ್ತಾತ್ಮಕ ಶಕ್ತಿಗಳ ಬೆಳವಣಿಗೆಗೆ ತಡೆಯುಂಟು ಮಾಡುತ್ತದೆ . ಪಾಕಿಸ್ತಾನದಲ್ಲಿ ಆಗುವ ಬೆಳವಣಿಗೆಗಳು ಜಮ್ಮು, ಕಾಶ್ಮೀರದ ಮೇಲೂ ಪರಿಣಾಮ ಬೀರಲಿದೆ.

ಆದ್ದರಿಂದ ಪ್ರಜಾಸತ್ತೆಯನ್ನು ಉಳಿಸಿ, ಬೆಳೆಸಲು ಆಶಿಸುವ ಶಕ್ತಿಗಳೆಲ್ಲರೂ ಬೆನಜಿರ್ ಭುಟ್ಟೋರವರ ಹತ್ಯೆಯನ್ನು ಖಂಡಿಸುವುದರೊಂದಿಗೆ ಭಾರತದಲ್ಲಿ ಧಾರ್ಮಿಕ ಮೂಲಭೂತವಾದ ಬೆಳೆಯದಂತೆ ಶಕ್ತಿ ಮೀರಿ ಪ್ರಯತ್ನಿಸಬೇಕಾಗಿದೆ.

ರೈತರನ್ನು ಚಟ್ಟಕ್ಕೇರಿಸಿದ ....

ಪುಟ 5 ರಿಂದ


ಐಸಿಐಸಿಐ ಬ್ಯಾಂಕ್ ಬಂಡವಾಳಿಗರ ಬ್ಯಾಂಕ್ ಎಂದು ಅದರ ಹುಟ್ಟೇ ಸಾರಿ ಸಾರಿ ಹೇಳುತ್ತದೆ. 1955ರಲ್ಲಿ ವಿಶ್ವಬ್ಯಾಂಕ್, ಭಾರತ ಸರ್ಕಾರ ಹಾಗೂ ದೇಶದ ಕೈಗಾರಿಕಾ ರಂಗದ ಪ್ರತಿನಿಧಿಗಳು ಸೇರಿ ಪ್ರಾರಂಭಿಸಿದ ಐಸಿಐಸಿಯ ಲಿಮಿಟೆಡ್‌ನ ಮೂಲ ಉದ್ದೇಶವಾಗಿದ್ದುದು ಭಾರತೀಯ ಕೈಗಾರಿಕೆಗಳಿಗೆ ಮಧ್ಯಾವಧಿ ಹಾಗೂ ದೀರ್ಘಾವಧಿ ಸಾಲಗಳನ್ನು ನೀಡಬೇಕೆಂದು. ಐಸಿಐಸಿಐ ಲಿಮಿಟೆಡ್. 1994ರಲ್ಲಿ ಐಸಿಐಸಿಐ ಬ್ಯಾಂಕ್‌ನ್ನು ಸ್ಥಾಪಿಸುತ್ತದೆ. 2002ರಲ್ಲಿ ಐಸಿಐಸಿಐ ಸಂಸ್ಥೆಯ ಇನ್ನಿತರ ಎರಡು ಹಣಕಾಸು ಸಂಸ್ಥೆಗಳು ಐಸಿಐಸಿಐ ಬ್ಯಾಂಕ್ ಜೊತೆಗೆ ವಿಲೀನವಾಗುವ ಮೂಲಕ ಐಸಿಐಸಿಐ ಸಮೂಹದ ಏಕೈಕ ಬ್ಯಾಂಕ್ ಆಗಿ ರೂಪಾಂತರ ಹೊಂದುತ್ತದೆ. 2001ರಲ್ಲಿ ಐಸಿಐಸಿಐ ಬ್ಯಾಂಕ್, ಬ್ಯಾಂಕ್ ಆಫ್ ಮಧುರಾವನ್ನು ಖರೀದಿಸುತ್ತದೆ. ಗ್ರಾಹಕರಿಗೆ ಬ್ಯಾಂಕಿಂಗ್ ಸೇವೆಯ ಶರತ್ತುಗಳನ್ನು ವಿವರಿಸದೇ ಅವರನ್ನು ಕತ್ತಲಲ್ಲಿಟ್ಟು ವ್ಯವಹಾರ ಮಾಡುವ ಕುಖ್ಯಾತಿ ಐಸಿಐಸಿಐ ಬ್ಯಾಂಕಿಗಿದೆ. ಸಾಲ ವಸೂಲಾತಿಗೆ ಗೂಂಡಾಗಳನ್ನು ಬಳಸಿದ 'ಹೆಗ್ಗಳಿಕೆ'ಯೂ ಈ ಬ್ಯಾಂಕಿಗಿದೆ. ಸಾಲ ವಸೂಲಾತಿ ಏಜೆಂಟರೆಂದು ಗೂಂಡಾಪಡೆಯನ್ನು ಬಾಡಿಗೆಗೆ ಪಡೆದುಕೊಳ್ಳುವ ಬ್ಯಾಂಕು ಗ್ರಾಹಕರನ್ನು ಹೆದರಿಸಿ, ಬೆದರಿಸಿ ಕೆಲವೊಮ್ಮೆ ಹಲ್ಲೆ ಮಾಡಿ ಸಾಲ ವಸೂಲಿ ಮಾಡುತ್ತದೆ. ದೆಹಲಿ ಗ್ರಾಹಕ ಆಯೋಗವು ಇತ್ತೀಚೆಗೆ ನವೆಂಬರ್ ತಿಂಗಳಿನಲ್ಲಿ ಐಸಿಐಸಿಐ ಬ್ಯಾಂಕ್‌ನಿಂದ ಕಾರು ಖರೀದಿಯ ಸಾಲ ಪಡೆದಿದ್ದ ವ್ಯಕ್ತಿ ಹೂಡಿದ್ದ ದಾವೆಯನ್ನು ಇತ್ಯರ್ಥಪಡಿಸುವಾಗ ಬ್ಯಾಂಕಿನ ವಸೂಲಾತಿ ಏಜೆಂಟರು ವ್ಯಕ್ತಿಯಿಂದ ಕಾರನ್ನು ಜಪ್ತಿ ಮಾಡಿದ್ದಲ್ಲದೆ ಮನ ಬಂದಂತೆ ಥಳಿಸಿದ್ದನ್ನು ತೀವ್ರವಾಗಿ ಟೀಕಿಸಿದೆ. ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ಧಿಕ್ಕರಿಸಿದ ಐಸಿಐಸಿಐ ಬ್ಯಾಂಕಿನ ಈ ವರ್ತನೆ ಸಮರ್ಥನೀಯವಲ್ಲ ಎಂದು ಬ್ಯಾಂಕಿಗೆ 50 ಲಕ್ಷ ರೂ.ಗಳ ದಂಡ ವಿಧಿಸಿದೆ. ದೈಹಿಕವಾಗಿ ಹಲ್ಲೆಗೊಳಗಾದ ಗ್ರಾಹಕರಿಗೆ 5 ಲಕ್ಷ ರೂ.ಗಳ ಪರಿಹಾರವನ್ನು ನೀಡಬೇಕೆಂದು ಆಯೋಗ ಆದೇಶಿಸಿದೆ.

ರೈತ ಸಂಘಗಳು ವಹಿಸಬೇಕಾದ ಪಾತ್ರ :

ಸರ್ಕಾರಿ ಬ್ಯಾಂಕುಗಳು ಕೃಷಿ ಚಟುವಟಿಕೆಗೆ ನೀಡುವ ಸಾಲದ ಪ್ರಮಾಣವನ್ನು ಹೆಚ್ಚಿಸುವಂತೆ, ಸಾಲ ಮಂಜೂರಾತಿಯನ್ನು ಸರಳೀಕರಿಸುವಂತೆ ಹೋರಾಟಗಳ ಮೂಲಕ ಒತ್ತಡ ಹೇರಬೇಕಿದೆ. ಈಗ ಬೇಕಾಗಿರುವುದು ಸಾವು ಸಂಭವಿಸಿದ ಕುಟುಂಬಗಳಿಗೆ ಪರಿಹಾರ ಮಾತ್ರವೇ ಅಲ್ಲ. ರೈತರ ಸಾವನ್ನು ತಡೆಯುವುದು ರೈತಸಂಘಗಳ ಹೋರಾಟದ ಕಾರ್ಯಸೂಚಿಯ ಮೊದಲ ಅಂಶವಾಗಬೇಕು. ಜಾಗತೀಕರಣದ ಸ್ಪಷ್ಟ ಕಣ್ಣೋಟದೊಂದಿಗೆ ವಿಶಾಲ ಜನಸಮುದಾಯಗಳ ಐಕ್ಯ ಚಳುವಳಿಗೆ ಮುಂದಾಗಬೇಕು.

ದೇಶದಾದ್ಯಂತ ಸಂಭವಿಸಿದ, ಸಂಭವಿಸುತ್ತಿರುವ ಲಕ್ಷಾಂತರ ರೈತರ ಆತ್ಮಹತ್ಯೆಗಳು ಬಹುತೇಕವಾಗಿ ಖಾಸಗಿ ಸಾಲವನ್ನು ತೀರಿಸದೇ ಹೋಗಿದ್ದರಿಂದ ಘಟಿಸಿದ ಅನಾಹುತಗಳು. ಆರ್ಥಿಕ ಉದಾರೀಕರಣದಿಂದಾಗಿ ಜಾರಿ ಗೊಳಿಸಲಾದ ಬ್ಯಾಂಕಿಂಗ್ ಕ್ಷೇತ್ರದ ಸುಧಾರಣೆಗಳು ಯಾವುದೇ ಬದ್ಧತೆಗಳಿಂದ ಹೊರತಾಗಿವೆ. ಕೃಷಿಯ ಬೆಳವಣಿಗೆಗೆ ಪೂರಕವಾಗಿ ಆರ್ಥಿಕ ಸಂಪನ್ಮೂಲವನ್ನು ಒದಗಿಸುವ ತಮ್ಮ ಆದ್ಯತಾ ಜವಾಬ್ದಾರಿಯಿಂದ ವಿಮುಖವಾಗಿರುವ ಸರ್ಕಾರಿ ಬ್ಯಾಂಕುಗಳು ನಗರಗಳತ್ತ, ಮಧ್ಯಮ ವರ್ಗದವರತ್ತ ಮುಖಮಾಡಿವೆ. ಐಶಾರಾಮಿ ವಸ್ತುಗಳ ಖರೀದಿಗೆ ಸಾಲವನ್ನು ನೀಡಿ ಗ್ರಾಹಕರನ್ನು ಸಂಪಾದಿಸುವ ಮೂಲಕ ಖಾಸಗಿ ಬಂಡವಾಳಿಗರು ಉತ್ಪಾದಿಸುವ ಸರಕುಗಳಿಗೆ ಮಾರುಕಟ್ಟೆ ಸೃಷ್ಟಿಸಿಕೊಡುವ ಏಜೆನ್ಸಿಗಳಂತೆ ಬ್ಯಾಂಕುಗಳು ಇಂದು ವ್ಯವಹರಿಸುತ್ತಿವೆ.

ಒಂದೆಡೆ ಆರ್ಥಿಕ ಸುಧಾರಣಾ ಕ್ರಮಗಳು ಸರ್ಕಾರಿ ಬ್ಯಾಂಕು, ಹಣಕಾಸು ಸಂಸ್ಥೆಗಳನ್ನು ನಿಯಂತ್ರಿಸುತ್ತಿದ್ದರೆ ಐಸಿಐಸಿಐನಂತಹ ಖಾಸಗಿ ಬ್ಯಾಂಕುಗಳು ಆಕ್ರಮಣಕಾರಿಯಾಗಿ ಮುನ್ನುಗ್ಗುತ್ತಿವೆ. ಸಣ್ಣಪುಟ್ಟ ಖಾಸಗಿ ಬ್ಯಾಂಕುಗಳನ್ನು ಖರೀದಿಸುತ್ತ (ನುಂಗುತ್ತಾ) ತಮ್ಮ ವ್ಯಾಪ್ತಿಯನ್ನು ವಿಸ್ತರಿಸಿಕೊಳ್ಳುತ್ತವೆ. ಐಸಿಐಸಿಐ ಬ್ಯಾಂಕಿನ ಉದಾಹರಣೆಯನ್ನು ನೋಡಿ ಇದು ಶುದ್ಧ ಖಾಸಗೀ ಬ್ಯಾಂಕು. ಇಂದು ದೇಶದ ಎರಡನೇ ಅತೀ ದೊಡ್ಡ ಬ್ಯಾಂಕ್. ಅದರ ಆಸ್ತಿಯ ಮೊತ್ತ 79 ಬಿಲಿಯನ್ ಡಾಲರ್‌ಗಳು. ಮಾರ್ಚ್ 2007ರಲ್ಲಿ ಬ್ಯಾಂಕ್ ದಾಖಲಿಸಿದ ಲಾಭ ಅದೂ ತೆರಿಗೆ ಪಾವತಿಯ ನಂತರ 31.10 ಬಿಲಿಯನ್ ಡಾಲರ್. ಹದಿನೇಳು ದೇಶಗಳೂ ಸೇರಿದಂತೆ 950 ಶಾಖೆಗಳನ್ನು ಬ್ಯಾಂಕ್ ಹೊಂದಿದೆ. ಬ್ಯಾಂಕಿನ ಅಮೇರಿಕನ್ ಠೇವಣಿ ರಶೀದಿ (ಎಡಿಆರ್)ಗಳು ನ್ಯೂಯಾರ್ಕ್‌ನ ಶೇರು ವಿನಿಮಯ ಕೇಂದ್ರದಲ್ಲಿ ನಮೂದಾಗಿವೆ.



ಸಕ್ಕರೆ ತಂತ್ರಜ್ಞಾನ - 2

ಕಾಕಂಬಿಯಿಂದ ಮಧ್ಯಸಾರ (ಆಲ್ಕೋಹಾಲ್) ತಯಾರಿಕೆ

ಸಕ್ಕರೆ ಕಾರ್ಖಾನೆಯಿಂದ ಉತ್ಪನ್ನವಾಗುವ ಉಪ ಉತ್ಪನ್ನಗಳಿಂದ ಹಲವಾರು ಇತರೆ ಉತ್ಪನ್ನಗಳನ್ನು ತಯಾರಿಸಬಹುದು. ಉದಾಹರಣೆಗೆ ಕಬ್ಬಿನ ಸಿಪ್ಪೆಯಿಂದ ಕಾಗದ, ಕಾರ್ಡ್‌ಬೋರ್ಡ್, ಇತ್ಯಾದಿ. ಕಾಕಂಬಿಯಿಂದ ಮದ್ಯಸಾರ, ಅದರ ತ್ಯಾಜ್ಯ ನೀರಿನಿಂದ ಬಯೋಗ್ಯಾಸ್, ವಿದ್ಯುತ್ ಇತ್ಯಾದಿ.

ಕಾಕಂಬಿಯಿಂದ ಮದ್ಯಸಾರ

ಸಕ್ಕರೆ ಕಾರ್ಖಾನೆಯಿಂದ ಉಪ ಉತ್ಪನ್ನವಾಗಿ ಬರುವ ಕಾಕಂಬಿಯಲ್ಲಿ ಅಧಿಕ ಸಕ್ಕರೆ ಅಂಶವಿರುತ್ತದೆ. ಏಕೆಂದರೆ ಕಬ್ಬಿನ ರಸದಿಂದ ಸಕ್ಕರೆಯನ್ನು ಬೇರ್ಪಡಿಸಿದ್ದರೂ ಪೂರ್ಣಪ್ರಮಾಣದಲ್ಲಿ ಸಕ್ಕರೆಯನ್ನು ಶೋಧಿಸಲಾಗುವುದಿಲ್ಲ. ಕಾಕಂಬಿಯಲ್ಲಿ ಉಳಿದಿರುವ ಸಕ್ಕರೆ ಅಂಶವನ್ನು 'ಕಡಿತಗೊಂಡ ಸಕ್ಕರೆ' (ಟೋಟಲ್ ರೆಡ್ಯುಸ್ಡ್ ಷುಗರ್) ಎಂದು ಕರೆಯಲಾಗುತ್ತದೆ. ಸಕ್ಕರೆ ಕಾರ್ಖಾನೆಯಿಂದ ಉತ್ಪನ್ನವಾಗುವ ಕಾಕಂಬಿಯನ್ನು ಡಿಸ್ಟಿಲರಿ ಕಾರ್ಖಾನೆಗಳಿಗೆ ಸರಬರಾಜು ಮಾಡಲಾಗುತ್ತದೆ. ಕಾಕಂಬಿಯನ್ನು ಕಚ್ಚಾ ವಸ್ತುವನ್ನಾಗಿ ಉಪಯೋಗಿಸಿಕೊಂಡು ಮದ್ಯಸಾರ (ಆಲ್ಕೋಹಾಲ್) ತಯಾರಿಸುವ ಕಾರ್ಖಾನೆಗಳಿಗೆ ಡಿಸ್ಟಿಲರಿ ಕಾರ್ಖಾನೆಗಳೆಂದು ಕರೆಯಲಾಗುತ್ತದೆ.

ಡಿಸ್ಟಿಲರಿ ಕಾರ್ಖಾನೆಯ ವಿಧಗಳು:

ಡಿಸ್ಟಿಲರಿಯಲ್ಲಿ ಎರಡು ವಿಧಗಳು: ನೇರವಾಗಿ ಕಾಕಂಬಿಯನ್ನು ಉಪಯೋಗಿಸಿಕೊಂಡು ಕೇವಲ ಮದ್ಯಸಾರ ಅಥವಾ ಶುದ್ದ ಮದ್ಯಸಾರ (ರೆಕ್ಟಿಫೈಡ್ ಸ್ಪಿರಿಟ್)ವನ್ನು ಮಾತ್ರ ತಯಾರಿಸುವ ಕಾರ್ಖಾನೆಗಳಿಗೆ 'ಪ್ರಾಥಮಿಕ ಡಿಸ್ಟಿಲರಿ' (ಪ್ರೈಮರಿ) ಎಂದೂ, ಪ್ರಾಥಮಿಕ ಡಿಸ್ಟಿಲರಿ ಕಾರ್ಖಾನೆಗಳು ಉತ್ಪಾದಿಸುವ ಶುದ್ದ ಮದ್ಯಸಾರವನ್ನು ಬಳಸಿಕೊಂಡು ರಮ್, ಬಿಯರ್, ಜಿನ್, ವಿಸ್ಕಿ, ಬ್ರಾಂದಿ, ಇತ್ಯಾದಿಯಂತಹ ಅನೇಕ ಪಾನೀಯಗಳನ್ನು ಉತ್ಪಾದಿಸುವ ಕಾರ್ಖಾನೆಗಳಿಗೆ 'ದ್ವಿತೀಯ ಡಿಸ್ಟಿಲರಿ' (ಸೆಕೆಂಡರಿ) ಎಂದೂ ಕರೆಯಲಾಗುತ್ತದೆ. ಶುದ್ದ ಮದ್ಯಸಾರವನ್ನು ನಿಗದಿತ ಶೇಕಡಾವಾರು ಪ್ರಮಾಣದಲ್ಲಿ ಬ್ಲೆಂಡ್ ಮಾಡಿ ಸೆಕೆಂಡರಿ ಡಿಸ್ಟಿಲರಿಗಳಲ್ಲಿ ವಿವಿಧ ಪಾನೀಯಗಳನ್ನು ತಯಾರಿಸಲಾಗುತ್ತದೆ.

ಮದ್ಯಸಾರ ತಯಾರಿಕೆ

ಈ ಕಾಕಂಬಿಯನ್ನು 'ಫರ್ಮೆಂಟೇಷನ್' ಪ್ರಕ್ರಿಯೆಯ ಮೂಲಕ 'ಈಸ್ಟ್' ಎಂಬ ಸೂಕ್ಷ್ಮ ಜೀವಿಗಳ ಸಹಾಯದಿಂದ ಮದ್ಯಸಾರವನ್ನಾಗಿ ಪರಿವರ್ತಿಸಲಾಗುತ್ತದೆ. ದೊಡ್ಡ ದೊಡ್ಡ ಟ್ಯಾಂಕರ್‌ಗಳಲ್ಲಿ ಕಾಕಂಬಿಗೆ ಈಸ್ಟ್‌ನ್ನು ಸೇರಿಸಿ ಎರಡು ಮೂರು ದಿನಗಳ ಕಾಲ ತಂಗಲು ಬಿಟ್ಟಾಗ ಈ ಸೂಕ್ಷ್ಮ ಜೀವಿಗಳು ಇದನ್ನು ಮದ್ಯಸಾರವಾಗಿ ಪರಿವರ್ತಿಸುತ್ತವೆ. ಈ ಪ್ರಕ್ರಿಯೆಯನ್ನು 'ಫರ್ಮೆಂಟೇಷನ್' ಎಂದು ಕರೆಯಲಾಗುತ್ತದೆ.

ನಂತರದಲ್ಲಿ ಫರ್ಮೆಂಟೇಷನ್ ಪ್ರಕ್ರಿಯೆಗೊಳಪಟ್ಟ ಈ ಪರಿವರ್ತಿತ ಮದ್ಯಸಾರವನ್ನು ಕಾಕಂಬಿಯಿಂದ ಬೇರ್ಪಡಿಸಲು 'ಡಿಸ್ಟಿಲೇಷನ್' (ಬಾಷ್ಪೀಕರಣ) ಪ್ರಕ್ರಿಯೆಯನ್ನು ಬಳಸಲಾಗುತ್ತದೆ. ಇದರಲ್ಲಿ ಹೆಚ್ಚಿನ ಉಷ್ಣಾಂಶವಿರುವ ಬಿಸಿ ಹವೆಯನ್ನು ದೊಡ್ಡ ದೊಡ್ಡ ಡಿಸ್ಟಿಲೇಷನ್ ಕಾಲಮ್‌ಗಳಿಗೆ ಕೆಳಗಿನಿಂದ ಹಾಯಿಸಲಾಗುತ್ತದೆ. ಮತ್ತೊಂದೆಡೆಯಿಂದ ಫರ್ಮೆಂಟೇಷನ್ ಟ್ಯಾಂಕರ್‌ನಿಂದ ಹೊರಬರುವ ಕಾಕಂಬಿ ಮಿಶ್ರಿತ-ಪರಿವರ್ತಿತ ಮದ್ಯಸಾರವನ್ನು ಹಾಯಿಸಲಾಗುತ್ತದೆ. ಅಧಿಕ ಉಷ್ಣಾಂಶದಿಂದಾಗಿ ಮದ್ಯಸಾರವು ಬಾಷ್ಪೀಕರಣಗೊಂಡು ಆವಿಯಾಗುತ್ತದೆ. ಹೀಗೆ ಆವಿಯಾಗಿ ಮೇಲೇರುವ ಮದ್ಯಸಾರವನ್ನು 'ವೇಪರೈಜರ್' (ಬಿಸಿ ಆವಿಯ ಹನಿಗಳನ್ನು ಸಂಗ್ರಹಿಸುವ ಕಡಿಮೆ ಉಷ್ಣಾಂಶದ ಉಪಕರಣ) ನಿಂದ ಸಂಗ್ರಹಿಸಲಾಗುತ್ತದೆ.

ಡಿಸ್ಟಿಲರಿಯಿಂದ ಪರಿಸರ ಮಾಲಿನ್ಯ

ಮದ್ಯಸಾರವು ಕಾಕಂಬಿಯಿಂದ ಹೀಗೆ ಬೇರ್ಪಡೆಯಾದ ನಂತರ ಡಿಸ್ಟಿಲೇಷನ್ ಕಾಲಮ್‌ಗಳ ತಳದಲ್ಲಿ ಹಾಗೆಯೇ ಉಳಿದುಕೊಳ್ಳುವ ತ್ಯಾಜ್ಯವೇ ಕಲುಷಿತ ತ್ಯಾಜ್ಯ ನೀರು - ಸ್ಪೆಂಟ್ ವಾಷ್ ನೀರು. ಪ್ರತಿ ಲೀಟರ್ ಮದ್ಯ ತಯಾರಿಕೆಯಿಂದ 12 ಲೀಟರ್‌ನಷ್ಟು ಅಧಿಕ ರಾಸಾಯನಿಕಗಳನ್ನು ಒಳಗೊಂಡ ತ್ಯಾಜ್ಯ ನೀರು ಬಿಡುಗಡೆಯಾಗುತ್ತದೆ. ಈ ತ್ಯಾಜ್ಯ ನೀರಿನ ಸಂಸ್ಕರಣೆ ಮತ್ತು ಬಳಕೆಯೇ ಪ್ರಾಥಮಿಕ ಡಿಸ್ಟಿಲರಿಗಳು ಎದುರಿಸುತ್ತಿರುವ ಪ್ರಮುಖ ಸವಾಲೂ ಆಗಿದೆ. ಈ ತ್ಯಾಜ್ಯವು ಅಪಾಯಕಾರಿಯಾಗಿದ್ದು, ಅಂತರ್ಜಲವನ್ನು ಕಲುಷಿತಗೊಳಿಸುತ್ತದೆ. ರಾಜ್ಯದ ಹಲವಾರು ಡಿಸ್ಟಿಲರಿ ಕಾರ್ಖಾನೆಗಳು ಇರುವೆಡೆಯಲ್ಲೆಲ್ಲ ಅಂತರ್ಜಲ ಕಲುಷಿತಗೊಂಡು ಬೋರ್‌ವೆಲ್ ನೀರನ್ನೇ ಕೆಂಪಾಗಿಸಿದೆ. ಸೆಕೆಂಡರಿ ಡಿಸ್ಟಿಲರಿಗಳು ಕಡಿಮೆ ರಾಸಾಯನಿಕವಿರುವ ತ್ಯಾಜ್ಯ ನೀರನ್ನು ಹರಿಯಬಿಡುವುದರಿಂದ ಅಲ್ಲಿ ಇದು ಪ್ರಮುಖ ಸಮಸ್ಯೆಯೆನಿಸುವುದಿಲ್ಲ.

ಡಿಸ್ಟಿಲರಿಯಲ್ಲಿ ಜೈವಿಕ (ಬಯೋಗ್ಯಾಸ್) ಮತ್ತು ವಿದ್ಯುತ್ ತಯಾರಿಕೆ

ಸ್ಪೆಂಟ್ ವಾಷ್ ತ್ಯಾಜ್ಯ ನೀರಿನಲ್ಲಿ ಅತ್ಯಧಿಕ ಮಟ್ಟದ ರಾಸಾಯನಿಕಗಳಿರುವುದರಿಂದ, ಈ ಸ್ಪೆಂಟ್ ವಾಷ್ ತ್ಯಾಜ್ಯ ನೀರನ್ನು ಬಳಸಿಕೊಂಡು 'ಡೈಜೆಸ್ಟರ್' ಎಂಬ ರಿಯಾಕ್ಟರ್‌ಗಳ ಮೂಲಕ ಮಿಥೇನ್ ಅನಿಲ ಅಥವಾ ಬಯೋಗ್ಯಾಸ್ ತಯಾರಿಸಲಾಗುತ್ತದೆ. ಇದು ಕಸದಿಂದ ರಸ ತೆಗೆಯುವುದಕ್ಕೆ ಒಂದು ಉದಾಹರಣೆ. ಈ ಬಯೋಗ್ಯಾಸ್‌ನ್ನು ಉರುವಲಾಗಿ ಬಳಸಿಕೊಂಡು ಬಾಯ್ಲರ್‌ಗಳಲ್ಲಿ ನೀರನ್ನು ಕುದಿಸಿ ಅದರ ಹಬೆಯಿಂದ ಟರ್ಬೈನುಗಳನ್ನು ಚಾಲನೆ ಮಾಡಲಾಗುತ್ತದೆ. ಇದರಿಂದ ವಿದ್ಯುಚ್ಛಕ್ತಿಯನ್ನು ತಯಾರಿಸಲಾಗುತ್ತದೆ. ಹಾಗಾಗಿ ಸಕ್ಕರೆ ಕಾರ್ಖಾನೆಯಲ್ಲಿ ಡಿಸ್ಟಿಲರಿ ಘಟಕ, ಬಯೋಗ್ಯಾಸ್ ಘಟಕ, ಮತ್ತು ಕೋ-ಜನರೇಷನ್ ವಿದ್ಯುಚ್ಛಕ್ತಿ ಘಟಕ ಇವೆಲ್ಲವೂ ಇದ್ದು ಅದೊಂದು ಸಮಗ್ರ ಕೈಗಾರಿಕೆಯಾಗಿ ರೂಪುಗೊಂಡಿದೆ.

ಬಯೋಕಾಂಪೋಸ್ಟಿಂಗ್:

ಆದರೂ ಮಿಥೇನ್ ಅನಿಲವನ್ನು ಸ್ಪೆಂಟ್ ವಾಷ್ ತ್ಯಾಜ್ಯ ನೀರಿನಿಂದ ಶೋಧಿಸಿದ ನಂತರ ಉಳಿಯುವ ಕಲುಷಿತ ನೀರನ್ನು ಸಂಸ್ಕರಿಸುವುದು ಅತಿ ವೆಚ್ಚದಾಯಕವೆನಿಸಿದೆ. ಸಕ್ಕರೆ ಕಾರ್ಖಾನೆಯಿಂದ ಉತ್ಪತ್ತಿಯಾಗುವ ಪ್ರೆಸ್ ಮಡ್ ಮತ್ತು ಡಿಸ್ಟಿಲರಿಯಿಂದ ಉತ್ಪತ್ತಿಯಾಗುವ ಈ ಸ್ಪೆಂಟ್ ವಾಷ್ ತ್ಯಾಜ್ಯವನ್ನು ಮಿಶ್ರಣ ಮಾಡಿ ಅದನ್ನು ಬಯೋಕಾಂಪೋಸ್ಟಿಂಗ್ ಗೊಬ್ಬರವೆಂದು ಬಹುತೇಕ ಡಿಸ್ಟಿಲರಿಗಳು ಮಾರಾಟ ಮಾಡುತ್ತಿವೆ. ಇದರಿಂದ ಕಲುಷಿತ ತ್ಯಾಜ್ಯವನ್ನು ಸುಲಭವಾಗಿ ಕಡಿಮೆ ವೆಚ್ಚದಲ್ಲಿ ಬಿಸಾಡಬಹುದು. ಆದರೆ, ಇದು ಅತ್ಯಂತ ಸುಲಭ ವಿಧಾನವಾದರೂ ಡಿಸ್ಟಿಲರಿ ಕೈಗಾರಿಕೆಯ ಬಯೋಕಾಂಪೋಸ್ಟಿಂಗ್ ಗೊಬ್ಬರವು ಇನ್ನೂ ಕೂಡ ಕೃಷಿ ಯೋಗ್ಯವೆಂದು ವೈಜ್ಞಾನಿಕವಾಗಿ ಸಾಬೀತಾಗಿಲ್ಲ. ಸರಿಯಾಗಿ ಹದವಾಡದ ಬಯೋಕಾಂಪೋಸ್ಟಿಂಗ್‌ನಲ್ಲಿರುವ ಅತ್ಯಂತ ಸಣ್ಣಕಣಗಳು ಮಣ್ಣಿನಲ್ಲಿ ಗಾಳಿಯ ಉಸಿರಾಟಕ್ಕಿರುವ ಸಣ್ಣ ಸಣ್ಣ ರಂಧ್ರಗಳನ್ನು ಮುಚ್ಚಿಬಿಡುತ್ತವೆ. ಇದರಿಂದ ಮಣ್ಣಿನ ಫಲವತ್ತತೆ ಕುಂಠಿತಗೊಳ್ಳುತ್ತದೆ. ಅತ್ಯಂತ ಕಲುಷಿತವಾದ ತ್ಯಾಜ್ಯ ನೀರನ್ನು ಇತರೆ ವಿಧಾನಗಳಿಂದ ಇನ್ನಷ್ಟು ಸಂಸ್ಕರಣೆ ಮಾಡಿ ಹೊರಬಿಡುವುದು ಡಿಸ್ಟಿಲರಿ ಕಾರ್ಖಾನೆಗಳ ಜವಾಬ್ದಾರಿಯಾಗಿದೆ.



ರೈತರಿಗೆ ಅರೆಬರೆ ಬೆಲೆ ಮಾತ್ರ

ರೈತರು ಬೆಳೆದ ಉತ್ಪನ್ನಗಳ ಬೆನ್ನತ್ತಿ ಹೋದರೆ ಅವರ ಶ್ರಮಕ್ಕೆ ಅರೆಬರೆ ಬೆಲೆ ಮಾತ್ರ ದೊರೆಯುತ್ತದೆ ಎಂಬುದು ಸ್ಪಷ್ಟವಾಗಿ ಗೊತ್ತಾಗುತ್ತದೆ. ಗ್ರಾಹಕರು ಹೆಚ್ಚಿನ ಬೆಲೆಯನ್ನೇ ತೆರುತ್ತಾರೆ. ರೈತನಿಗೆ ಸಿಗುವುದು ಅರೆಬರೆ ಬೆಲೆಯಾದರೆ ಉಳಿದದ್ದು ಎಲ್ಲಿ ಹೋಗುತ್ತದೆ ಎಂಬುದು ಪ್ರಶ್ನೆ.

ಚೆನ್ನೈನ ಮಲ್ಟಿ ಕಮೊಡಿಟಿ ಎಕ್ಸ್‌ಚೇಂಜ್ (ಎಂ.ಸಿ.ಎಕ್ಸ್) ನಡೆಸಿದ ಸಮೀಕ್ಷೆಯ ಪ್ರಕಾರ ಮಧ್ಯವರ್ತಿಗಳೇ ಗ್ರಾಹಕರು ನೀಡುವ ಬೆಲೆಯ ಬಹುಪಾಲನ್ನು ತಿಂದುಹಾಕುತ್ತಾರೆ. ಈ ಮಧ್ಯವರ್ತಿಗಳು ಸರಕಿಗೆ ಮೌಲ್ಯವೃದ್ಧಿ ಮಾಡುವುದು ಬಹಳ ಕಡಿಮೆ. ಈ ಸಂಸ್ಥೆ ಕಳೆದ ವರ್ಷದ ಆಗಸ್ಟ್‌ನಲ್ಲಿ ನಡೆಸಿದ ಅಧ್ಯಯನದ ಪ್ರಕಾರ ರೈತ ಬೆಳೆದ ಬೆಳೆ ಗ್ರಾಹಕನಿಗೆ ಸೇರುವ ಮೊದಲು ಐದು ಮಧ್ಯವರ್ತಿಗಳಿಗೆ ಹೋಗುತ್ತದೆ. ಈ ಐದು ಮಧ್ಯವರ್ತಿಗಳಲ್ಲಿ ಇಬ್ಬರು ಮಾತ್ರ ಮೌಲ್ಯವೃದ್ಧಿಯ ಕೆಲಸ (ಅಂದರೆ ಕಾಳು ಒಡೆದು ಬೇಳೆ ಮಾಡುವುದು, ಸಂಸ್ಕರಣೆ ಇತ್ಯಾದಿ) ಮಾಡುತ್ತಾರೆ. ಇನ್ನುಳಿದವರು ನಿಜವಾದ ಅರ್ಥದಲ್ಲಿ ಬರೀ ಮಧ್ಯವರ್ತಿಗಳು.

ಈ ಸಂಸ್ಥೆ ಕಡಲೆಕಾಳು, ಉದ್ದು ಮತ್ತು ತೊಗರಿ ಬೇಳೆಗಳ ಬೆನ್ನತ್ತಿ ಹೋಗಿ ಅಧ್ಯಯನ ಮಾಡಿದೆ. ಈ ಸಂಸ್ಥೆಯ ಪ್ರಕಾರ ಕೃಷಿ ಉತ್ಪನ್ನಗಳ ಮಾರಾಟದ ವಿಷಯದಲ್ಲಿ ಬಹಳ ಕಡಿಮೆ ಮಾಹಿತಿ ಲಭ್ಯವಿದೆ. ಆದ್ದರಿಂದ ಎಲ್ಲ ಬೆಳೆಗಳ ವಿಷಯದಲ್ಲಿ ಮಾಹಿತಿಗಳು ಇರುವುದಿಲ್ಲ.

ಈ ಅಧ್ಯಯನದ ಪ್ರಕಾರ ಮಧ್ಯವರ್ತಿಗಳು ಶೇ.38ರಿಂದ ಶೇ.67ರಷ್ಟನ್ನು ತಿಂದುಹಾಕುತ್ತಾರೆ. ರೈತನ ಹೊಲದಿಂದ ಮುಂಬೈ ಮಾರುಕಟ್ಟೆಗೆ ಹೋಗಿ ಅಲ್ಲಿಂದ ಗ್ರಾಹಕನ ಕೈಗೆ ಬೇಳೆ ಸೇರುವವರೆಗಿನ ಪ್ರಕ್ರಿಯೆಯನ್ನು ಅಧ್ಯಯನ ಮಾಡಿದ ಈ ಸಂಸ್ಥೆ ಮಾಹಿತಿಯ ಕೊರತೆಯಿಂದಾಗಿ ರೈತರಿಗೆ ಹೆಚ್ಚಿನ ಬೆಲೆ ದೊರೆಯುವುದಿಲ್ಲ ಎಂದಿದೆ.

ಅಂದಿನ ಬೆಲೆಗಳ ಪ್ರಕಾರ ಕಡಲೆಕಾಳಿಗೆ ಕ್ವಿಂಟಾಲ್‌ಗೆ ರೈತನಿಗೆ 2250 ರೂಪಾಯಿಗಳು ದೊರೆತರೆ ಮುಂಬೈ ಮಾರುಕಟ್ಟೆಯಲ್ಲಿ ಅದು 3800 ರೂಪಾಯಿಗಳಿಗೆ ಮಾರಾಟವಾಗುತ್ತಿತ್ತು. ಮಾಲ್‌ಗಳು ಪ್ಯಾಕೇಜಿಂಗ್ ಮಾಡಿ ಹೆಚ್ಚಿನ ಬೆಲೆಗೆ ಮಾರುವುದನ್ನು ಸಂಸ್ಥೆ ಗಣನೆಗೆ ತೆಗೆದುಕೊಂಡಿಲ್ಲ.

ಈ ಅಧ್ಯಯನವನ್ನು ಭವಿಷ್ಯತ್ ವ್ಯಾಪಾರ(Future trading) ವನ್ನು ಕೇಂದ್ರ ಸರ್ಕಾರ ನಿಷೇಧಿಸಿದ್ದ ಸಂದರ್ಭದಲ್ಲಿ ನಡೆಸಲಾಗಿತ್ತು. ಅಂದರೆ ಭವಿಷ್ಯತ್ ವ್ಯಾಪಾರ ಇರುವಾಗ ಅಧ್ಯಯನ ನಡೆಸಿದರೆ ಇರುವ ಪರಿಸ್ಥಿತಿ ಇದಕ್ಕಿಂತ ಗಂಭೀರವಾಗಿಯೇ ಇರುತ್ತದಲ್ಲವೆ? ಕಡಲೆಕಾಳು, ಉದ್ದು, ತೊಗರಿ ಬೇಗ ಕೊಳೆತು ಹಾಳಾಗುವಂತಹವಲ್ಲ. ತರಕಾರಿ, ಹಣ್ಣು ಇತ್ಯಾದಿಗಳು ಬೇಗ ಕೊಳೆತು ಹಾಳಾಗುತ್ತವೆ. ಈ ಬೆಳೆಗಳ ಅಧ್ಯಯನ ನಡೆಸಿದರೆ ಎಂತಹ ಚಿತ್ರಣ ಸಿಗಬಹುದು? ಇದನ್ನು ನಾವು ಊಹಿಸಿಕೊಳ್ಳಬೇಕು.

ದೇಶದಲ್ಲೆಡೆ ರೈತರು ಆತ್ಮಹತ್ಯೆ ಮಾಡಿಕೊಳ್ಳುವುದರ ಒಂದು ಕಾರಣ ಇಲ್ಲೇ ಅಡಗಿದೆಯಲ್ಲವೇ?

ಈಗ ರೈತನ ಉತ್ಪನ್ನಗಳ ಮಾರಾಟಕ್ಕೆ ಕಂಪನಿಗಳನ್ನು ಬಿಡಲಾಗಿದೆ. ಇದರ ಘೋರ ಪರಿಣಾಮಗಳನ್ನು ಇನ್ನೂ ರೈತರು ಕಾಣಬೇಕಾಗಿದೆ ಅಲ್ಲವೇ?

ಕೋಷ್ಠಕ

(ರೂಪಾಯಿಗಳಲ್ಲಿ)

	ಕಡಲೆಕಾಳು	ಉದ್ದು	ತೊಗರಿ
ಗ್ರಾಹಕರ ಬೆಲೆ	3800	5600	3200
ರೈತರ ಬೆಲೆ	2250	3000	1600
ಮಾರಾಟದ ವೆಚ್ಚ	1550	2600	1600
ಸಂಸ್ಕರಣ ವೆಚ್ಚ	440	488	630
ಸಾಗಾಣಿಕೆ ವೆಚ್ಚ	145	145	145
ತೆರಿಗೆಗಳು	93.25	31.38	34
ಮಧ್ಯವರ್ತಿಗಳು	10	9.8	10
ನಿವ್ವಳ	861.75	1925.77	800
ಅ) ಮೊದಲ ಮಧ್ಯವರ್ತಿ	159.55	228.9	212
ಆ) ವ್ಯಾಪಾರಿ	120	670	175
ಇ) ಏಜೆಂಟ್	45	97.87	58
ಈ) ಸಗಟು ವ್ಯಾಪಾರಿಯ ಲಾಭ	443.4	628.63	153.65
ಉ) ಚಿಲ್ಲರೆ ವ್ಯಾಪಾರಿಯ ಲಾಭ	100	300	200

JANASHAKTHI KANNADA VARA PATRIKE JAN. 06, 2008 Price : Rs. 5/- No. KARKAN /2006/17926 Postal Reg. No. RNP/KA/BGS/2078/2007-09

'ತಾರೆ ಜಮೀನ್ ಪರ್' ಎಂಬ ವಿಭಿನ್ನ ಚಿತ್ರ



ಇತ್ತೀಚೆಗೆ ಬಾಲಿವುಡ್ ಸೇರಿದಂತೆ ಭಾರತೀಯ ಚಿತ್ರಗಳು ತೀರಾ ಹದಗೆಟ್ಟಿವೆ. ಎಲ್ಲ ಚಿತ್ರ ನಿರ್ಮಾಪಕರು, ನಿರ್ದೇಶಕರು ಚಿತ್ರ ಗೆಲ್ಲಿಸಲು ಸರಳ ವ್ಯಾಪಾರಿ ಸೂತ್ರಗಳನ್ನು ಅನುಸರಿಸುತ್ತಿರುವುದು ಸಾಮಾನ್ಯ. ದುರದೃಷ್ಟವೆಂದರೆ ಅಸಹ್ಯ ಪಾತ್ರಗಳು ಅಶ್ಲೀಲ ಸಂಭಾಷಣೆ, ಕ್ಯಾಬರೆ, ಮಾದಕ ನೃತ್ಯ, ನಾಯಕಿಯರ ಅಂಗಪ್ರದರ್ಶನ ಮತ್ತು ಹಿಂಸೆ ಪ್ರೇರಿಪಿಸುವ ಹೊಡೆದಾಟ, ಬಡಿದಾಟ ಇಂತಹ ಚಿತ್ರಗಳು ಸಮಾಜಕ್ಕೆ ಯಾವುದೇ ಆರೋಗ್ಯಕರ ಸಂದೇಶ ನೀಡುವಲ್ಲಿ ವಿಫಲವಾಗುತ್ತವೆ.


ಆದರೆ ಇತ್ತೀಚೆಗೆ ತೆರೆಕಂಡ 'ತಾರೇ ಜಮೀನ್ ಪರ್' ಚಿತ್ರ ಈ ಎಲ್ಲ ಮಸಾಲೆ ಚಿತ್ರಗಳಿಗಿಂತ ಭಿನ್ನವಾಗಿ ನಿಲ್ಲುತ್ತದೆ.

ಸಾಮಾನ್ಯವಾಗಿ ಮಕ್ಕಳ ಚಿತ್ರ ಅಂದರೆ ಮೂಗು ಮುರಿಯುವವರೇ ಹೆಚ್ಚು. ಆದರೆ ಅದನ್ನು ಸಮಾಜದ ಎಲ್ಲಾ ವರ್ಗಕ್ಕೂ ಮೆಚ್ಚುಗೆ ಆಗುವಂತೆ ನೀಡುವ ಒಂದು ಶ್ಲಾಘನೀಯ ಪ್ರಯತ್ನವೇ ತಾರೇ ಜಮೀನ್ ಪರ್. ಲಗಾನ್, ರಂಗ್ ದೇ ಬಸಂತಿಯಂತಹ ಅಮೋಘ ಚಿತ್ರಗಳನ್ನು ನೀಡಿದ ಆಮೀರ್ ಖಾನ್ ನಿರ್ಮಾಣದ ಈ ಚಿತ್ರ ಹಲವು ದೃಷ್ಟಿಯಲ್ಲಿ ಸ್ವಾಗತಾರ್ಹ ಪ್ರಯತ್ನ.

ಚಿತ್ರದ ಕಥಾ ಸಾರಾಂಶ : ಚಿತ್ರದ ಕೇಂದ್ರ ಬಿಂದು ಇಶಾನ್. ಭೂಮಿ ಮೇಲಿನ ಎಷ್ಟೋ ಪುಟ್ಟ ನಕ್ಷತ್ರಗಳಂತೆ ಇಶಾನ್ ಒಂದು ತಾರೆ. ಮಧ್ಯಮ ವರ್ಗದ ಕುಟುಂಬವೊಂದರ ಬಾಲಕ. ಅಣ್ಣನಿಗಿಂತ ಕಲಿಕೆಯಲ್ಲಿ, ಪಠ್ಯೇತರ ಚಟುವಟಿಕೆಯಲ್ಲಿ ಸ್ವಲ್ಪ ಹಿಂದೆ. ಅಣ್ಣ ಓದಿನಲ್ಲಿ ಮುಂದೆ. ಜೊತೆಗೆ ಪಠ್ಯೇತರ ಚಟುವಟಿಕೆಯಲ್ಲಿ (ಟೆನ್ನಿಸ್) ಪ್ರತಿಭೆ ಸಾಬೀತುಪಡಿಸಿದಾತ.

ಅಕ್ಷರಗಳ ಕಲಿಕೆಯಲ್ಲಿ ಗೊಂದಲ ಹುಟ್ಟಿಸಿಕೊಂಡ ಇಶಾನ್, ಆ ಕಾರಣಕ್ಕಾಗಿ ಪುಸ್ತಕ ಅಂದರೆ ಬೆಚ್ಚಿಬೀಳುತ್ತಾನೆ. ತನ್ನದೇ ವಿಸ್ಮಯಗಳ ಲೋಕದಲ್ಲಿ ಸ್ವಚ್ಛಂದವಾಗಿ ತೇಲಾಡುವ ಈತ ತರಗತಿಯಲ್ಲೂ ಎಲ್ಲರಿಂದ ನಿರ್ಲಕ್ಷ್ಯಕ್ಕೆ ಒಳಗಾಗುತ್ತಾನೆ. ವಠಾರದಲ್ಲೂ ಶಾಲೆಯಲ್ಲೂ ಹೀಗೆ ಎಲ್ಲ ಕಡೆಗಳಿಂದಲೂ ದೂರಿನ ಸುರಿಮಳೆ. ಇದರಿಂದ ಕಂಗೆಟ್ಟ ಈಶಾನ್ ಪಾಲಕರು, ಆತನನ್ನು ಬೋರ್ಡಿಂಗ್ ಶಾಲೆಯೊಂದಕ್ಕೆ ಸೇರಿಸುತ್ತಾರೆ. ಅಲ್ಲೂ ಆತನ ವಿಚಿತ್ರ ನಡವಳಿಕೆ ಮುಂದುವರಿಯುತ್ತದೆ.

ಆಕಸ್ಮಿಕವಾಗಿ ಅಲ್ಲಿಗೆ ತಾತ್ಕಾಲಿಕ ಶಿಕ್ಷಕನಾಗಿ ಬರುವ 'ರಾಮ್‌ಶಂಕರ್ ನಿಕುಮ್' ಇಶಾನ್‌ನ ಜೀವನವನ್ನೇ ಬದಲಿಸುತ್ತಾನೆ. ಇಶಾನ್‌ನ ನಡವಳಿಕೆ, ಅದರ ಹಿಂದಿರುವ ಸಂಗತಿ ಬಗ್ಗೆ ಆಳ ಅಧ್ಯಯನ ನಡೆಸುವ ನಿಕುಮ್, ತನ್ನ ವಿಭಿನ್ನ ಕಲಿಕಾ ಶೈಲಿ ಮೂಲಕ ಎಲ್ಲರ ಮನಗೆಲ್ಲುತ್ತಾನೆ.



ತನ್ನ ಬಾಲ್ಯದ ಒಂದು ಸಮಸ್ಯೆಯಿಂದ ಬಳಲಿದ್ದ ನಿಕುಮ್, ಅದೇ ಸಮಸ್ಯೆಯಿಂದ ಬಳಲುವ ಇಶಾನ್‌ಗೆ ಪರಿಹಾರದ ದಾರಿ ತೋರಿಸುತ್ತಾನೆ. ಮಕ್ಕಳೊಂದಿಗೆ ಮಗುವಾಗಿ ನಲಿಯುತ್ತಾನೆ. ಕುಣಿಯುತ್ತಾನೆ.

ಅಕ್ಷರ ಗುರುತಿಸಲೂ ಪೇಚಾಡುತ್ತಿದ್ದ ಇಶಾನ್‌ನೊಳಗಿನ ಸುಪ್ತ ಪ್ರತಿಭೆಯನ್ನು ಅರಳಿಸುವಲ್ಲಿ ನಿಕುಮ್ ಯಶಸ್ವಿಯಾಗುತ್ತಾನೆ. ಎಲ್ಲರ ಉಪೇಕ್ಷೆಗೆ ಒಳಗಾಗಿದ್ದ, ಎಲ್ಲರಿಂದಲೂ ದೂರವಾಗಿದ್ದ ಇಶಾನ್ ಶಾಲೆಯ ಕಣ್ಮಣಿಯಾಗಿ ಬದಲಾಗುತ್ತಾನೆ.

ಇಡೀ ಚಿತ್ರದಲ್ಲಿ ಗಮನಿಸಬೇಕಾದ ಅಂಶ ಅಂದರೆ, ಈಗಿನ ಶಿಕ್ಷಣ ಪದ್ಧತಿ ಹಾಗೂ ಸಂತಸ ಕಲಿಕೆ (Joy of Learning). ಭಾರತ ಜ್ಞಾನ ವಿಜ್ಞಾನ ಸಮಿತಿಯ ಸಂತಸ ಕಲಿಕೆ, ಚಿಣ್ಣರ ಮೇಳಗಳೇ ಇದಕ್ಕೆ ಮಾದರಿ ಎಂಬಂತಿದೆ ತಾರೇ ಜಮೀನ್ ಪರ್.

ಆರಂಭದಿಂದ ಅಂತ್ಯದವರೆಗೆ ನೋಡಿಸಿಕೊಂಡು ಹೋಗುವ ಈ ಚಿತ್ರ, ಬಿಗಿ ನಿರ್ದೇಶನ, ಪರಿಣಾಮಕಾರಿ ಪಾತ್ರಗಳಿಂದ ಗಮನ ಸೆಳೆಯುತ್ತದೆ. ಶಿಕ್ಷಣವನ್ನು ಮುಗ್ಧ ಮಕ್ಕಳ ತಲೆಗೆ ಹೇರುವುದನ್ನು ಪರಿಣಾಮಕಾರಿಯಾಗಿ ಹೇಳುವ ಈ ಚಿತ್ರ ಸಂತಸ ಕಲಿಕೆಯ ಮೂಲಕ ಹೇಗೆ ಮಕ್ಕಳನ್ನು ಗೆಲ್ಲಬಹುದು ಎಂದು ತೋರಿಸಿಕೊಡುತ್ತದೆ.

ಯಾವುದೇ ಮಸಾಲೆ, ದ್ವಂದ್ವಾರ್ಥದ ಸಂಭಾಷಣೆ, ಅಶ್ಲೀಲತೆ ಇಲ್ಲದ ಈ ಚಿತ್ರವನ್ನು ಎಲ್ಲ ಮಕ್ಕಳ ಪಾಲಕರು, ಶಿಕ್ಷಕರು ಕಡ್ಡಾಯವಾಗಿ ನೋಡಲೇಬೇಕು. ○

ಕಿರು ತೆರೆ ಎತ್ತ ಸಾಗುತ್ತಿದೆ

ಕಿರುತೆರೆ ಈಗ ದಾರಿ ತಪ್ಪಿದೆ. ಕೀಳು ಅಭಿರುಚಿಯ ಮನರಂಜನೆಯನ್ನು ಪ್ರಭಾವಿ ಚಾನೆಲ್‌ಗಳು ಹೇರುತ್ತಿವೆ. ಇದಕ್ಕೆ ಇತ್ತೀಚಿನ ಸ್ಟಾರ್‌ಪ್ಲಸ್, ರಾಖಿ ಸಾವಂತ್ ವಿವಾದವೇ ಸಾಕ್ಷಿ. ಈ ಚಾನೆಲ್‌ನ 'ನಾಚ್ ಬಲಿಯೇ' ಎನ್ನುವುದು ಒಂದು ರಿಯಾಲಿಟಿ ಶೋ. ಈ ರಿಯಾಲಿಟಿ ಶೋನ ಅಂತಿಮ ಸುತ್ತಿನಲ್ಲಿ (ಕು)ಖ್ಯಾತ ನಟಿ ರಾಖಿ ಸಾವಂತ್ ಪರಾಭವಗೊಂಡಿದ್ದಳು.

ಇದು ಉದ್ದೇಶಪೂರ್ವಕ ಕೃತ್ಯ, ತನ್ನನ್ನು ಸೋಲಿಸಲು ಸ್ಟಾರ್‌ಪ್ಲಸ್ ಚಾನೆಲ್ ನಡೆಸಿದ ವ್ಯವಸ್ಥಿತ ತಂತ್ರ ಇದು ಎಂದು ರಾಖಿ ಸಾವಂತ್ ದೂರಿದ್ದಾಳೆ.

ಅಂದರೆ, ವೀಕ್ಷಕರ ಮೆಚ್ಚುಗೆ ಗಳಿಸಲು ಎಂಥ ಕೀಳು ಮಟ್ಟಕ್ಕೆ ಚಾನೆಲ್‌ಗಳು ಇಳಿಯುತ್ತವೆ ಎಂಬುದಕ್ಕೆ ಇದು ಉತ್ತಮ ಉದಾಹರಣೆ.

ಸ್ಟಾರ್‌ಪ್ಲಸ್ ಚಾನೆಲ್ ಧಾರವಾಹಿಗಳಲ್ಲಿ ನಟಿಸುವವರನ್ನು ಜಯಗಳಿಸುವಂತೆ ಈ ರಿಯಾಲಿಟಿ ಶೋ ತಂತ್ರ ನಡೆಸಿದೆ ಎಂಬುದು ರಾಖಿ ಆರೋಪ. ಏನೇ ಇರಲಿ ಇದು ರಿಯಾಲಿಟಿ ಶೋ ಮತ್ತು ಜನಪ್ರಿಯತೆ ಹಿಂದೆ ಬಿದ್ದಿರುವ ಚಾನೆಲ್‌ಗಳ ನಿಜ ಬಣ್ಣ ಬಯಲು ಮಾಡಿದೆ.

ಡಿಸೆಂಬರ್ 31ರ ರಾತ್ರಿ ಕಾರ್ಯಕ್ರಮ

ಪ್ರತಿ ವರ್ಷ ಡಿಸೆಂಬರ್ 31ರ ರಾತ್ರಿ ಕಿರುತೆರೆಗಳು ಪ್ರೇಕ್ಷಕರನ್ನು ಹಿಡಿದಿಡಲು ಇನ್ನಿಲ್ಲದ ಸಾಹಸ ಮಾಡುತ್ತವೆ. ಕಳೆದ ವರ್ಷ ಚಾನೆಲೊಂದು ಮಲ್ಲಿಕಾ ಶರಾವತ್‌ಳ ಅಸಹ್ಯ ನೃತ್ಯವನ್ನು ಪ್ರದರ್ಶಿಸಿತ್ತು. ಇದು ವಿವಾದ ಎಬ್ಬಿಸಿ ಕೋರ್ಟ್ ಮೆಟ್ಟಿಲನ್ನೂ ಏರಿತ್ತು.

ಈ ಬಾರಿ ಇಂತಹ ಕಾರ್ಯಕ್ರಮಗಳ ಆಲೋಚನೆಯಲ್ಲಿ ಚಾನೆಲ್‌ಗಳು ಸ್ಪರ್ಧೆ ನಡೆಸಿವೆ. ಒಂದು ಚಾನೆಲ್ ಬಿಪಾಶಾಳನ್ನು ಆಯ್ಕೆ ಮಾಡಿದ್ದರೆ, ಮತ್ತೊಂದು ಚಾನೆಲ್ ರಾಖಿ ಸಾವಂತ್, ಅಭಿಷೇಕ್‌ನ ನೃತ್ಯವನ್ನು ಆಯೋಜಿಸಿದೆ.

ಪ್ರೇಕ್ಷಕರ ಅಭಿಪ್ರಾಯ

ಪ್ರೇಕ್ಷಕರು ಇಂತಹ ಕಾರ್ಯಕ್ರಮಗಳನ್ನು ಅನಿವಾರ್ಯವಾಗಿ ಒಪ್ಪಿಕೊಳ್ಳಬೇಕಾದ ಸಂದರ್ಭ ಒದಗಿಬಂದಿದೆ. ಡಿಸೆಂಬರ್ 27ರಂದು ಹಿಂದೂ ಪತ್ರಿಕೆಗೆ ಕಿರುತೆರೆ ವೀಕ್ಷಕರೊಬ್ಬರು ಪತ್ರ ಬರೆದರು. ಆ ಪತ್ರದ ಸಾರಾಂಶ ಇಲ್ಲಿದೆ.

ಮನರಂಜನೆ ಹೆಸರಿನಲ್ಲಿ ಕೀಳು ಅಭಿರುಚಿಯ ಕಾರ್ಯಕ್ರಮಗಳನ್ನು ಒಪ್ಪಿಕೊಳ್ಳಬೇಕಾದ ಅನಿವಾರ್ಯತೆ ಎದುರಾಗಿದೆ. ಅಹಿತಕರ ಭೋಜನವನ್ನು ಅನಿವಾರ್ಯವಾಗಿ ಊಟ ಮಾಡುವಂತೆ ನಮಗೆ ಭಾಸವಾಗುತ್ತದೆ. ಅಂತ್ಯ ಕಾಣದ ಧಾರವಾಹಿಗಳನ್ನು ವೀಕ್ಷಿಸುವುದು ಕಿರುತೆರೆ ವೀಕ್ಷಕರಿಗೆ ತಪ್ಪದ ಕರ್ಮ. ಅತ್ತೆ, ಸೊಸೆ ಜಗಳ, ಕುಟುಂಬದೊಳಗಿನ ದ್ವೇಷ ಅಸೂಯೆ ಇಂತಹ ವಿಷಯಗಳನ್ನು ಬಂಡವಾಳ ವಾಗಿಟ್ಟುಕೊಂಡ ಧಾರವಾಹಿಗಳೂ ಕನಿಷ್ಠ ಸಾಮಾನ್ಯ ಜ್ಞಾನವನ್ನು ಮೀರಿಸುವ ಚಿತ್ರಣವನ್ನು ನೀಡುತ್ತದೆ. ಸಮಾಜದ ನೈತಿಕ ಸ್ಥೈರ್ಯವನ್ನು ಇಂತಹ ಕಾರ್ಯಕ್ರಮಗಳು ಅಡಗಿಸುತ್ತವೆ.

ರಿಯಾಲಿಟಿ ಶೋ ತಾರಾಸಮರದ ಹೆಸರಲ್ಲಿ ನಡೆಯುವ ಸ್ಪರ್ಧೆಗಳು ಅವರ ವೃತ್ತಿ ಬದುಕಿನಲ್ಲಿ ಮೆಟ್ಟಿಲಾಗುವಂತೆ ನೋಡಿಕೊಳ್ಳಲಾಗುತ್ತದ. ಒಟ್ಟಿನಲ್ಲಿ ಇದೆಲ್ಲಾ ಲಾಭ ಮಾಡುವ ಕಾರ್ಯಕ್ರಮಗಳಾಗಿ ಮಾರ್ಪಾಡಾಗಿದೆ.

ಇದಕ್ಕಿಂತ ಭಿನ್ನವಾದ ಸಕಾರಾತ್ಮಕ ಕಾರ್ಯಕ್ರಮಗಳನ್ನು, ಸೃಜನಶೀಲ, ವೈಚಾರಿಕ ವಸ್ತುನಿಷ್ಠ ಕಾರ್ಯಕ್ರಮಗಳನ್ನು ನೀಡುವತ್ತ ಟಿ.ವಿ.ಚಾನೆಲ್‌ಗಳು ದಿಟ್ಟ ಹೆಜ್ಜೆ ಇಡಬೇಕಾಗಿದೆ.

– ಹಂಸಿನಿ

ನಗುತಿದೆ

ನಗುತಿದೆ
ಬರಿಯ
ನಾಕಾಣೆಗೆ
ಹಳೆಯ
ಚಪ್ಪಲಿಗೆ
ಹೊಸ ಮೊಳೆ
ಜಡಿದು
ಬಣ್ಣಹಚ್ಚಿ
ಪಾಲಿಷ್ ಮಾಡಿ,
ಎಂಟಾಣೆ
ನಗೆ-ನಕ್ಕು
ಮನೆ ಮಂದಿಯ
ಕುಶಲ ವಿಚಾರಿಸುವ
ನಮ್ಮೂರ ಚಮ್ಮಾರ
ಊರಪ್ಪನ
ಎದುರಿಗೆ
ನಿಂತಿವೆ
ಡಾಲರ್ ನಗೆ
ಬೀರುವ ಕಂಪನಿಗಳು

ಎಂಟಾಣೆಗೆ
ಜರಡಿ
ಕೆಟ್ಟು ಹೋದ ಬೀಗ
ಮತ್ತದರ ಕೈ
ಹರಿದ ಛತ್ರಿ
ರಿಪೇರಿ ಮಾಡುವ
ಜೋಗೇರ
ಎಲ್ಲಪ್ಪನ
ಜೋಳಿಗೀಗ
ಜರಡಿ ತೂತು
ಅವನ ಎದುರಿಗೆ
ನಿಂತ
ಅಂಗಡಿಯಲ್ಲಿ
ಬಣ್ಣ ಬಣ್ಣದ
ಛತ್ರಿ ಹಿಡಿದು
ನಿಂತ
ಬಾಲಿವುಡ್ಡಿನ
ಬೆಡಗಿಯರು

ನಮ್ಮೂರ
ವಾಚ ರಿಪೇರಿಯ
ಗಣೇಶ
ರೇಡಿಯೊ ರಿಪೇರಿಯ
ಶೇಖರನ
ಅಂಗಡಿಯೊಳಗೆ
ನಿಂತಿವೆ
ಮಲ್ಟಿಕಲರಿನ
ಮಲ್ಟಿ ನ್ಯಾಷನಲ್
ಕಂಪನಿಗಳು

ದರ್ಜಿಯವನ
ಎದುರಿಗೇ
ನಿಂತಿವೆ
ರೆಡಿಮೆಡ್ ಶಾಪ್‌ಗಳು
ಅಲ್ಲೇ
ಬೇವಿನ ಮರದಡಿ
ಕುಳಿತು
ಬೆಳದಿಂಗಳ
ಮೊಸರ ಮಾರುವ
ಮಂಗಮ್ಮನ
ನೋಡಿ
ನಗುತಿವೆ
ಖಾಸಗಿ ಮಿಲ್ಕು ಕಂಪನಿಗಳ
ಪಾಕೀಟುಗಳು

– ಬಿ.ಶ್ರೀನಿವಾಸ,
ಹಾವೇರಿ

JANASHAKTHI KANNADA VARA PATRIKE : Printed by G.N.NAGARAJ, No 12. 18th Cross, S.R.Nagar, BANGALORE-560027 Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at: Kriya Prakashana, 12. 18th Cross, S.R.Nagar, BANGALORE - 560 027 Karnataka (State) and Published at BANGALORE No 12. 18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027
Editor: S.Y.GURUSHANTH